ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಾವಳಿ

# ಸಮುದ್ರಮಥನ

(ರಹಸ್ಯಾರ್ಥದೊಡನೆ)

ಬರೆದವರು :
**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

ಕ್ರಮಾಂಕ. 33

**ಅಧ್ಯಾತ್ಮಪ್ರಕಾಶಕಾರ್ಯಾಲಯ**
ಹೊಳೆನರಸೀಪುರ - 573211
✆ : 08175-273820

**2005**

# ಮುನ್ನುಡಿ

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ತಮ್ಮ ಪೂರ್ವಾಶ್ರಮದಲ್ಲಿ (ವೈ. ಸುಬ್ಬರಾವ್) ಅಧ್ಯಾತ್ಮ ಪ್ರಕಾಶ ಕಾರ್ಯಾಲಯವನ್ನು 1920ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸಿ, ಕಾರ್ಯಾಲಯದಿಂದ ಪ್ರಕಟವಾಗುತ್ತಿದ್ದ **ಅಧ್ಯಾತ್ಮ ಪ್ರಕಾಶ** ಮಾಸಪತ್ರಿಕೆಯಲ್ಲಿ ಈ ಪುಸ್ತಕದ ವಿಷಯಗಳನ್ನು ನೀತಿರೂಪವಾದ ಕಥೆಯ ಮೂಲಕ ಲೇಖನಗಳನ್ನು ಪ್ರಕಟಿಸಿದ್ದರು. ತರುವಾಯ ಲೇಖನಗಳನ್ನೆಲ್ಲಾ ಸಂಕಲಿಸಿ ಪುಸ್ತಕ ರೂಪದಲ್ಲಿ 1928ರಲ್ಲಿ ಮೊದಲನೆಯ ಬಾರಿಗೆ ಪ್ರಕಾಶನಗೊಂಡಿತು.

ಶ್ರೀಶ್ರೀಗಳವರು ಬರೆದಿದ್ದ ಈ ಚಿಕ್ಕ ಹೊತ್ತಿಗೆಯಲ್ಲಿ ಬಗೆಬಗೆಯ ನೀತಿಯ ಮತ್ತು ಅಧ್ಯಾತ್ಮದ ವಿಷಯಗಳು ಅಡಕವಾಗಿದ್ದದ್ದರಿಂದ, ಬಹುಜನಪ್ರಿಯವಾಗಿದ್ದು 1953 ಮತ್ತು 1986ರಲ್ಲಿ ಕ್ರಮವಾಗಿ ಎರಡನೆಯ ಮತ್ತು ಮೂರನೆಯ ಬಾರಿಗೆ ಮುದ್ರಣಗೊಂಡವು.

ಶ್ರೀಶ್ರೀಗಳವರ ಗ್ರಂಥಗಳು ಯಾವಾಗಲೂ ವಾಚಕರಿಗೆ ದೊರಕಬೇಕೆಂಬ ಉದ್ದೇಶ್ಯದಿಂದ ಕಾರ್ಯಾಲಯವು ಪುಸ್ತಕಗಳನ್ನು ಪುನರ್ಮುದ್ರಣ ಮಾಡುತ್ತಾ ಇದೆ. ಅದೇ ರೀತಿ ಪ್ರತಿಗಳೆಲ್ಲಾ ಮಾರಾಟವಾಗಿ ಬಿಟ್ಟಿದ್ದರಿಂದ, ತಪ್ಪುಗಳನ್ನೆಲ್ಲಾ ತಿದ್ದಿ **ನಾಲ್ಕನೆಯ** ಬಾರಿಗೆ ಮತ್ತೆ ಮುದ್ರಣವಾಗಿ ಪುಸ್ತಕವು ಹೊರಬರುತ್ತಿದೆ.

ಈ ಪುಸ್ತಕದ ಮುದ್ರಣಕ್ಕೆ ಬೆಂಗಳೂರಿನಲ್ಲಿರುವ ಎಸ್. ರಾಮಕೃಷ್ಣರವರು 800ರೂ.ಗಳ ಧನಸಹಾಯ ಮಾಡಿರುತ್ತಾರೆ. ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳು

ಎಂದಿನಂತೆ ವಾಚಕರು ಈ ಪುಸ್ತಕವನ್ನು ಆದರದಿಂದ ಬರಮಾಡಿಕೊಂಡು, ಓದಿ ಸಂತಸಗೊಂಡು, ಸತತವಾಗಿ ನಡೆಯುತ್ತಿರುವ ಗ್ರಂಥ ಪ್ರಕಟನೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಪಾರ್ಥಿವ ಸಂವತ್ಸರ
ಆಷಾಢ ಬಹುಳ ತ್ರಯೋದಶಿ — **ಪ್ರಕಾಶಕರು**
ತಾ|| 2-8-2005

# ವಿಷಯ ತರಂಗಿಣಿ


| ತರಂಗ | ವಿಷಯ | ಪುಟ |
|---|---|---|
| ೧. | ಮೇರುಪರ್ವತದ ವರ್ಣನೆ | 1 |
| ೨. | ಬ್ರಹ್ಮಸಭೆ | 5 |
| ೩. | ಬ್ರಹ್ಮಾದಿಗಳ ಸ್ತೋತ್ರ | 10 |
| ೪. | ನಾರಾಯಣನ ಅಪ್ಪಣೆ | 17 |
| ೫. | ಸಮುದ್ರವನ್ನು ಕಡೆದದ್ದು | 23 |
| ೬. | ಕಾಮಧೇನ್ವಾದಿಗಳ ಉತ್ಪತ್ತಿ | 28 |
| ೭. | ಹಾಲಾಹಲದ ಉತ್ಪತ್ತಿ | 33 |
| ೮. | ಅಮೃತದ ಉತ್ಪತ್ತಿ | 39 |
| ೯. | ಮೋಹಿನಿಯ ಪ್ರಾದುರ್ಭಾವ | 46 |
| ೧೦. | ದೇವಾಸುರರ ಯುದ್ಧ | 53 |
| ೧೧. | ಉಪಸಂಹಾರ | 60 |

ಓಂ

# ಸಮುದ್ರಮಥನ

## ಒಂದನೆಯ ತರಂಗ

### (ಮೇರುಪರ್ವತದ ವರ್ಣನೆ)

''ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥ ''

ಪರಮಪಾವನನಾದ ನಾರಾಯಣಭಗವಂತನನ್ನೂ ನರೋತ್ತಮನಾದ ನರಋಷಿಯನ್ನೂ ತತ್ತ್ವಾರ್ಥಗಳನ್ನೆಲ್ಲ ಬೆಳಗಿ ತೋರಿಸುವ ಸರಸ್ವತೀ ದೇವಿಯನ್ನೂ ನಮಸ್ಕರಿಸಿ ಜಯಸಂಜ್ಞಕವಾದ ಪುರಾಣಾಖ್ಯಾನವನ್ನು ಹೇಳತಕ್ಕದ್ದು -ಎಂಬ ಅಭಿಯುಕ್ತವಚನವನ್ನು ಅನುಸರಿಸಿ ಈ ದಿವ್ಯಾಖ್ಯಾನವನ್ನು ಪ್ರಾರಂಭಿಸಿರುವೆನು. ಭಕ್ತಿಶ್ರದ್ಧಾದಿಗಳಿಂದ ಕೂಡಿದ ಪ್ರಿಯವಾಚಕರೆಲ್ಲರೂ ಅನುಗ್ರಹಪೂರ್ವಕವಾಗಿ ಚಿತ್ತವಿಟ್ಟು ಲಾಲಿಸಬೇಕು.

ಈಗಿನ ಕಾಲದಲ್ಲಿ ಹೊಸಹೊಸ ಕಾದಂಬರಿಗಳೆಂದು ಬರೆದು ಗುಡ್ಡದಂತೆ ರಾಶಿಹಾಕಿರುವ ಕಾವ್ಯಜಾತಗಳ ಜತೆಗೆ ಈ ಹಳೆಯ ಪುರಾಣದ ಕಥೆಯೇಕೆಂದು ಯಾರೂ ಬೇಸರಪಡುವ ಕೆಲಸವಿಲ್ಲ. ಏಕೆಂದರೆ ಪುರಾಣವೆಂಬ ಶಬ್ದವು ನೋಡುವುದಕ್ಕೆ ಹಳೆಯದಾಗಿದ್ದರೂ ಪುರಾಣಗಳಲ್ಲಿರುವ ಎಷ್ಟೋ ವಿಷಯಗಳು ನಮಗೆ ಹೊಸದಾಗಿಯೇ ಇರುವವು. ಈಚೀಚೆಗೆ ಪುರಾಣಗಳನ್ನು ಹೇಳಿಸುವುದೂ ಓದಿಸುವದೂ ಕಡಿಮೆಯಾಗುತ್ತಾ ಬಂದದ್ದಲ್ಲದೆ ಪಾಠಶಾಲೆಗಳಲ್ಲಿಯೂ ಪುರಾಣಪ್ರಧಾನವಾದ ಕಥೆಗಳುಳ್ಳ ಪಾಠಗಳೂ ವಿರಳವಾಗುತ್ತಾ ಬಂದಿರುವವು. ದೇಶದೇಶಾಂತರಗಳ ಪ್ರಾಚೀನಚರಿತ್ರೆಯ ಪುಸ್ತಕಗಳನ್ನೋದಿ, ನಿಜವಾಗಿ ಈ ಭೂಮಿಯಲ್ಲಿ ವಾಸಮಾಡಿಕೊಂಡಿದ್ದರೊ, ಇಲ್ಲವೋ ಎಂದು ಸಂದೇಹಾಸ್ಪದವಾಗಿರುವಂಥವರ ಹೆಸರುಗಳನ್ನು ಕೂಡ ಕಂಠಪಾಠಮಾಡಿರುವ ನಮ್ಮ ಎಷ್ಟೋ ಜನ ಯುವಕರಿಗೆ ಅಂಬರೀಷ, ಯೌವನಾಶ್ವ, ನಹುಷ, ಪೃಥು, ಭರತ, ಜನಕ, ನಳ, ಹರಿಶ್ಚಂದ್ರ, ಯುಧಿಷ್ಠಿರ- ಮುಂತಾದ ರಾಜರುಗಳ ಹೆಸರುಗಳೂ ; ವಸಿಷ್ಠ, ವಿಶ್ವಾಮಿತ್ರ, ಜಮದಗ್ನಿ, ಕಶ್ಯಪ, ಅತ್ರಿ, ಭರದ್ವಾಜ, ಗೌತಮ- ಮುಂತಾದ ಋಷಿಗಳ

ಹೆಸರುಗಳೂ ಸ್ವಪ್ನದಲ್ಲಿ ಕೇಳಿದ ಹೆಸರುಗಳಾಗುತ್ತಿರುವವು. ಈ ಹೆಸರುಗಳು ಕಲ್ಪಿತಪುರುಷರ ನಾಮಧೇಯವಾಗಿರಲಿ, ನಿಜವಾಗಿದ್ದವರ ನಾಮಧೇಯ ವಾಗಿರಲಿ, ಇವು ಪವಿತ್ರವಾದ ನಮ್ಮ ಭರತಖಂಡದ ಸಂಸ್ಕೃತಿಯನ್ನು ಮನಗಾಣಿಸುವ ಉಪಾಖ್ಯಾನಗಳಿಂದೊಡಗೂಡಿ ನಮ್ಮ ನಾಡಿಗಳನ್ನು ಉದ್ಬೋಧಗೊಳಿಸುವದಕ್ಕೆ ತಕ್ಕ ಹೆಸರುಗಳಾಗಿರುವವೆಂಬುದಕ್ಕೆ ಯಾವ ಸಂದೇಹವೂ ಇರುವದಿಲ್ಲ. ''ಪುರಾಣಗಳ ಕಥೆಗಳನ್ನು ನಾವು ಕೇಳಿಕೇಳಿ ಬೇಸರವಾಗಿರುವುದರಿಂದ ಇನ್ನು ನಿಮ್ಮ ಪುರಾಣಗಳನ್ನು ಕಟ್ಟಿರಿ'' ಎನ್ನುವ ಕಾಲವು ಹೋಗಿ, ''ನಾವೂ ಒಂದಿಷ್ಟು ಕೇಳೋಣ, ಈ ಪುರಾಣ ವನ್ನೊಂದಿಷ್ಟು ಬಿಚ್ಚಿರಿ'' ಎನ್ನುವ ಕಾಲವು ಬಂದಿರುತ್ತದೆ.

ಇದು ಮಾತ್ರವೇ ಅಲ್ಲ; ಪುರಾಣಗಳು ಹೊಸದಾಗಿ ಹುರುಪೇರಿಸಿ ಕೇಳುವುದಕ್ಕೆ ತಕ್ಕ ಕಥೆಗಳೆಂಬುದಕ್ಕೆ ಮುಖ್ಯ ಕಾರಣವೊಂದುಂಟು. ಅದೇನೆಂದರೆ ನೋಡುವುದಕ್ಕೆ ಕಲ್ಪಿತಕಥೆಗಳಂತೆ ಕಂಡರೂ ಸುಮ್ಮನೆ ಕಾಗಕ್ಕ ಗುಬ್ಬಕ್ಕನ ಕಥೆಗಳನ್ನು ಹೇಳಿ ಮುಗಿಸುವದೇ ಪುರಾಣಗಳ ಉದ್ದೇಶವಲ್ಲ.

**ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್।**
**ಬಿಭೇತ್ಯಲ್ಪಶ್ರುತಾದ್ವೇದೋ ಮಾಮಯಂ ಪ್ರಹರಿಷ್ಯತಿ ॥**

(ಇತಿಹಾಸಗಳಿಂದಲೂ ಪುರಾಣಗಳಿಂದಲೂ ವೇದಾರ್ಥವನ್ನು ವಿಸ್ತರಿಸಿ ತಿಳಿಯಬೇಕಾಗಿರುವದು. ಸರಿಯಾಗಿ ಶ್ರವಣಮಾಡದೆ ಇರುವಾತನನ್ನು ಕಂಡರೆ ವೇದವು ನನ್ನನ್ನು ಈತನು ಎಲ್ಲಿ ತಿರಿಚಿಹಾಕುವನೋ ಎಂದು ಹೆದರುತ್ತಿರುವದು) ಎಂದು ದೊಡ್ಡವರು ಹೇಳುವರು. ಪುರಾಣಗಳು ವೇದದ ವ್ಯಾಖ್ಯಾನಗಳಾಗಿರವವು. ಮಹಾಮಹಾಸಭೆಯಲ್ಲಿ ಒಂದೊಂದು ವಿಷಯವನ್ನು ಕುರಿತು ವ್ಯಾಖ್ಯಾನಮಾಡುವಂಥವರು ಬೇಕಾದ ದೃಷ್ಟಾಂತಗಳು, ಕಥೆಗಳು-ಮುಂತಾದ ಉಪಾಯಗಳಿಂದ ಹೇಗೆ ಮನೋರಂಜಕವಾದ ಪರಿಯಲ್ಲಿ ವಿಷಯಪ್ರತಿಪಾದನೆಯನ್ನು ಮಾಡುವರೋ, ಹಾಗೆ ಶ್ರೀಕೃಷ್ಣದ್ವೈಪಾಯನ ವ್ಯಾಸರು ಪುರಾಣಾದಿಗಳ ರೂಪದಲ್ಲಿ ವೇದಾರ್ಥವನ್ನು ನಾನಾರೂಪದಲ್ಲಿ ವರ್ಣಿಸಿ ಉಪಕಾರವನ್ನು ಮಾಡಿರುವರು. ವೇದವು ವರ್ಣಿಸಿರುವ ತತ್ತ್ವವು ಹೇಗೆ ಅನಾದಿಕಾಲದಿಂದಿರುತ್ತಿದ್ದರೂ ಈಗಲೂ ನಮಗೆ ಹೊಸದಾಗಿಯೇ ಇರುವದೋ ಹಾಗೆ ಅದೇ ಅರ್ಥವನ್ನು ಹೇಳುವ ಪುರಾಣಗಳ ವಿಷಯವೂ ಹೊಸದೇ ಆಗಿರುವದು. ನಿಜವಾಗಿ ನೋಡಿದರೆ ಪುರಾಣವೆಂಬುದು

ಪರಮಾತ್ಮನ ಹೆಸರು. 'ಅಜೋ ನಿತ್ಯಃ ಶಾಶ್ವತೋऽಯಂ ಪುರಾಣಃ' ಎಂಬ ವಚನದಲ್ಲಿ ಹೇಳಿರುವಂತೆ ಭಗವಂತನು ಎಂದೆಂದಿಗೂ ಪುರಾಣನು. 'ಪುರಾಪಿ ನವ ಏವೇತಿ ಪುರಾಣಃ' (ಪೂರ್ವದಲ್ಲಿಯೂ ಈಗಲೂ ಹೊಸಬನಾಗಿಯೇ ಇರುವನು. ಆದಕಾರಣ ಪರಮಾತ್ಮನಿಗೆ ಪುರಾಣನೆಂದು ಹೆಸರು) ಎಂದು ದೊಡ್ಡವರು ಹೇಳಿರುವರು. ಹೀಗಿರುವುದರಿಂದ ಪುರಾಣ ಪುರುಷನಾದ ಪರಮಾತ್ಮನನ್ನು ವರ್ಣಿಸುವ ಪುರಾಣಗಳೂ ಅಂಥವೇ ಎಂಬಲ್ಲಿ ಸಂದೇಹವೇನು?

ಇರಲಿ, ಆಸ್ತಿಕರಾಗಿರುವ ನಮ್ಮ ವಾಚಕರಿಗೆ ಈ ಅವತಾರಿಕೆಯೇ ಅವಶ್ಯವಿರುವುದಿಲ್ಲ. ಆದರೂ ಈಗ ನಾನು ಪ್ರಸ್ತಾಪಿಸಿರುವ ಆಖ್ಯಾನವು ಹಿಂದಿನ ಕಾಲದಲ್ಲಿ ಎಲ್ಲಿಯೋ ಆಯಿತೆಂದು ಸುಮ್ಮನೆ ಐತಿಹಾಸಿಕ ದೃಷ್ಟಿಯಿಂದ ನೋಡುವದಕ್ಕೆ ಬದಲು ಈಗಲೂ ನಡೆಯುತ್ತಿರುವ ನಮ್ಮ ನಮ್ಮ ಅನುಭವ ವಿಶೇಷಗಳಿಗೆ ಸಂಬಂಧಪಟ್ಟದ್ದೆಂದು ತಿಳಿಯಬೇಕೆಂದು ವಿಜ್ಞಾಪಿಸುವುದಕ್ಕಾಗಿ ಸ್ವಲ್ಪ ಭೂಮಿಕೆಯನ್ನು ರಚಿಸಬೇಕಾಯಿತು. ಇನ್ನು ಈ ಪುಣ್ಯ ಕಥೆಯನ್ನು ಪ್ರಾರಂಭಿಸಿಬಿಡುತ್ತೇನೆ. ದಯವಿಟ್ಟು ಲಾಲಿಸಬೇಕು.

ಈ ಕಥೆಯ ಸಂವಿಧಾನವನ್ನು ತಿಳಿಯಬೇಕೆಂಬವರು ಈ ಭೂಗೋಳದ ಅತ್ಯಂತೋತ್ತರ ಪ್ರದೇಶಗಳನ್ನು ಮನಸ್ಸಿನಲ್ಲಿ ಮೊದಲು ತಂದುಕೊಳ್ಳಬೇಕು. ಆಮೇಲೆ ಬುದ್ಧಿಯನ್ನು ಇನ್ನೂ ಅದೇ ದಿಕ್ಕಿನಲ್ಲಿ ಹಾಯಿಸಿ ಹಾಯಿಸಿ ಇನ್ನಿಲ್ಲವೆನ್ನುವಷ್ಟು ಉತ್ತರಲೋಕವನ್ನು ಕಲ್ಪಿಸಿಕೊಳ್ಳ ಬೇಕು. ಅಲ್ಲಿ ಲೋಕೋತ್ತಮವಾದ ಮೇರುಪರ್ವತವಿರುವುದೆಂದು ನಮ್ಮ ಪುರಾಣಗಳಲ್ಲಿ ವರ್ಣಿತವಾಗಿರುವದು. ಆ ಮೇರುಪರ್ವತವು ಬಂಗಾರದ ಶಿಖರಗಳಿಂದ ಕೂಡಿರುವದು. ಆ ಶಿಖರಗಳ ಕಿರಣಗಳು ಸೂರ್ಯನ ಕಿರಣಗಳನ್ನು ಮಂಕುಗೊಳಿಸುವಂತಿರುವವು. ಅಲ್ಲಿ ಎಲ್ಲೆಲ್ಲಿ ನೋಡಿದರೂ ಚಿನ್ನವೇ. ನಮ್ಮಲ್ಲಿ ಎಷ್ಟೋ ಜನರು ಚಂದ್ರದ್ರೋಣಪರ್ವತವನ್ನು ನೋಡಿರುವರು, ಇನ್ನು ಕೆಲವರು ಸಹ್ಯಾದ್ರಿಯನ್ನು ಕಂಡಿರುವರು, ಮತ್ತೆ ಕೆಲವರು ಇನ್ನೂ ಕೆಲವು ಕುಲಾಚಲಗಳನ್ನು ನೋಡಿರುತ್ತಾರೆ. ಎಲ್ಲಿಯೋ ಕೆಲವರು ನಮ್ಮ ಭರತಖಂಡಕ್ಕೆ ಸುಭಿಕ್ಷದ ತವರಾಗಿರುವ ಹಿಮಾಲಯ ಪರ್ವತವನ್ನು ಕಂಡಿರುವರು. ಆದರೆ ಈಗ ನಾವು ವರ್ಣಿಸುವದಕ್ಕೆ ಹೊರಟಿರುವ ಮಹಾಪರ್ವತವಾದ ಮೇರುಪರ್ವತಕ್ಕೆ ಇವುಗಳಲ್ಲಿ

ಯಾವದೊಂದನ್ನೂ ಸರಿಹೋಲಿಸುವದಕ್ಕಿಲ್ಲ. ಪೂರ್ವದಲ್ಲಿ ಗೋರೂಪ ಧರಳಾಗಿದ್ದ ಭೂದೇವಿಯಿಂದ ಹಾಲುಕರೆಯುವಂತೆ ತಮತಮಗೆ ಬೇಕಾದ ಸಾರಪದಾರ್ಥಗಳನ್ನು ಅವರವರು ಕರೆದುಕೊಳ್ಳುತ್ತಿರಲು ಪರ್ವತಗಳೆಲ್ಲಾ ತಮಗೆ ರಾಜನಾದ ಮೇರುವನ್ನು ತಮಗೆ ಬೇಕಾದ ವಸ್ತುಗಳನ್ನು ಕರೆದುಕೊಡುವದಕ್ಕೆ ನಿಯಮಿಸಿಕೊಂಡವೆಂದು ಹೇಳುವರು. ಮೇರುಗಿರಿರಾಜನು ದೇವತಾತ್ಮನಾದ್ದರಿಂದ ಅತ್ಯಂತ ಸಾರತರವಾದ ವಸ್ತುಗಳೆಲ್ಲಾ ಆತನ ಬಹಿಃಶರೀರವಾದ ಈ ಮೇರುಪರ್ವತದಲ್ಲಿ ಕಂಡುಬರುವವು. ಅತ್ಯುನ್ನತವಾದ ಶಿಖರಗಳು, ಅತಿವಿಶಾಲವಾದ ತಪ್ಪಲು, ಅತಿಪ್ರಮಾಣವಾದ ವೃಕ್ಷಲತಾಗುಲ್ಮಗಳು- ಇವುಗಳ ತೇಜಸ್ಸೆಲ್ಲಾ ಸೇರಿ ಅದು ಒಂದು ದೊಡ್ಡ ಪ್ರಕಾಶದ ರಾಶಿಯಾಗಿರುವದು. ಅಲ್ಲಿ ಎಲ್ಲೆಲ್ಲಿ ನೋಡಿದರೂ ಸುಶೀತಲವಾಗಿ ಸ್ಫಟಿಕವನ್ನು ಹಳಿಯುವ ಸ್ವಚ್ಛವಾದ ಜಲ ಪ್ರವಾಹದ ನದಿಗಳೂ ಆ ನದಿಗಳ ಪಕ್ಕಗಳಲ್ಲಿ ಬೆಳೆದು ಚಿಗುರು ಹೂಹಣ್ಣುಗಳಿಂದ ಜಗಿಯುತ್ತಿರುವ ದೊಡ್ಡದೊಡ್ಡ ಫಲವೃಕ್ಷಗಳೂ ಆ ವೃಕ್ಷಗಳ ಕೊಂಬೆಗಳ ಮೇಲೆ ಕೂತು ಹಣ್ಣನ್ನು ಸವಿಯುತ್ತಾ ಕೇಳಿದವರ ಕಿವಿಗೆ ಇಂಪಾದ ಗಾನರಸವನ್ನು ಹೊಯ್ಯುತ್ತಿರುವ ಬಗೆಬಗೆಯ ಬಣ್ಣದ ರೆಕ್ಕೆಗಳ ಮುದ್ದುಹಕ್ಕಿಗಳೂ ಕಣ್ಮನಗಳನ್ನು ಸೆಳೆಯುತ್ತಿರುವವು. ಅಲ್ಲಲ್ಲಿರುವ ವಿಶಾಲವಾದ ನವರತ್ನಮಯವಾದ ಕಲ್ಲುಹಲಗೆಗಳಿಂದ ಬೇಕೆಂದು ಮಟ್ಟಕ್ಕೆ ಮಾಡಿಟ್ಟಿರುವಂತೆ ತೋರುತ್ತಿರುವ ಉತ್ತಮ ಪ್ರದೇಶಗಳಲ್ಲಿ ಗಂಧರ್ವರು, ಸಿದ್ಧರು, ಚಾರಣರು, ಗುಹ್ಯರು- ಮುಂತಾದ ದೇವತೆಗಳು, ಪುಷ್ಪಗಳಮೇಲೆ ಹಾದು ನದಿಗಳ ತೇವವನ್ನು ಸುಖವಾಗುವಷ್ಟು ತೆಗೆದುಕೊಂಡು ಮೆಲ್ಲಮೆಲ್ಲಗೆ ಬೀಸುತ್ತಿರುವ ವಾಯುವನ್ನು ಸೇವಿಸುತ್ತಾ ವಿಹರಿಸುತ್ತಿರುವರು. ಇದಕ್ಕಿಂತ ಸ್ವಲ್ಪ ಉನ್ನತವಾದ ಪ್ರದೇಶದಲ್ಲಿರುವ ಗುಹೆಗಳಲ್ಲಿ ಮಹರ್ಷಿಗಳು ಜಿತಶ್ವಾಸರಾಗಿ ನಾನಾವಿಧವಾದ ಆಸನಗಳನ್ನು ಹಾಕಿಕೊಂಡು ತಮ್ಮ ಇಷ್ಟದೇವತೆಯಲ್ಲಿ ನೆಟ್ಟ ಚಿತ್ತವುಳ್ಳವರಾಗಿ ಚಿತ್ರಗಳಲ್ಲಿ ಬರೆದ ಗೊಂಬೆಗಳಂತೆ ನಿಶ್ಚಲರಾಗಿ ಧ್ಯಾನ ಮಾಡುತ್ತಿರುವರು. ಆ ಪ್ರದೇಶದ ಗಾಳಿ ಬೀಸಿದರೆ ಸಾಕು, ಮನುಷ್ಯನ ರಜೋಗುಣವೆಲ್ಲ ನೀಗಿ ಸತ್ವವು ಉಕ್ಕೇರುವದು. ಪ್ರಪಂಚದ ಸಾಮಾನ್ಯ ವಿಚಾರಗಳು ಅಲ್ಲಿರುವವರ ಮನಸ್ಸಿಗೆ ಬರುವಂತೆಯೇ ಇರುವದಿಲ್ಲ. ಅಧರ್ಮವೇ ಹೆಚ್ಚಾಗಿರುವ ತಾಮಸಪ್ರಾಣಿಗಳಿಗಂತೂ ಅಲ್ಲಿ ಪ್ರವೇಶವೇ ಇಲ್ಲ; ಏಕಂದರೆ ಪರ್ವತದ ಮೇಲುಗಡೆ ಎಷ್ಟು

ರಮಣೀಯವಾಗಿ ಆಹ್ಲಾದಕರವಾಗಿ ಚಿತ್ತವನ್ನು ಪರವಶಗೊಳಿಸುವಂಥ ಸಾತ್ತ್ವಿಕಸಂನಿವೇಶವು ಇರುತ್ತಿರುವದೋ ಅದಕ್ಕಿಂತಲೂ ಹೆಚ್ಚಾಗಿ ಅದರ ಕೆಳಗಡೆಯಲ್ಲಿ ಭಯಂಕರವಾದ ನೋಟಗಳು ಸಂದೃಬ್ಧವಾಗಿರುವವು. ಆ ಪ್ರದೇಶವೆಲ್ಲ ಬಹಳಮಟ್ಟಿಗೆ ಹಿಮರಾಶಿಯಿಂದ ಕೂಡಿರುವದು. ಆ ಚಳಿಯಲ್ಲಿ ಹೋಗುವುದಕ್ಕೆ ಎಂಥ ದಿಟ್ಟರಾದರೂ ಹಿಂತೆಗೆಯುವಂತಿರುವದು. ಈ ಶೀತ ಪ್ರದೇಶದ ಸುತ್ತಲೂ ಮಹಾಮರುಭೂಮಿಯಂಥ ಬಯಲಿರುವದು. ಇದರ ಸುತ್ತಲೂ ಹಾವು, ಚೇಳು, ಹುಲಿ, ಕರಡಿ, ಸಿಂಹ, ಮದ್ದಾನೆ-ಮುಂತಾದ ಪ್ರಾಣಿಗಳಿಂದಲೂ ಭೂತಪ್ರೇತಾದಿಗಳಿಂದಲೂ ನಿಬಿಡವಾಗಿರುವ ಕಗ್ಗಾಡಿರುವದು. ಆ ಪ್ರದೇಶದಲ್ಲಿ ಯಾವಾಗಲೂ ಹಗಲುರಾತ್ರಿಗಳ ವ್ಯತ್ಯಾಸವೇ ಕಾಣದಂತೆ ಕಗ್ಗತ್ತಲೆಯೇ ಕವಿದಿರುವದರಿಂದ ಎಂಥ ಕೆಚ್ಚೆದೆಯವರಿಗೂ ಎದೆಯು ಡವಡವನೆ ಬಡಿದುಕೊಳ್ಳುವಂತಿರುವದು. ಮನುಷ್ಯಮಾತ್ರಕ್ಕೆ ಪ್ರವೇಶವಿಲ್ಲದ ಈ ಭಯಂಕರಸನ್ನಿವೇಶವು ಹೊರಗೆ ಇರುವಂತೆ ಮಾಡಿ ಒಳಗೆ ಅತಿಸೌಮ್ಯವಾಗಿ ಶಾಂತವಾಗಿ ನಿಷ್ಕಾಮರಿಗೂ ಕೂಡ ಸ್ಪೃಹಣೀಯವಾಗಿರುವಂತಿರುವ ರಮಣೀಯತಾ ವಿಶೇಷವನ್ನು ಸೃಷ್ಟಿಸಿರುವದರಲ್ಲಿ ಭಗವಂತನಿಗೇನು ಉದ್ದೇಶವಿದ್ದಿರಬಹುದು?

---

## ಎರಡನೆಯ ತರಂಗ

### (ಬ್ರಹ್ಮಸಭೆ)

ಪೂರ್ವತರಂಗದಲ್ಲಿ ವರ್ಣಿತವಾಗಿರುವ ಮೇರುಪರ್ವತದ ಶಿಖರಗಳಲ್ಲೆಲ್ಲ ಅತ್ಯುನ್ನತವಾದದ್ದೆನ್ನಿಸಿಕೊಂಡು ಸ್ವರ್ಗವನ್ನು ಕೂಡ ಮುಟ್ಟಿಕೊಂಡಿರುವ ಶುಭತರವಾದ ಕೋಡುಗಲ್ಲು ಒಂದುಂಟು. ಇದು ಲೋಕದಲ್ಲಿರುವ ಬಂಗಾರವನ್ನೆಲ್ಲ ಕಾಸಿ ಪುಟವಿಟ್ಟು ಇಟ್ಟಿಗೆಗಳನ್ನು ಮಾಡಿ ಕಟ್ಟಿರುವ ಕೋಟೆಯೋ ಎಂಬಂತೆ ಥಳಗುಟ್ಟುತ್ತ ಚಿತ್ರವಿಚಿತ್ರವಾದ ನಕಾಶೆಯ ಕೆಲಸಗಳಿಂದ ಒಪ್ಪುತ್ತಲಿರುವದು. ಪರ್ವತದ ಕೆಳಗಡೆ ಇರುವ ಸಾಧಾರಣವಾದ ದೇವತೆಗಳಿಗಾಗಲಿ ಋಷಿಗಳಿಗಾಗಲಿ ಅಗಮ್ಯವಾಗಿರುವ ಇದರ ತಲೆಯಮೇಲೆ ಪ್ರಕೃತ ಕಥಾಸಂದರ್ಭಕ್ಕೆ ಅವತಾರಿಕೆಯಾದ ಬ್ರಹ್ಮಸಭೆಯು ನಡೆದಿತ್ತು.

ಪ್ರಿಯವಾಚಕರೆ, ಈ ಭೂಮಿಯ ಒಂದು ಮೂಲೆಯಲ್ಲಿ ನೂರನೆ ಯಂಶವನ್ನು ಆಳುವ ರಾಜರುಗಳ ಸಭೆಯನ್ನು ಪ್ರವೇಶಿಸುವದೇ ನಮ್ಮಂಥ ಸಾಮಾನ್ಯರಿಗೆ ಅಶಕ್ಯವಾಗಿ ಕಾಣುತ್ತಿರುವದು. ವಿದ್ಯೆಯಿಂದಲೋ ವಿತ್ತದಿಂದಲೋ ಪರೋಪಕಾರದಿಂದಲೋ ಅಥವಾ ಮತ್ತೆ ಯಾವ ಕಾರಣದಿಂದಲೊ ಪ್ರಖ್ಯಾತಿಯನ್ನು ಪಡೆದು ಆಯಾ ರಾಜರುಗಳ ಕೃಪೆಗೆ ಪಾತ್ರರಾಗಿರುವವರಿಗಲ್ಲದೆ ಇತರರಿಗೆ ಇಂಥ ಸಣ್ಣಸಣ್ಣ ಸಭೆಗಳ ಪ್ರವೇಶವೇ ಪ್ರಯಾಸಸಾಧ್ಯವಾಗಿರುವಲ್ಲಿ ಈಗ ನಾವು ಹೇಳುತ್ತಿರುವಂಥ ಬ್ರಹ್ಮಸಭೆಯ ವಿಷಯವನ್ನು ಹೇಳತಕ್ಕದ್ದೇನು?

ಬಹುಕಾಲದವರೆಗೆ ನಿಯಮದಿಂದ ತಪಸ್ಸುಮಾಡಿದಂಥ ನಾರದಾದಿ ಮಹರ್ಷಿಗಳಿಗೆ ಆ ಸಭೆಯು ಗೋಚರವಾಗುವದಲ್ಲದೆ ಮಿಕ್ಕವರಿಗೆ ಕಣ್ಣಿಗೇ ಬೀಳುವದಿಲ್ಲ. ಮಹಾಭಾರತದಲ್ಲಿ ನಾರದರೇ ಧರ್ಮರಾಯನಿಗೆ ಆ ಸಭೆಯ ವರ್ಣನೆಯನ್ನು ಸ್ವಲ್ಪಮಟ್ಟಿಗೆ ಮಾಡಿರುವರು. ಅದರ ಮೇಲಿಂದ ನಮಗೆ ತಿಳಿಯಬರುವದೇನೆಂದರೆ ಬ್ರಹ್ಮಸಭೆಯು ಪರಮಾತ್ಮನ ಸಂಕಲ್ಪಮಾತ್ರದಿಂದ ಸೃಷ್ಟವಾಗಿರುವ ದಿವ್ಯಸಭೆಯಾದ್ದರಿಂದ ಅದು ಇಂಥ ರೂಪವಾಗಿರುವದೆಂದು ನಿರ್ಣಯಿಸಿ ಹೇಳುವದೇ ಅಶಕ್ಯವಾಗಿರುವದು. ಏಕೆಂದರೆ ಅದು ಕ್ಷಣಮಾತ್ರದಿಂದ ಬೇರೊಂದು ವಿಲಕ್ಷಣ ಸ್ವರೂಪವನ್ನು ಕೈಕೊಳ್ಳುತ್ತಿರುವದು. ಹೀಗಿರುವದರಿಂದ ಅದು ಇಷ್ಟು ಪರಿಮಾಣದ್ದೆಂದಾಗಲಿ, ಇಂಥ ರೂಪವುಳ್ಳದ್ದೆಂದಾಗಲಿ ನಾವು ಹಿಂದೆ ನೋಡಿರುವ ಇಂಥ ಸಭೆಯ ಹಾಗೆ ಇರುವದೆಂದಾಗಲಿ ಮತ್ತೊಬ್ಬರಿಗೆ ಮನದಟ್ಟಾಗುವಂತೆ ವರ್ಣಿಸುವದು ಹೇಗೆ ? ಆ ಸಭೆಯಲ್ಲಿ ಅತಿಶೀತವೂ ಇಲ್ಲ, ಅತಿಉಷ್ಣವೂ ಇಲ್ಲ; ಹಸಿವು ಬಾಯಾರಿಕೆಗಳೂ ಇಲ್ಲ. ಥಳಥಳನೆ ಹೊಳೆಯುತ್ತ ಸಾಧಾರಣರ ಕಣ್ಣಿಗೆ ಮಂಜನ್ನುಂಟುಮಾಡುತ್ತಿರುವ ರತ್ನಗಳಿಂದ ಶೋಭಿತವಾಗಿ, ವಿಸ್ತಾರವಾಗಿ , ಎಲ್ಲಿಯೂ ಕಂಬಗಳೇ ಇಲ್ಲದೆ ಸೂರ್ಯಚಂದ್ರಾಗ್ನಿಗಳನ್ನೂ ಮೀರಿದ ಮಹಾತೇಜಸ್ಸಿನಿಂದ ಪ್ರಕಾಶಿಸುತ್ತಿರುವದು. ದೇವಮಾಯಾಸಹಿತನಾದ ಸರ್ವಲೋಕಪಿತಾಮಹನಾದ ಬ್ರಹ್ಮನು ಆ ಸಭೆಯಲ್ಲಿ ಉಚ್ಚಸ್ಥಾನದಲ್ಲಿ ಒಪ್ಪುತ್ತಿರಲು ಆತನನ್ನು ದಕ್ಷನು, ಪ್ರಚೇತಸನು, ಪುಲಹನು, ಮರೀಚಿ, ಕಶ್ಯಪನು, ಭೃಗು, ಅತ್ರಿ, ವಸಿಷ್ಠನು, ಗೌತಮನು, ಅಂಗಿರಸ್ಸು , ಪುಲಸ್ತ್ಯನು, ಕ್ರತು- ಇವರೇ ಮೊದಲಾದವರು ಓಲಗಿಸುತ್ತಿರುವರು. ನಿಜವಾಗಿ ಬ್ರಹ್ಮನು ತಾನೊಬ್ಬನೇ ಇರುತ್ತಿದ್ದರೂ ಅವನ ಸಂಕಲ್ಪಮಾತ್ರದಿಂದ

ಪೃಥಿವ್ಯಾದಿಪಂಚಭೂತಗಳು, ಶಬ್ದಸ್ಪರ್ಶಾದಿಪಂಚಗುಣಗಳು, ಪ್ರಪಂಚಕ್ಕೆ ಕಾರಣವಾಗಿರುವ ಪ್ರಕೃತಿವಿಕೃತಿಗಳು- ಇವೆಲ್ಲವೂ ತಾನೇ ಆಗಿ ಶೋಭಿಸುತ್ತಿರುವನು. ಆ ಸಭೆಯಲ್ಲಿ ವೇದಗಳು, ವೇದಾಂಗಗಳು, ಉಪಾಂಗಗಳು, ಶಾಸ್ತ್ರಗಳು, ಪುರಾಣಗಳು, ಕಾವ್ಯನಾಟಕಾದಿಗಳು, ಪುರುಷಾರ್ಥಗಳು, ಸಾಧನಗಳು, ಶಿಲ್ಪಾದಿವಿದ್ಯೆಗಳು- ಇವೆಲ್ಲ ಮೂರ್ತಿಮಂತಗಳಾಗಿ ಬಂದು ಬ್ರಹ್ಮನನ್ನು ಸೇವಿಸುತ್ತಿರುವವು.

ಈ ದಿನದ ಸಭೆಯಲ್ಲಿ ಅಗಸ್ತ್ಯರು, ಮಾರ್ಕಂಡೇಯರು, ಜಮದಗ್ನಿಗಳು, ಭಾರದ್ವಾಜರು, ಸಂವರ್ತರು, ಚ್ಯವನರು, ದೂರ್ವಾಸರು- ಇವರೇ ಮುಂತಾದ ಋಷಿಗಳು ನೆರೆದಿದ್ದಾರೆ. ನವಗ್ರಹದೇವತೆಗಳು, ಗಂಧರ್ವರು, ಅಪ್ಸರರು, ಕಿನ್ನರರು, ಕಿಂಪುರುಷರು- ಇವರೇ ಮುಂತಾದವರು ಸೇರಿದ್ದಾರೆ. ಇಂದ್ರ, ಅಗ್ನಿ, ಯಮ- ಮುಂತಾದ ಅಷ್ಟದಿಕ್ಪಾಲಕರೂ ಬಂದಿದ್ದಾರೆ. ವಸುಗಳು, ರುದ್ರರು, ಆದಿತ್ಯರು, ಪಿತೃಗಳು, ಮರುತ್ತುಗಳು- ಇವರೆಲ್ಲರೂ ಕೂಡಿದ್ದಾರೆ. ಯಕ್ಷರು, ಸುಪರ್ಣರು, ನಾಗರು- ಇವರೇ ಮುಂತಾದವರು ಬಂದು ಉಸಿರನ್ನು ಗಟ್ಟಿಯಾಗಿ ಬಿಟ್ಟರೆ ಎಲ್ಲಿ ಸಭೆಯ ಕಾರ್ಯಕ್ಕೆ ಭಂಗ ಬಂದೀತೋ, ಎಲ್ಲಿ ತಮಗೆ ಯಾರ ಅಮೋಘವಾದ ವಾಣಿಯು ಕೇಳದೆ ಹೋದೀತೋ- ಎಂದು ಭಯಭಕ್ತಿಯಿಂದ ಕೂಡಿ ತಮ್ಮತಮ್ಮ ಸ್ಥಾನದಲ್ಲಿ ಕೂತುಕೊಂಡಿದ್ದಾರೆ. ಇನ್ನೂ ಕೆಲವರು ಅತಿದೂರದಲ್ಲಿಯೇ ವಿನೀತರಾಗಿ ನಿಂತಿದ್ದಾರೆ.

ಮೊಟ್ಟಮೊದಲು ಬ್ರಹ್ಮನೇ ಮಾತಾಡುವದಕ್ಕೆ ಮನಸ್ಸುಮಾಡಿದನು. ಆತನು ಎಂದಿನಂತೆ ಇಂದ್ರಾದಿಲೋಕಪಾಲಕರ ಯೋಗಕ್ಷೇಮವನ್ನು ವಿಚಾರಿಸುವದಕ್ಕೆ ಪ್ರಾರಂಭಿಸಿ ಮುಖವು ಸಪ್ಪಗಿದ್ದ ಇಂದ್ರನನ್ನು ನೋಡಿ ''ಎಲೈ ದೇವೇಂದ್ರನೆ, ಬಹುಶ್ರಮದಿಂದ ಮಾತ್ರವೇ ಸಾಧ್ಯವಾಗುವ ಶತಕ್ರತುಗಳನ್ನು ಶ್ರದ್ಧೆಯಿಂದ ಆಚರಿಸಿ ಆ ಪುಣ್ಯಕ್ಕೆ ಫಲವಾಗಿ ಭೋಗದಲ್ಲಿ ಇಂದ್ರನೆಂದು ಲೋಕವಿದಿತವಾಗಿರುವ ಸುಖಸ್ಥಾನವಿಶೇಷವನ್ನು ಪಡೆದಿರುವ ನಿನಗೆ ಕ್ಷೇಮವೆ ? ಸ್ವರ್ಗಲೋಕದಲ್ಲಿರುವವರಿಗೆ ಸುಖಸಾಮಾಗ್ರಿಗಳಿಗೇನೂ ಕೊರತೆಯಿಲ್ಲ , ದುಃಖಸಾಮಾಗ್ರಿಗಳು ಒಂದೂ ಇಲ್ಲ. ಹೀಗಿರುವಲ್ಲಿ ನಿಮಗೆ ಸುಖವೆ ?- ಎಂದು ಕೇಳುವದೇ ಅನವಶ್ಯ. ಆದರೂ ನಿಮ್ಮಲ್ಲಿರುವ ಅತಿಶಯವಾದ ಪ್ರೇಮದಿಂದ ನಿಮ್ಮಗಳಿಗೆ ಯಾವ ಬಾಧೆಯೂ ಇಲ್ಲದಿರಬೇಕೆಂಬ ಕುತೂಹಲವು ಹೆಚ್ಚಾಗಿ ಈ ಪ್ರಶ್ನೆಯನ್ನು ಹಾಕಿರುವೆನೆಂದು

ತಿಳಿಯುವನಾಗು. ಐರಾವತದ ಮೇಲೆ ಕುಳಿತು ನಂದನವನದಲ್ಲಿ ಸುಖವಿಹಾರವನ್ನು ಮಾಡುತ್ತಾ ಗಂಧರ್ವಾದಿಗಳ ಗಾನವನ್ನು ಕೇಳುತ್ತಾ ಅಪ್ಸರನೃತ್ಯಗಳನ್ನು ಅವಲೋಕಿಸುತ್ತಾ ಮನಬಂದಂತೆ ಆನಂದಪಡುತ್ತಿರುವ ಸಪರಿವಾರನಾದ ನಿನಗೆ ಕ್ಷೇಮವಷ್ಟೆ? ಈ ದಿನ ನಿನ್ನ ಮುಖದ ಕಾಂತಿವಿಶೇಷದಲ್ಲಿ ಒಂದು ಕಳೆ ಕಡಿಮೆಯಾದಂತಿದೆ. ಇದೇನು ಕೇವಲ ನನ್ನ ಕಲ್ಪನೆಯು ಮಾತ್ರವೋ, ಇಲ್ಲದಿದ್ದರೆ ಅದಕ್ಕೆ ವಿಶೇಷವಾದ ಕಾರಣವೇನಾದರೂ ಉಂಟೊ ? ನಿರ್ಭೀತಿಯಿಂದ ಹೇಳು'' ಎಂದನು.

ಆಗ ಇಂದ್ರನು ವಿಜ್ಞಾಪಿಸಿಕೊಂಡನೇನೆಂದರೆ ''ದೇವದೇವನೆ, ನಿನ್ನ ಅನುಗ್ರಹದಿಂದ ನಮಗೆ ಯಾವ ಕೊರತೆಯೂ ಇರಲಿಲ್ಲ. ಈಗ ಸ್ವಯಂಕೃತಾಪರಾಧದಿಂದ ಉಂಟಾಗುವ ಅನನುಕೂಲಗಳನ್ನು ತಿಳಿಯಿಸುವದಕ್ಕೆ ಮನಸ್ಸಿನಲ್ಲಿ ಹಿಂದೂಮುಂದೂ ಯೋಚಿಸುವಂತಾಗಿತ್ತಾದರೂ ಅಪ್ಪಣೆಯಾಗಿರುವದರಿಂದ ದಿವ್ಯಸನ್ನಿಧಿಯಲ್ಲಿ ವಿಜ್ಞಾಪಿಸಿಕೊಳ್ಳುವೆನು. ಒಂದಾನೊಂದು ದಿನ ನಾನು ನಿನ್ನನುಗ್ರಹದಿಂದ ಸಂಪ್ರಾಪ್ತವಾದ ಅತುಲೈಶ್ವರ್ಯವನ್ನು ಅನುಭವಿಸುತ್ತಾ ವಿಹರಿಸುತ್ತಿದ್ದೆನು. ಅಲ್ಲಿಗೆ ಶ್ರೀಶಂಕರಾಂಶದಿಂದ ಅವತರಿಸಿರುವ ದೂರ್ವಾಸರು ಸ್ವೇಚ್ಛೆಯಿಂದ ಕಂಡಕಡೆಗೆ ತಿರುಗುತ್ತಾ ವ್ಯಾವಹಾರಿಕರ ಕಣ್ಣಿಗೆ ಉನ್ಮತ್ತರಂತೆ ತೋರುವ ಆಚರಣೆಯನ್ನು ಹೊರಗುಮಾಡಿಕೊಂಡು ಸಂಚಾರಕ್ರಮದಿಂದ ನಾನಿದ್ದಲ್ಲಿಗೆ ದಯಮಾಡಿಸಿದರು. ಅದೇನು ದೈವಮಾಯೆಯೊ, ಆ ದಿನ ನನಗೆ ಆ ಮಹಾತ್ಮರ ಸಂದರ್ಶನದಿಂದ ಆಗಬೇಕಾಗಿದ್ದ ಮಹಾಲಾಭಕ್ಕೆ ಪ್ರತಿಯಾಗಿ ನನ್ನ ನಿರುಪಮಾನವಾದ ಐಶ್ವರ್ಯಕ್ಕೇ ಹಾನಿಯೊದಗುವ ಸಂಭವ ವುಂಟಾಯಿತು. ಐರಾವತದಮೇಲೆ ಕುಳಿತು ಅಟ್ಟಹಾಸದಿಂದ ಮೆರೆಯುತ್ತಾ ಅವರನ್ನು ಕಂಡರೂ ಮಾತನಾಡಿಸದೆ ಹೋಗುತ್ತಿದ್ದ ನನ್ನ ಮೇಲೆ ಆ ಋಷಿವರ್ಯರು ಪರಮಾನುಗ್ರಹಮಾಡಿ ತಾವು ತಂದಿದ್ದ ಸಂತಾನವೃಕ್ಷದ ಹೂಗಳಿಂದ ಮಾಡಿದ್ದ ದಿವ್ಯಸುಂಗಧಯುಕ್ತವಾದ ಮಾಲಿಕೆಯನ್ನು ನನ್ನ ಕಡೆಗೆ ಎಸೆದರು. ಅದು ಸಾಕ್ಷಾದ್ದೇವಿಯ ಪ್ರಸಾದವಾಗಿದ್ದರೂ ಪ್ರಮಾದದಿಂದ ನಾನು ಅದನ್ನು ಪಟ್ಟದಾನೆಯ ಚೌದಂತದ ಮೇಲೆಕ್ಕೆ ಎಸೆದೆನು. ಈಶ್ವರಸಂಕಲ್ಪದಿಂದ ಮುಂದೆ ಹೇಗೆ ನಡೆಯಬೇಕೋ ಅದಕ್ಕೆ ಅನುಸಾರವಾಗಿಯೇ ಎಲ್ಲರೂ ಸೂತ್ರದ ಗೊಂಬೆಗಳಂತೆ ಕುಣಿಯುವ ರೆಂಬುದು ನಿಜವು ; ಏಕೆಂದರೆ ಆ ಆನೆಯು ತನಗಿಂತಲೂ ಮದಿಸಿದ್ದ

ನನ್ನನ್ನು ನೋಡಿ ಧಿಕ್ಕರಿಸುತ್ತದೆಯೋ ಎಂಬಂತೆ ವಾಸನೆಯಿಂದ ಭ್ರಮರಗಳು ಮುತ್ತುತ್ತಿದ್ದ ಆ ಸಂತಾನಮಾಲಿಕೆಯನ್ನು ಸೊಂಡಿಲಿನಿಂದ ಎಳೆದುಕೊಂಡು ಮೂಸಿನೋಡಿ ಈಗ ಇಂದ್ರನ ಐಶ್ವರ್ಯದಲ್ಲೇನೂ ಸಾರವಿಲ್ಲ- ಎಂದು ಜನರಿಗೆ ತಿಳಿಸುವ ಪರಿಯಿಂದ ಕೆಳಕ್ಕೆ ಹಾಕಿಬಿಟ್ಟಿತು. ಬ್ರಾಹ್ಮಣರಾಗಿಯೂ ಋಷಿಗಳಾಗಿಯೂ ಮಹಾತಪಸ್ವಿಗಳಾಗಿಯೂ ಮಹೇಶ್ವರನ ಅಪರಾವತಾರ ರಾಗಿಯೂ ಇರುವ ಆ ಮಹಾತ್ಮರನ್ನು ಆದರಾತಿಶಯದಿಂದ ಪೂಜಿಸುವದಕ್ಕೆ ಬದಲು ಅವರು ಅನುಗ್ರಹವಿಟ್ಟು ಕೊಟ್ಟ ಪ್ರಸಾದವನ್ನು ತಿರಸ್ಕರಿಸಿದ ಪರಮಪಾಪಿಯಾದ ನನಗೆ ಶ್ರೀದೇವಿಯು ಹೇಗೆ ಒಲಿಯುವಳು? ಕೂಡಲೇ ಆ ದೂರ್ವಾಸರು ಮಹಾಕೋಪದಿಂದ ಕಣ್ಣುಗಳನ್ನು ಕೆಂಡದಂತೆ ಕೆಂಪಗೆ ಮಾಡಿಕೊಂಡು 'ಛೀ ಭ್ರಷ್ಟ! ದೇವಬ್ರಾಹ್ಮಣಪರಾಙ್ಮುಖನಾದ ನಿನ್ನ ಐಶ್ವರ್ಯವೆಲ್ಲವೂ ಹಾಳಾಗಲಿ' ಎಂದು ಶಾಪವನ್ನು ಕೊಟ್ಟುಬಿಟ್ಟರು !

''ಸರ್ವಲೋಕಪಿತಾಮಹನೆ, ನನ್ನ ಅಹಂಕಾರಕ್ಕೆ ತಕ್ಕ ಶಿಕ್ಷೆಯನ್ನು ನನಗೆ ಮಾಡಿದ ಆ ಮಹಾತ್ಮರ ಮೇಲೆ ನಾನು ಯಾವ ದೂರನ್ನೂ ಹೇಳುವದಕ್ಕೆ ಕಾರಣವಿಲ್ಲ ; ಲೋಕಸ್ಥಿತಿಯನ್ನು ಕಾಪಾಡುವುದಕ್ಕೆಂದು ಭಗವಂತನಿಂದ ನಿಯಮಿತರಾಗಿರುವ ಅಧಿಕಾರಪುರುಷರ ಕೋಪತಾಪಗಳು ಕೂಡ ನಮ್ಮಂಥ ಜೀವರ ಕರ್ಮಕ್ಕೆ ಅನುಗುಣವಾಗಿಯೇ ಕಾಣಿಸಿಕೊಳ್ಳುವವೆಂದು ಬಲ್ಲವರು ಹೇಳುತ್ತಾರೆ. ಆದರೆ ನನ್ನನ್ನು ನಂಬಿಕೊಂಡಿದ್ದ ಕೋಟ್ಯಾನುಕೋಟಿ ದೇವತೆಗಳಿಗೆಲ್ಲ ಈಗ ನನ್ನ ಅಪರಾಧದಿಂದ ಉಂಟಾಗಿರುವ ದುರವಸ್ಥೆಯನ್ನು ನೋಡಿ ನನಗೆ ತುಂಬ ವ್ಯಸನವಾಗುತ್ತದೆ. ನಾನು ಎಷ್ಟು ಬಗೆಯಿಂದ ಬೇಡಿಕೊಂಡರೂ ಪ್ರಸನ್ನರಾಗದೆ ಆ ಮಹನೀಯರು 'ಎಲೈ ಮದಾಂಧನೆ, ನಿನ್ನ ತಪ್ಪಿಗೆ ತಕ್ಕ ಶಿಕ್ಷೆಯನ್ನು ನೀನು ಅನುಭವಿಸಲೇಬೇಕು. ಗೌತಮ, ವಸಿಷ್ಠ - ಮುಂತಾದ ದಯಾಮಯರಾದ ಋಷಿಗಳು ನಿನ್ನನ್ನು ಹೊಗಳಿಹೊಗಳಿ ಅಟ್ಟಕ್ಕೇರಿಸಿ ಬಿಟ್ಟಿರುವರು. ಅದರಿಂದಲೇ ಅಲ್ಲವೇ, ನನ್ನನ್ನೂ ತಿರಸ್ಕರಿಸಿದೆ ? ಈಗ ಅಹಂಕಾರದ ಫಲವನ್ನನುಭವಿಸಿ ಪರಿಶುದ್ಧನಾದ ಹೊರತು ನೀನು ಮತ್ತೆ ಎಂದಿಗೂ ಸ್ವರ್ಗದ ಸುಖಕ್ಕೆ ಭಾಗಿಯಾಗಲಾರೆ' ಎಂದು ಹೇಳಿ ಹೊರಟುಹೋದರು. ಅಂದಿನಿಂದ ಲೋಕವೆಲ್ಲ ಹಾಳು ಸುರಿಯ ಹತ್ತಿರುವದು. ಎಲ್ಲಿಯೂ ಗಿಡಗಳಿಲ್ಲ, ಬಳ್ಳಿಗಳಿಲ್ಲ, ಧಾನ್ಯವಿಲ್ಲ, ದವಸವಿಲ್ಲ, ಜನಗಳು ಯಜ್ಞಯಾಗಾದಿಗಳನ್ನು ಮಾಡರು. ಜಪತಪಗಳು

ಹೋಯಿತು, ದಾನಧರ್ಮಗಳು ಬಯಲಾದವು. ಜನಗಳಲ್ಲಿ ಸತ್ತ್ವವು ಕಡಿಮೆಯಾಗಿಬಿಟ್ಟಿತು. ಅವರಿಗೆ ಆಸೆ, ಸಿಟ್ಟು, ಜಿಪುಣತನ - ಮುಂತಾದವು ಹೆಚ್ಚಿಬಿಟ್ಟಿವೆ; ಬಲಶೌರ್ಯಾದಿಗಳು ಕುಗ್ಗಿಹೋಗಿವೆ. ಇಂಥ ಸಮಯವನ್ನು ಕಾದುಕೊಂಡಿದ್ದ ದೈತ್ಯರೂ ದಾನವರೂ ಲೋಭಾದಿಗಳಿಂದ ಪ್ರೇರಿತರಾಗಿ ದೇವತೆಗಳ ಮೇಲೆ ಬಿದ್ದು ಎಲ್ಲರನ್ನೂ ಜಯಿಸಿಬಿಟ್ಟಿರುವರು. ಹೆಚ್ಚು ಹೇಳುವುದೇನು ? ನಮಗೆಲ್ಲ ಸ್ವರ್ಗವಾಸಿಗಳೆಂಬ ಸಂಕೇತನಾಮವಿರುವದೇ ಹೊರತು ಸುಖವೆಂಬುದು ಸ್ವಪ್ನದಲ್ಲಿಯೂ ಇಲ್ಲದಂತಾಗಿದೆ. ಆದ್ದರಿಂದ ಇನ್ನು ಮುಂದೆ ಯಾವ ರೀತಿಯಲ್ಲಿ ನಡೆಯಬೇಕೋ ಅದನ್ನು ನಿರ್ಣಯಮಾಡುವದಕ್ಕೆ ನೀನೊಬ್ಬನೇ ಸಮರ್ಥನು'' ಎಂದು ಆರ್ತಸ್ವರದಿಂದ ಹೇಳಿಕೊಂಡನು.

ಬ್ರಹ್ಮನು ಕ್ಷಣಹೊತ್ತು ಧ್ಯಾನಿಸಿ ಕೊನೆಗೆ ದೈವಬಲವು ತಪ್ಪಿದವರಿಗೆ ಯಾವ ಪುರುಷಪ್ರಯತ್ನವೂ ಸಹಾಯಮಾಡಲಾರದು. ದೈವಬಲವೊಂದಿದ್ದರೆ ಎಲ್ಲ ಸಹಾಯಸಂಪತ್ತೂ ಬಂದೊದಗುವದು ಎಂದು ನಿರ್ಣಯಿಸಿ ''ಎಲೈ ದೇವತೆಗಳಿರಾ, ಭಯಪಡಬೇಡಿ. ದೇವದೇವನಾಗಿಯೂ ಜಗತ್ತಿನ ಸುಸ್ಥಿತಿಗೆ ಕಾರಣನಾಗಿಯೂ ಇರುವ ಶ್ರೀಮಹಾವಿಷ್ಣುವಿಗೆ ಶರಣು ಹೋಗೋಣ. ಆತನೇ ಈ ಕಾಲದಲ್ಲಿ ನಮಗೆ ಶರಣ್ಯನು'' ಎಂದು ಸಮಾಧಾನಗೊಳಿಸುತ್ತಾ ಪರಮಾತ್ಮನನ್ನೇ ಸ್ತೋತ್ರಮಾಡಲಾರಂಭಿಸಿದನು.

## ಮೂರನೆಯ ತರಂಗ

### (ಬ್ರಹ್ಮಾದಿಗಳ ಸ್ತೋತ್ರ)

ಈ ಕಥೆಯು ಈಗಲೂ ನಡೆಯುತ್ತಿರುವ ಅನುಭವವಿಶೇಷಗಳಿಗೆ ಸಂಬಂಧಪಟ್ಟದ್ದೆಂದು ಮೊದಲು ಹೇಳಿ ಎಂದಿನಂತೆ ದೇವತೆಗಳು, ಅಸುರರು ಮೇರುಪರ್ವತ, ಬ್ರಹ್ಮಸಭೆ- ಎಂದು ವರ್ಣಿಸುತ್ತಿರುವದನ್ನು ಕಂಡು ವಾಚಕರಲ್ಲಿ ಕೆಲವರಿಗೆ ಇಂಥ ಕಥೆಗೂ ನಮ್ಮ ಅನುಭವಕ್ಕೂ ಯಾವ ಬಗೆಯ ಸಂಬಂಧವಿದ್ದೀತೆಂಬ ಯೋಚನೆ ಹುಟ್ಟಿರಬಹುದು. ಅಂಥವರ ಕುತೂಹಲ ನಿವೃತ್ತಿಗಾಗಿ ಇಲ್ಲಿ ನಾಲ್ಕು ಮಾತುಗಳನ್ನು ಹೇಳಿ ಕಥೆಯನ್ನು ಆಮೇಲೆ ಮುಂದಕ್ಕೆ ಸಾಗಿಸುವೆವು.

ಪ್ರಪಂಚದಲ್ಲಿ ಸೃಷ್ಟವಾಗಿರುವ ಅನೇಕಜನ್ಮಗಳಲ್ಲಿ ನಮ್ಮ ಮಾನವಜನ್ಮವೇ ಅತಿಶಯವಾದದ್ದೆಂದು ನಮ್ಮೆಲ್ಲರಿಗೂ ತಿಳಿದಿರುವದಷ್ಟೆ. ಮನುಷ್ಯಜನ್ಮದ ಈ ಹೆಚ್ಚಿಗೆಗೆ ಮನುಷ್ಯನ ಶರೀರರಚನೆಯೊಂದು ಮುಖ್ಯಕಾರಣವು. ಪ್ರಪಂಚದಲ್ಲಿ ನಾನಾಬಗೆಯ ಪ್ರಾಣಿಗಳಿರುವವು, ಅವುಗಳ ಶರೀರದಲ್ಲಿ ಒಂದೊಂದು ಅನಿತರಸಾಧಾರಣವಾದ ವೈಚಿತ್ರ್ಯವೂ ಕಂಡುಬರುವದು. ಆದರೆ ಮನುಷ್ಯನಿಗಿರುವಂತೆ ಎಲ್ಲಾ ವಿಧದಲ್ಲಿಯೂ ಪರಿಪೂರ್ಣವಾಗಿರುವ ಶರೀರವು ಯಾವ ಪ್ರಾಣಿಗೂ ಇರುವದಿಲ್ಲ. ಮೊದಲನೆಯದಾಗಿ ನೋಡಿ, ಮನುಷ್ಯನಂತೆ ಎರಡುಕಾಲುಗಳ ಮೇಲೆಯೇ ನೆಟ್ಟಗೆ ನಿಂತು ವ್ಯವಹಾರ ಮಾಡುವ ಪ್ರಾಣಿ ಎಲ್ಲಿದೆ ? ಕೆಲವು ಕಪಿಗಳು ಮನುಷ್ಯರಂತೆಯೇ ತುಸು ಹೆಚ್ಚು ಕಡಿಮೆ ನೆಟ್ಟಗೆ ನಿಂತುಕೊಳ್ಳಬಲ್ಲವು, ನಿಜ; ಆದರೆ ಈ ಅಲ್ಪಸ್ವಲ್ಪ ವ್ಯತ್ಯಾಸದಿಂದಲೇ ಅವು 'ವಾನರ'ಗಳೆನಿಸಿಕೊಂಡಿವೆ. ನಿಜವಾಗಿ ನೋಡಿದರೆ ನರನಿಗೆ ವಾನರನು ಹೇಗೆ ಸಮನಾದೀತು ? ಕೆಲವು ಪ್ರಾಣಿಗಳು ಗೂಡು ಕಟ್ಟುವದೇ ಮುಂತಾದ ಸುಖಸಾಮಗ್ರಿಗಳನ್ನು ಏರ್ಪಡಿಸಿಕೊಂಡಿವೆ; ಮತ್ತೆ ಕೆಲವು ದೇಹಸೌಂದರ್ಯವನ್ನು ಪಡೆದಿವೆ ; ಕೆಲವು ಜಾಣತನದ ಒಂದೆರಡು ಕಾರ್ಯವನ್ನು ಮಾಡುವ ದೇಹೇಂದ್ರಿಯಗಳನ್ನು ಪಡೆದಿವೆ ; ಆದರೆ ಪಶುಗಳಿಗಿರುವ ಒಂದೊಂದು ಅನುಕೂಲವೂ ಮನುಷ್ಯನಲ್ಲಿ ಸೇರಿದೆ. ಮನುಷ್ಯನು ತನ್ನ ಕರಚರಣಾದಿಗಳಿಂದ ತನಗೆ ಬೇಕುಬೇಕಾದಂತೆ ಆಯುಧಗಳನ್ನೂ ಸಾಮಗ್ರಿಗಳನ್ನೂ ಏರ್ಪಡಿಸಿಕೊಂಡು, ಪ್ರಪಂಚವನ್ನೆಲ್ಲ ಜಯಿಸಿಬಿಟ್ಟಿರುವನು. ಪೃಥ್ವಿ , ಅಪ್ಪು , ತೇಜಸ್ಸು , ವಾಯು, ಆಕಾಶ- ಎಂಬ ಪಂಚಭೂತಗಳು ಇವನ ವಶವಾಗಿರುವವು. ಭೂಮಿಯಲ್ಲೆಲ್ಲ ಗಾಡಿ, ಬೈಸಿಕಲ್, ರೈಲು, ಮೋಟಾರು- ಮುಂತಾದ ಸಾಧನಗಳಿಂದ ಸಂಚರಿಸುವನು. ನೀರಮೇಲೆಲ್ಲ ಹಡಗುಜಹಜುಗಳಿಂದ ಸಂಚರಿಸುವನು. ಗಡುತರವಾದ ಗನಿಗಳನ್ನು ಅಗೆದು ಚಿನ್ನವನ್ನೂ, ಆಳವಾದ ಸಮುದ್ರವನ್ನು ಮುಳುಗಿ ಮುತ್ತುರತ್ನಗಳನ್ನೂ ತರುವನು. ಎತ್ತರವಾದ ಬೆಟ್ಟಗಳನ್ನು ಏರುವನು. ಗಾಳಿಮಳೆಗಳನ್ನು ಲೆಕ್ಕಿಸದೆ ವಿಮಾನದಲ್ಲಿ ಕುಳಿತು ಆಕಾಶದಲ್ಲಿಯೂ ಸಂಚರಿಸುವನು. ಇವನು ಕಟ್ಟಿರುವ ರಸ್ತೆ, ಸೇತುವೆ, ಕಟ್ಟಡಗಳು- ಮುಂತಾದವುಗಳನ್ನು ನೋಡಿ ಪಶುಪಕ್ಷಿಗಳು ಬೆಪ್ಪಾಗುವವು ; ಸರ್ಕಸ್ ಮುಂತಾದ ಆಟಗಳಲ್ಲಿ ಇವನಿಗೆ ಅವು ವಿನೋದದ ಉಪಕರಣಗಳಾಗುವವು, ಇನ್ನು ಸ್ಥಾವರಗಳಾದ

ಗಿಡಮರಗಳಂತೂ ಇವನ ಕಾಲಕಸವೆಂದು ಹೇಳಬೇಕಾದದ್ದೇ ಇಲ್ಲ. ಹೀಗೆ ಪ್ರಪಂಚಕ್ಕೆ ಮೇರು ಪರ್ವತವು ಹೇಗೋ ಶರೀರಪ್ರಪಂಚಕ್ಕೆ ಮನುಷ್ಯನ ಶರೀರವೂ ಹಾಗಿರುವದು.

ಇಂಥ ಶರೀರವೆಂಬ ಮೇರು ಪರ್ವತದ ಸುತ್ತಲೂ ದೇವತೆಗಳೂ ಅಸುರರೂ ಆಗಾಗ್ಗೆ ಹೊಡೆದಾಡುತ್ತಿರುವರು. ಮನುಷ್ಯನ ಇಂದ್ರಿಯಗಳು ಎರಡು ಬಗೆಯ ವಾಸನೆಗಳಿಂದ ಕೂಡಿರುವವು. ಮನುಷ್ಯನಿಗೆ ಹಿತವಾದ ಶಾಸ್ತ್ರೋಕ್ತವಾದ ಕಾರ್ಯಗಳನ್ನು ಮಾಡುವ ವಾಸನೆಯೊಂದು, ಸದ್ಯಕ್ಕೆ ತನಗೊಪ್ಪಿತವಾಗಿ ಕೊನೆಗೆ ತನಗೆ ಕೇಡನ್ನೇ ಮಾಡುವ ಕಾರ್ಯಗಳನ್ನು ಮಾಡುವದಕ್ಕೆ ತವಕಿಸುವ ವಾಸನೆಯೊಂದು. ಶುಭವಾಸನೆಯಿಂದ ಕೂಡಿದ ಇಂದ್ರಿಯಗಳೇ ದೇವತೆಗಳು. ಮನುಷ್ಯನಿಗೆ ಆಗಾಗ ಪುಣ್ಯವಾಸನೆಯು ಹೊರತೋರಿಕೊಳ್ಳುವದು. ಅಂಥ ಕಾಲದಲ್ಲಿ " ಈ ಮೂರುದಿನದ ಬಾಳಿನಲ್ಲಿ ಪ್ರಯೋಜನವಿಲ್ಲ, ಇಂಥ ಬಾಳನ್ನು ನೆಚ್ಚಿ ಶಾಶ್ವತವಾದ ಆನಂದವನ್ನು ಕಳೆದುಕೊಳ್ಳಬಾರದು. ಹುಟ್ಟಿದ್ದಕ್ಕೆ ಸಾರ್ಥಕವಾಗಿ ಏನಾದರೂ ಶಾಶ್ವತವಾದ ಪುಣ್ಯಕಾರ್ಯವನ್ನೆಸಗಬೇಕು" ಎಂದು ತೋರುವದು. ಇದೇ ದೇವತೆಗಳ ಜಯವು. ಮತ್ತೆ ಕೆಲವು ವೇಳೆಗಳಲ್ಲಿ "ಶರೀರದಲ್ಲಿ ಬಲವಿರುವಾಗ ಸಿಕ್ಕಿದ ವಿಷಯಗಳನ್ನು ಅನುಭವಿಸಿ ಸುಖಪಡದೆ ಕೈಯಲ್ಲಿ ಬಿದ್ದ ಅಮೃತವನ್ನು ಚೆಲ್ಲಿಬಿಡಬಹುದೆ ? ಛೇ, ಇದು ಸರಿಯಲ್ಲ. ನಾಳೆ ಯಾರೊ, ನಾವು ಯಾರೊ ! ಆದ್ದರಿಂದ ಇಂದು ಉಂಡದ್ದೇ ನಮ್ಮದು, ಇಂದು ಉಟ್ಟದ್ದೇ ನಮ್ಮದು. ತಿಂದು ಕುಡಿದು ಆನಂದದಿಂದ ಇರೋಣ !" ಎಂದು ತೋರುವದು. ಇದೇ ಅಸುರರ ಜಯವು.

ಹೀಗೆ ಹೋರಾಡುತ್ತಿರುವ ದೇವಾಸುರಯುದ್ಧದಲ್ಲಿ ಶುಭವಾಸನೆಯ ದೇವತೆಗಳಿಗೆ ಒಡೆಯನಾದ ಜೀವನೇ ಇಂದ್ರನು. ಅಶುಭವಾಸನೆಯ ಅಸುರರಿಗೆ ಒಡೆಯನಾದ ಜೀವನೇ ಅಸುರಪತಿಯಾದ ವಿರೋಚನನೋ ಮತ್ತೆ ಯಾವನೋ ಆಗಿಬಿಡುತ್ತಾನೆ. ನೋಡಿ, ಜೀವನಿಗೆ ಈ ಶರೀರದಲ್ಲಿ ಇಂದ್ರಭೋಗವೇ ಇರುವದು. ಧರ್ಮಕ್ಕೆ ವಿರೋಧವಿಲ್ಲದಂತೆ ಆಗಾಗ್ಗೆ ವಿಷಯಗಳನ್ನು ಅನುಭವಿಸಿದರೆ ಈ ಪ್ರಪಂಚವು ಕಾಮಧೇನುವಾಗುವ ದಿಲ್ಲವೆ? ನಮಗೆ ಯಾವ ಸುಖಕ್ಕೂ ಇಲ್ಲಿ ಕಡಿಮೆಯಿಲ್ಲ. ಕೇಳಿದ ಸುಖವನ್ನು ಸೂರೆಗೊಡುವದಕ್ಕೆ ಈ ಪ್ರಪಂಚವು ಸಿದ್ಧವಾಗಿರುವದು. ಹೀಗಿದ್ದರೂ ನಾವು ಅಸುರರಾಗಿ ಸ್ವಾರ್ಥಬುದ್ಧಿಯಿಂದ ಒಬ್ಬರೊಡನೊಬ್ಬರು

ಹೊಡೆದಾಡುತ್ತಾ ಇದೇ ಪ್ರಪಂಚವನ್ನೇ ನರಕವನ್ನಾಗಿ ಮಾಡಿಬಿಡುವೆವು. ಭರತಖಂಡದಲ್ಲಿ ಎಲ್ಲೆಲ್ಲಿ ನೋಡಿದರೂ ಕಾಮಧೇನುಗಳಂತೆ ಪುಷ್ಟಿಕರವಾದ ಹಾಲನ್ನು ಕರೆಯುತ್ತಾ ಜನಗಳನ್ನು ಸಾಕುತ್ತಿದ್ದ ಗೋವುಗಳು ಈಗ ಮಾಯವಾಗಿ ಮನೆಯಲ್ಲಿ ಮಕ್ಕಳ ಹಾಲಿಗೂ ಪರದೇಶದಿಂದ ಬರುವ ಡಬ್ಬಿಯ ಹಾಲಿನ ನಿರೀಕ್ಷಣೆಯಾಗಿರುವದಕ್ಕೆ ಜನರ ಸ್ವಾರ್ಥಬುದ್ಧಿಯಲ್ಲದೆ ಮತ್ತೇನು ಕಾರಣ ? ಇಂಥ ಉದಾಹರಣೆಗಳನ್ನು ಮಿಕ್ಕ ದೇಶಗಳಿಗೂ ಕೊಡಬಹುದು. ಅಲ್ಲಿಯೂ ಸ್ವಾರ್ಥಬುದ್ಧಿಯಿಂದ ಜನರು ಹಾಳಾಗುತ್ತಿರುವರು. ಮುಖ್ಯವಾಗಿ ಈ ಕಲಿಯುಗದಲ್ಲಿ ಜನರು ಆಸುರಸಂಪತ್ತನ್ನು ಪುರುಷಾರ್ಥವೆಂದೇ ಭ್ರಮಿಸಿ ದೀಪಕ್ಕೆ ಬೀಳುವ ಪತಂಗದ ಹುಳುಗಳಂತೆ ತಮ್ಮ ನಾಶಕ್ಕೆ ತಾವೇ ಕಾರಣರಾಗುತ್ತಿರುವರು. ಇರಲಿ ; ಮೇಲೆ ಹೇಳಿದಂತೆ ಮನುಷ್ಯನು ಇಷ್ಟಪಟ್ಟರೆ ಅವನಿಗೆ ಹೊರಗೆ ಕಾಮಧೇನುವೇ ಕಾಣುವದು. ಒಳಗೆ ಕಲ್ಪವೃಕ್ಷವೇ ಇರುವದು. ಮನುಷ್ಯನಲ್ಲಿ ದೇವರು ದಯೆಯಿಂದ ಇಟ್ಟಿರುವ ಮನಸ್ಸಿಗಿಂತ ಬೇರೆ ಕಲ್ಪವೃಕ್ಷವುಂಟೆ ? ಈತನು ಏನು ಕಲ್ಪಿಸಿಕೊಂಡರೆ ಅದು ಕೂಡಲೆ ಸಿದ್ಧವಾಗಿ ಬಿಡುವದಲ್ಲ ! ಹೊರಗಿನ ವಿಷಯಗಳಿಗೆ ಒಂದು ವೇಳೆ ಕೊರತೆ ಬಂದರೂ ಒಳಗಿನ ಶುಭ ಕಲ್ಪನೆಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಈ ಕಲ್ಪವೃಕ್ಷವು ಕೊಡುವ ವರಗಳನ್ನು ಏಕೆ ಭೋಗಿಸಬಾರದು ? ಇದೂ ಮನುಷ್ಯನ ಆಸುರ ಭಾವದಿಂದಲೇ ಇಲ್ಲವಾಗಿರುವದು. ಇವನು ದೇವೇಂದ್ರನಂತೆ ವಿಷಯ ಭೋಗದಿಂದ ಮತ್ತನಾಗಿರುವನು. ಮನಸ್ಸು, ಚಿತ್ತ, ಬುದ್ಧಿ ಅಹಂಕಾರ-ಎಂಬ ಚೌದಂತಗಳುಳ್ಳ ಅಂತಃಕರಣವೆಂಬ ಮದ್ದಾನೆಯಮೇಲೆ ಕುಳಿತು ವ್ಯವಹಾರವನ್ನು ಮಾಡುತ್ತಿರುವನು. ಪರಮಶಿವಸ್ವರೂಪರಾದ ಸಾಧುಗಳು ಬಂದು ವೇದಾದಿಗಳ ಬೋಧೆಯನ್ನು ಎಷ್ಟು ವಿಧವಾಗಿ ಬಣ್ಣಿಸಿದರೂ ಕಿವಿಗೊಡದೆ ಪರಮಪ್ರಸಾದರೂಪವಾಗಿ ಅವರು ಅನುಗ್ರಹಿಸುವ ತತ್ತ್ವಗಳೆಂಬ ಸಂತಾನವೃಕ್ಷದ ಹೂಗಳ ಮಾಲಿಕೆಯನ್ನು ಕೂಡ ಅತ್ತೆಸೆಯುವನು. ಇಂಥವನಿಗೆ ದೊಡ್ಡವರ ಶಾಪವಲ್ಲದೆ ಮತ್ತೇನು ತಟ್ಟಬೇಕು ?

ವಿಷಯೇಂದ್ರಿಯಗಳ ಸ್ವಾರ್ಥತೆಯ ಭೋಗದಿಂದ ಯಾವಾಗಲೂ ಸುಖವೇ ಆಗುತ್ತಿದ್ದರೆ, ಮನುಷ್ಯನು ತನ್ನ ಹಿತವನ್ನು ಎಂದಿಗೂ ಬಯಸುತ್ತಿರಲಿಲ್ಲ. ವಸಿಷ್ಠಾದಿಗಳು ಹೇಳುವ ಮಾತನ್ನೂ ಕಡೆಗಣಿಸಿದ

ಇಂದ್ರನಂತೆ ಗುರುಶಾಸ್ತ್ರಗಳ ಸದ್ಬೋಧೆಯನ್ನು ಲೆಕ್ಕಿಸದೆಯೇ ಇದ್ದು ಕೊನೆಗೆ ಅಧೋಗತಿಗೇ ಇಳಿದುಬಿಡುತ್ತಿದ್ದನು ! ಆದರೆ ಪರಮಕರುಣಾಮಯನಾದ ಭಗವಂತನು ತನ್ನ ಪೂರ್ಣವಾದ ಸೃಷ್ಟಿಯಲ್ಲಿ ಇಂಥ ಅನರ್ಥಕ್ಕೆ ಅವಕಾಶ ಕೊಡುವನೆ ? ಇಲ್ಲ. ಆದ್ದರಿಂದಲೇ ಸ್ವಾರ್ಥತೆಯಿಂದ ಮನುಷ್ಯನು ಮಾಡಿದ ಭೋಗಕ್ಕೆ ಇಂದ್ರಿಯಗಳು ಬೇಗ ಸವೆದು ಬೇನೆಯಲ್ಲಿ ಬೀಳುವಂತೆ ಆ ದಯಾಮಯನು ನಿಯಮಿಸಿರುವನು. ಅಂಥ ಕಾಲದಲ್ಲಿ ಎದುರಿಗೆ ವಿಷಯಗಳಿದ್ದರೂ ಮನುಷ್ಯನಿಗೆ ಅವುಗಳಲ್ಲಿ ಸಾರವೇ ತೋರುವದಿಲ್ಲ. ಹೀಗೆ ಆಗಾಗ ವ್ಯಥೆಪಡುತ್ತಿರುವ ಜೀವನು ಕೊನೆಗೆ ಬೇಸತ್ತು ತನ್ನ ಹೃದಯಕಮಲದಲ್ಲಿಯೇ ಕುಳಿತು ಸದ್ಬೋಧೆಯನ್ನೂ ಹೇಳುವದಕ್ಕೆ ಸಿದ್ಧನಾಗಿರುವ ಚತುರ್ಮುಖಬ್ರಹ್ಮನಂತೆ ಇರುವ ಒಳ್ಳೆಯ ಮನಸ್ಸಿಗೆ ಕಿವಿಗೊಡುವನು. ಆಗ ಆ ಶುಭಮನಸ್ಸೆಂಬ ಬ್ರಹ್ಮನು ಪರಮಪುರುಷಾರ್ಥಕ್ಕೆ ಒಡೆಯನಾಗಿಯೂ ಸಕಲ ಪ್ರಾಣಿಗಳ ಅಂತರ್ಯಾಮಿಯಾಗಿಯೂ ಇರುವ ಶ್ರೀಮನ್ನಾರಾಯಣನನ್ನು ಸ್ತೋತ್ರಮಾಡಿ ಈ ಜೀವನೆಂಬ ಇಂದ್ರನ ಗೋಳನ್ನು ದೂರಮಾಡುವಂತೆ ಬೇಡಿಕೊಳ್ಳುವನು.

ಆದರೆ ಹೀಗೆ ಹೊರಮುಖನಾಗಿರುವ ಮನುಷ್ಯನು ತನ್ನ ಇಂದ್ರಿಯಗಳನ್ನು ಸೆಳೆದುಕೊಂಡು, ಒಳಮುಖದಿಂದ ಸದ್ವಿಚಾರಕ್ಕೆ ಒಲಿಯುವದು ಯಾವಾಗಲೂ ಲಭಿಸೀತೇ ? ಎಂದಿಗೂ ಲಭಿಸಲಾರದು. ಎಲ್ಲಿಯೋ ಸಾವಿರ ಜನಗಳಲ್ಲಿ ಒಬ್ಬನು ಒಳಗೆ ಇಣುಕಿನೋಡುವನು ; ಹಾಗೆ ಒಳನೋಡುವವರಲ್ಲಿಯೂ ಎಲ್ಲಿಯೋ ಒಬ್ಬ ಪುಣ್ಯಾತ್ಮನಿಗೆ ತತ್ತ್ವವು ಗೋಚರವಾಗುವದು. ಮಿಕ್ಕವರಿಗೆಲ್ಲ ಅಂತರ್ಮುಖವಾಗುವದೆಂದರೆ ಮಹಾಭಯ. ಅವರು ಈ ಜಗತ್ತಿನ ಸುಖವೆಲ್ಲ ಎಲ್ಲಿ ಹಾರಿಹೋಗುವದೋ, ಎಂದು ಹೆದರಿರುವರು. ಒಳಗೆ ವಿಚಾರಮಾಡಿದರೆ ಏನಾದರೂ ತತ್ತ್ವವಿಚಾರವಿರುವದೋ ಇಲ್ಲವೋ, ಅಥವಾ ಇದ್ದರೆ ಅದೇನು ನಮಗೆ ಅನುಕೂಲವಾಗಿರುವದೋ ಅನನುಕೂಲವಾಗಿರವದೋ- ಎಂದು ಸಂಶಯಗ್ರಸ್ತರಾಗಿರುವರು. ಆದ್ದರಿಂದಲೇ ಮೇರು ಪರ್ವತವು ಹೊರಗೆ ನೋಡುವದಕ್ಕೆ ಭಯಂಕರವೆಂತಲೂ ಒಳಗೆ ಅತ್ಯಂತರಮಣೀಯ ವಾಗಿರುವದೆಂತಲೂ ಕಥಾಮುಖದಲ್ಲಿ ವರ್ಣಿಸಿದ್ದು.

ವಾಚಕರೆ, ಇನ್ನು ಕಥೆಯನ್ನು ಮುಂದಕ್ಕೆ ಸಾಗಿಸಬಹುದಲ್ಲವೆ ? ಆಗ ಬ್ರಹ್ಮನು ಶ್ರೀಮನ್ನಾರಾಯಣನನ್ನು ಸ್ತೋತ್ರಮಾಡಿದನೆಂತೆಂದರೆ

''ಸರ್ವಾತ್ಮನಾಗಿಯೂ ಸರ್ವರಿಗೂ ಒಡೆಯನಾಗಿಯೂ ಅನಂತನಾಗಿಯೂ ಜನ್ಮರಹಿತನಾಗಿಯೂ ನಾಶರಹಿತನಾಗಿಯೂ ಇರುವ ಶ್ರೀಮನ್ನಾರಾಯಣನಿಗೆ ನಮಸ್ಕಾರವು ! ಭೂರಾದಿಲೋಕಗಳಿಗೂ ನಾನಾಬ್ರಹ್ಮಾಂಡಗಳಿಗೂ ಇಂದ್ರಾದಿದೇವತೆಗಳಿಗೂ ಆಧಾರನಾಗಿರುವ ಶ್ರೀಮನ್ನಾರಾಯಣನಿಗೆ ನಮಸ್ಕಾರವು ! ತಾನೇ ಸ್ವತಂತ್ರನಾಗಿ ಬೆಳಗುತ್ತಿರುವ, ಭೇದರಹಿತನಾದ ಸೂಕ್ಷ್ಮರಾದ ಆತ್ಮರುಗಳಿಗಿಂತಲೂ ಸೂಕ್ಷ್ಮನಾಗಿರುವ ಶ್ರೀಮನ್ನಾರಾಯಣನಿಗೆ ನಮಸ್ಕಾರವು ! ಎಲ್ಲಕ್ಕೂ ದೊಡ್ಡವಾಗಿರುವ ಭೂಮ್ಯಾದಿಮಹಾಭೂತಗಳಿಗಿಂತಲೂ ದೊಡ್ಡವನಾಗಿರುವ ಭಗವಂತನಿಗೆ ನಮಸ್ಕಾರವು ! ಯಾವಾತನಲ್ಲಿಯೇ ಎಲ್ಲವೂ ನಿಂತಿರುವದೋ, ಯಾವಾತನಿಂದಲೇ ಎಲ್ಲವೂ ಹುಟ್ಟಿರುವದೋ, ಯಾವಾತನೇ ಎಲ್ಲವೂ ಆಗಿರುವನೋ, ಶ್ರೇಷ್ಠರಾದವರಿಗೆಲ್ಲರಿಗೂ ಯಾವಾತನು ಶ್ರೇಷ್ಠನಾಗಿರುವನೋ ಅಂಥ ನಾರಾಯಣನಿಗೆ ನಮಸ್ಕಾರವು ! ಈ ಶರೀರದಲ್ಲಿ ಶ್ರೇಷ್ಠನೆಂದು ಪ್ರಸಿದ್ಧನಾಗಿರುವ ಪುರುಷನಿಗಿಂತಲೂ ಶ್ರೇಷ್ಠನೆನಿಸಿಕೊಂಡು ಪರಮಾತ್ಮಸ್ವರೂಪದಲ್ಲಿರುವ ಯಾವಾತನನ್ನೇ ಮುಕ್ತಿಯನ್ನು ಬಯಸುವ ಯೋಗಿಗಳು ಯಾವಾಗಲೂ ಧ್ಯಾನಮಾಡುತ್ತಿರುವರೋ ಅಂಥ ಭಗವಂತನಿಗೆ ನಮಸ್ಕಾರವು ! ಯಾವ ಪರಮೇಶ್ವರನಲ್ಲಿ ಸತ್ವ , ರಜಸ್ಸು , ತಮಸ್ಸು - ಎಂಬ ಪ್ರಕೃತಿಯ ಮೂರು ಗುಣಗಳೂ ಇರುವದಿಲ್ಲವೋ ಯಾವಾತನು ಶುದ್ಧರಾಗಿರುವವರೆಲ್ಲರಿಗಿಂತಲೂ ಪರಮಶುದ್ಧನಾಗಿರುವನೋ ಅಂಥ ಆದಿಪುರುಷನಿಗೆ ನಮಸ್ಕಾರವು ! ಶುದ್ಧನಾಗಿರುವ ಯಾವಾತನ ಶಕ್ತಿಯು ಕಲೆ, ನಿಮಿಷ, ಮುಹೂರ್ತ- ಮುಂತಾದ ರೀತಿಯಿಂದಿರುವ ಕಾಲನ ಸೂತ್ರಕ್ಕೆ ಕಟ್ಟುಬಿದ್ದಿರುವದಿಲ್ಲವೋ ಅಂಥ ಶ್ರೀಹರಿಯು ನಮ್ಮಲ್ಲಿ ಪ್ರಸನ್ನನಾಗಲಿ ! ಯಾವಾತನನ್ನು ಪರಮೇಶ್ವರನು, ಜನ್ಮರಹಿತನು, ಶುದ್ಧನು- ಎಂದು ಹೇಳುವದು ಕೂಡ ಬರಿಯ ಉಪಚಾರದ ಮಾತಾಗುವದೋ ಅಂಥ ಸರ್ವದೇಹಿಗಳಿಗೂ ಆತ್ಮನಾಗಿರುವ ವಿಷ್ಣುವು ನಮ್ಮಲ್ಲಿ ಪ್ರಸನ್ನನಾಗಲಿ ! ಯಾವಾತನು ಕಾರಣರೂಪವಾಗಿಯೂ ಕಾರ್ಯರೂಪವಾಗಿಯೂ ಕಾರಣಕ್ಕೆ ಕಾರಣದ ರೂಪವಾಗಿಯೂ ಕಾರ್ಯಕ್ಕೆ ಕಾರ್ಯದ ರೂಪವಾಗಿಯೂ ತಾನೇ ತೋರಿಕೊಳ್ಳುತ್ತಿರುವನೋ ಅಂಥ ಶ್ರೀಹರಿಯು ನಮ್ಮಲ್ಲಿ ಪ್ರಸನ್ನನಾಗಲಿ ! ಯಾವನು ತಾನೇ ವಿಷಯಗಳನ್ನು ಭೋಗಿಸುವವನಾಗಿಯೂ ಭೋಗಿಸತಕ್ಕ ವಿಷಯಗಳಾಗಿಯೂ ಇರುವನೋ,

ಯಾವನು ಸೃಷ್ಟಿಸುವವನೂ ಸೃಷ್ಟಿಸತಕ್ಕ ಪ್ರಪಂಚವೂ ತಾನೇ ಆಗಿರುವನೋ ಅಂಥ ಪರಮಾತ್ಮನನ್ನು ನಮಸ್ಕರಿಸುತ್ತೇವೆ. ಅತ್ಯಂತಶುದ್ಧವಾಗಿರುವ ಜ್ಞಾನಸ್ವರೂಪವಾಗಿಯೂ ಜನ್ಮರಹಿತವಾಗಿಯೂ ಮತ್ತೊಂದು ಆಧಾರವನ್ನು ಬಯಸದೆ ಇರುವದಾಗಿಯೂ ಇಂದ್ರಿಯಗಳಿಗೆ ಗೋಚರವಾಗದ್ದಾಗಿಯೂ ಯಾವ ವಿಕಾರಗಳೂ ಇಲ್ಲದ್ದಾಗಿಯೂ ಇರುವ ಶ್ರೀಮಹಾವಿಷ್ಣುವಿನ ಪರಮಪದವು ಯಾವದುಂಟೋ, ಸ್ಥೂಲವಲ್ಲದೆ ಸೂಕ್ಷ್ಮವೂ ಅಲ್ಲದೆ, ಯಾವ ವಿಶೇಷಣದಿಂದಲೂ ಹೇಳುವದಕ್ಕೆ ಬಾರದೆ ಇರುವ ಶ್ರೀಮಹಾವಿಷ್ಣುವಿನ ಪರಮಪದವು ಯಾವದುಂಟೋ ಅದಕ್ಕೆ ನಮಸ್ಕಾರ ! ಯಾವಾಗಲೂ ಸಾಧನೆಮಾಡುತ್ತಿರುವ ಯೋಗಿಗಳು ಪುಣ್ಯವೂ ಪಾಪವೂ ಕ್ಷಯವಾದಮೇಲೆ ಯಾವ ಅಕ್ಷಯವಾದ ಚಿಂತಿಸಲಸದಳವಾದ ಶ್ರೀವಿಷ್ಣುವಿನ ಪರಮಪದವನ್ನು ಪ್ರಣವದಲ್ಲಿ ಕಾಣುವರೋ ಅದಕ್ಕೆ ನಮಸ್ಕಾರವು ! ದೇವತೆಗಳಾಗಲಿ, ಮುನಿಗಳಾಗಲಿ, ನಾನಾಗಲಿ, ಶಂಕರನಾಗಲಿ, ಯಾವ ವಿಷ್ಣುವಿನ ಪರಮಪದವನ್ನು ಅರಿಯೆವೋ ಅಂಥ ಪದಕ್ಕೆ ನಮಸ್ಕಾರ ! ಯಾವ ದೇವನಿಗೆ ಬ್ರಹ್ಮ, ವಿಷ್ಣು, ಶಿವ- ಎಂಬ ಮೂರು ಶಕ್ತಿಗಳಿರುವವೋ ಅಂಥ ಅನಾದಿಯಾದ ವಿಷ್ಣುವಿನ ಪರಮಪದಕ್ಕೆ ನಮಸ್ಕಾರ ! ಎಲೈ ಸರ್ವೇಶ್ವರನೆ, ಸರ್ವಭೂತಗಳಿಗೂ ಆತ್ಮನಾದವನೆ, ಸರ್ವನೆ, ಸರ್ವಕ್ಕೂ ಆಶ್ರಯನಾದವನೆ, ಅಚ್ಯುತನೆ, ಪ್ರಸನ್ನನಾಗು ! ಭಕ್ತರಾದ ನಮ್ಮಗಳಿಗೆ ದೃಷ್ಟಿಗೋಚರನಾಗು !''

ಹೀಗೆಂದು ಬ್ರಹ್ಮನು ಹೊಗಳುತ್ತಿರುವಲ್ಲಿ ದೇವತೆಗಳು ಎಲ್ಲರೂ ಒಟ್ಟಿಗೆ ಸೇರಿ ನಮಸ್ಕಾರಮಾಡಿ ''ಎಲೈ ದೇವನೆ, ಪ್ರಸನ್ನನಾಗು ; ನಮ್ಮೆಲ್ಲರಿಗೂ ದೃಷ್ಟಿಗೋಚರನಾಗು. ಈ ಭಗವಂತನಾದ ಬ್ರಹ್ಮನು ಯಾವ ಪರಮ ಪದವನ್ನು ಅರಿಯನೋ ಆ ನಿನ್ನ ಸ್ಥಾನಕ್ಕೆ ನಮಸ್ಕರಿಸುತಲಿದ್ದೇವೆ. ಜಗತ್ತಿಗೆಲ್ಲ ಆಶ್ರಯನಾದವನೆ, ಅಚ್ಯುತನೆ, ನಿನಗೆ ನಮಸ್ಕಾರವು. ಎಲೈ ದೇವದೇವನೆ, ಸರ್ವಶರಣ್ಯನೆ, ಹಿಂದೆ ಆಗಿಹೋದ, ಮುಂದೆ ಆಗಲಿರುವ ಮತ್ತು ಈಗ ತೋರುತ್ತಿರುವ ಜಗತ್ತಿಗೆಲ್ಲ ಆಧಾರನಾದವನೆ, ನಿನ್ನನ್ನು ಶರಣು ಹೊಕ್ಕಿದ್ದೇವೆ. ಕಾಪಾಡು ಕಾಪಾಡು !'' ಎಂದು ಮೊರೆಯಿಟ್ಟರು. ಆಗ ದೇವತೆಗಳು, ಋಷಿಗಳು, ಬ್ರಹ್ಮನು- ಎಂಬ ಭೇದವೇನೂ ತೋರದೆ ಅವರ ಮನಸ್ಸೆಲ್ಲ ನಾರಾಯಣಮಯವಾಗಿಬಿಟ್ಟಿತ್ತು ! ಹೀಗೆ ಅವರು ಎಷ್ಟು ಹೊತ್ತು ಸ್ತೋತ್ರಮಾಡುತ್ತಿದ್ದರೋ ಅವರಿಗೊಬ್ಬರಿಗೂ ಅರಿವಾಗದೆ ಹೋಯಿತು.

ನಾರಾಯಣಧ್ಯಾನವೆಂಬ ಅಮೃತದ ಕಡಲಿನಲ್ಲಿ ತಾವೆಲ್ಲರೂ ಹಾಯಾಗಿ ತೇಲಾಡುತ್ತಾ ಯಾವ ತಾಪವನ್ನೂ ಅರಿಯದೆ ಇದ್ದಂತೆ ಮಾತ್ರ ಭಾಸವಾಗುತ್ತಲಿತ್ತು !

## ನಾಲ್ಕನೆಯ ತರಂಗ

### (ನಾರಾಯಣನ ಅಪ್ಪಣೆ)

ಹಿಂದೆ ಹೇಳಿದಂತೆ ದೇವತೆಗಳೆಲ್ಲ ಪರಮಾತ್ಮನ ಧ್ಯಾನಸಮಾಧಿಯ ಸುಖವನ್ನು ಬಹುಕಾಲ ಅನುಭವಿಸುತ್ತಲಿದ್ದ ಬಳಿಕ ಅವರಿಗೆ ಮನಸ್ಸು ಹೊರಮುಖವಾಯಿತು. ಮನುಷ್ಯನು ಎಷ್ಟೋಸಲ ಸಾಧುಸಜ್ಜನರ ಬಳಿಯನ್ನು ಸೇರಿದಾಗಲೂ ಪುಣ್ಯಕ್ಷೇತ್ರಾದಿಗಳನ್ನು ಕಂಡಾಗಲೂ ಆಯಾ ಪವಿತ್ರಸ್ಥಾನಗಳ ಮಹಿಮೆಯಿಂದ ಅವನಿಗೂ ಅರಿವಾಗದಂತೆಯೇ ದೇಹಭಾವವನ್ನಗಲಿ ಪರಮಾರ್ಥಚಿಂತೆಯಲ್ಲಿ ಮಗ್ನನಾಗಿಬಿಡುವದುಂಟು. ಆದರೆ ಪ್ರಪಂಚದ ವಾಸನೆಯು ಬಲವಾಗಿದ್ದರೆ ಬೇಗನೆ ಅವನಿಗೆ ಸಂಸಾರದ ಯೋಚನಯೇ ಮೈದೋರುವದು. ಈ ದೇವತೆಗಳಿಗೂ ನಾರಾಯಣಧ್ಯಾನದ ಸುಖವು ಕೆಲಕಾಲವಿದ್ದರೂ ಅವರು ತಮಗೆ ಒದಗಿದ್ದ ವಿಪತ್ತಿನ ವಾಸನೆಯನ್ನು ಅತ್ಯಂತವಾಗಿ ನಾಶಮಾಡಿಕೊಂಡಿರಲಿಲ್ಲವಾದ್ದರಿಂದ ಬೇಗನೆ ಮನಃಪ್ರವೃತ್ತಿಯು ಹೊರಹೊಮ್ಮಿತು. ಆಗ ಅವರೆಲ್ಲರಿಗೂ ಒಂದು ಘನಗಂಭೀರವಾದ ವಾಣಿಯು ಕಿವಿಗೆ ಬಿತ್ತು.

''ಎಲೈ ದೇವತೆಗಳಿರಾ, ಎಲೈ ಬ್ರಹ್ಮನೆ, ಹೆದರಬೇಡಿರಿ. ನಾನು ಹೇಳುವ ಮಾತನ್ನು ಕೇಳಿರಿ ; ನೀವೆಲ್ಲರೂ ಸೇರಿ ಆ ಅಸುರರೊಡನೆ ಸಂಧಿಯನ್ನು ಮಾಡಿಕೊಳ್ಳಿರಿ. ದೇವಾಸುರರಿಬ್ಬರೂ ಸೇರಿ ಸಕಲವಿಧವಾದ ಮರಗಿಡಗಳನ್ನೂ ಸಮುದ್ರದಲ್ಲಿ ಹಾಕಿರಿ. ಮಂದರಪರ್ವತವನ್ನು ಕಡೆಗೋಲುಮಾಡಿಕೊಳ್ಳಿರಿ. ವಾಸುಕಿಯನ್ನು ಹಗ್ಗವಾಗಿ ಮಾಡಿಕೊಳ್ಳಿರಿ, ಸಮುದ್ರವನ್ನು ಕಡೆಯಿರಿ. ಇನ್ನು ನನ್ನ ಸಹಾಯದಿಂದ ನಿಮಗೆ ತೇಜಸ್ಸೂ ಬಲವೂ ಬರುತ್ತದೆ. ಹೆದರದೆ ಈ ಕಾರ್ಯವನ್ನು ಮಾಡಿ ಕ್ಷೀರಸಾಗರದಲ್ಲಿ ಕೊನೆಗೆ ಹುಟ್ಟುವ ಅಮೃತವನ್ನು ಪಾನಮಾಡಿ ತೇಜಸ್ಸಿನಿಂದಲೂ ಬಲದಿಂದಲೂ ಕೂಡಿ 'ಅಮರರು' (ಸಾವಿಲ್ಲದವರು) ಎಂಬ ಶಾಶ್ವತವಾದ

ಹೆಸರನ್ನು ಪಡೆಯಿರಿ'' ಎಂದು ಶ್ರೀಹರಿಯೇ ಎಲ್ಲರಿಗೂ ಅಪ್ಪಣೆ ಮಾಡಿದಂತಾಯಿತು.

ಆಗ ದೇವತೆಗಳೆಲ್ಲರೂ ವಿಸ್ಮಿತರಾಗಿ ಯೋಚಿಸುತ್ತಾ ಕುಳಿತರು. ''ಕ್ಷೀರಸಾಗರವೆಂದರೇನು, ಸಣ್ಣ ಕೆರೆಯೆ? ಮಂದರಪರ್ವತವನ್ನು ಅದರಲ್ಲಿ ತಂದುಹಾಕುವದು ಸಾಮಾನ್ಯ ಕಾರ್ಯವೆ ? ಸಮುದ್ರದಲ್ಲಿ ಗಿಡಮರಗಳನ್ನು ತುಂಬುವದು ಬಾಯಿಮಾತೆ ? ವಾಸುಕಿಯೆಂದರೆ ಸರ್ಪರಾಜನು, ಅವನನ್ನೇ ಹಗ್ಗವಾಗಿ ಮಾಡಿಕೊಂಡು ಕಡೆಯುವದು ಆದೀತೆ? ಇನ್ನು ನಮಗೆ ಆಗದೆ ಇರುವ ಅಸುರರು ನಮ್ಮೊಡನೆ ಸಂಧಿಮಾಡಿಕೊಳ್ಳುವ ಬಗೆ ಹೇಗೆ? ನಾವಿಬ್ಬರೂ ಜತೆಯಲ್ಲಿ ಕಡೆಯ ಬೇಕಾದರೆ ಇಬ್ಬರಿಗೂ ಫಲದಲ್ಲಿ ಸರಿಪಾಲಾಗಬೇಕಲ್ಲವೆ? ಒಂದು ವೇಳೆ ಅಸುರರೂ ಸಾಗರದಲ್ಲಿ ಹುಟ್ಟುವ ಅಮೃತವನ್ನು ಪಾನಮಾಡಿದರೆ, ಅವರೂ ಮರಣರಹಿತರಾಗಬೇಕಾಯಿತಲ್ಲ. ಆಗ ನಾವು ಮಾಡಿದ ಕೆಲಸವು ನಮಗೇ ಮೂಲವಾಗುವದಲ್ಲ ಇದಕ್ಕೇನು ಗತಿ ?'' ಎಂದು ಮೊದಲಾಗಿ ಅವರಿಗೆ ಬಗೆಬಗೆಯಾದ ಯೋಚನೆಯು ತಲೆದೋರಹತ್ತಿತು.

ಪ್ರಿಯಪಾಠಕರೆ, ನಿಜವಾಗಿ ಈ ಸಂಸಾರವು ಒಂದು ಸಮುದ್ರ ದಂತಿರುವದು. ಇಲ್ಲಿ ನಾವು ವ್ಯವಹಾರಮಾಡಿ ಪರಮಾರ್ಥವನ್ನು ಸಾಧಿಸುವದೆಂಬುದು ಈ ದೇವತೆಗಳ ಕಾರ್ಯಕ್ಕೇ ಸರಿಹೋಲುತ್ತದೆ. ನಾವು ಉಪಯೋಗಿಸಬೇಕಾದ ಸಾಧನಗಳೂ ಇವರು ಉಪಯೋಗಿಸಬೇಕೆಂದಿದ್ದ ಸಾಧನಗಳಂತೆಯೇ ಇರುವವು. ಕಲ್ಲಿನ ಬೆಟ್ಟವನ್ನು ಕೀಳುವದು ಹೇಗೆ ಅಸಾಧ್ಯವಾದದ್ದೋ, ನೀರಮೇಲೆ ಅದನ್ನು ಕಡೆಗೋಲಾಗಿ ತೇಲಿಬಿಡುವದು ಹೇಗೆ ಮತ್ತೂ ಅಸಾಧ್ಯವೋ, ವಿಷಯದ ವಾಸನೆಗಳಿಂದ ತೂಕವಾಗಿರುವ ನಮ್ಮ ಮನಸ್ಸೆಂಬ ಬೆಟ್ಟವನ್ನು ಈ ಸಂಸಾರಸಾಗರದ ಮೇಲೆ ತೇಲಿಬಿಡುವದೂ ಹಾಗೇ ಅಷ್ಟೇ ಅಸಾಧ್ಯವು. ಈ ಬೆಟ್ಟವು ಎಲ್ಲಿ ಬಿಟ್ಟರೆ ಅಲ್ಲಿಯೇ ಮುಳಗಿಕೊಂಡುಬಿಡುವುದು. ಇನ್ನು ವಾಸುಕಿಯನ್ನು ಹಗ್ಗ ಮಾಡಿಕೊಳ್ಳುವದು ಹೇಗೋಹಾಗೆ ಈ ಮನಸ್ಸನ್ನು ಒಂದುಕಡೆ ನಿಲ್ಲಿಸಿ ಕೊಳ್ಳುವುದೂ ಅಸಾಧ್ಯವು. ಹಾವು ಮುಟ್ಟುತ್ತಲೇ ನುಣುಚಿ ಕೊಳ್ಳುವಂತೆಯೇ ಇದೂ ನುಣುಚಿಕೊಂಡುಬಿಡುವದು. ಈ ಕಡೆಯಲ್ಲಿ ಹಿಡಿದರೆ, ಆ ಕಡೆಯಲ್ಲಿ ತಪ್ಪಿಸಿಕೊಂಡು ಹೊರಟಿರುವದು. ಕೆಲವುಸಲವಂತೂ ಹೆಡೆಯನ್ನು ಎತ್ತಿ ಬುಸುಗುಟ್ಟುತ್ತಾ ಮುಟ್ಟಿದ್ದೇ ತಪ್ಪಾಗಿ ಕಚ್ಚಿ ವಿಷಕಕ್ಕುವದು ! ಇನ್ನು ನಮ್ಮ

ಅಶುಭವಾಸನೆಗಳಿಂದ ಕೂಡಿದ ಇಂದ್ರಿಯಗಳನ್ನು ನಮ್ಮ ವಶಕ್ಕೆ ತೆಗೆದುಕೊಂಡು ಪರಮಾರ್ಥಸಾಧನೆಗೆ ಹೊರಡುವದಂತೂ ದೇವಾಸುರರ ಸ್ನೇಹವಾಗುವಷ್ಟೇ ಸುಲಭವಾಗಿರುವದು ! ಅಸುರರು ಯಾವಾಗಲೂ ಬಲಿಷ್ಟರು; ನಮ್ಮ ಪ್ರಪಂಚವಾಸನೆಯೂ ಅಷ್ಟೇ ಬಲಿಷ್ಟವು. ದೇವತೆಗಳು ಅಲ್ಪಬಲರು; ಹೀಗೆಯೇ ನಮಗೆ ಶುಭೇಚ್ಛೆಯೂ ಎಲ್ಲಿಯೋ ಒಂದೊಂದು ವೇಳೆ ಬರುವದಾದ್ದರಿಂದ ನಮಗೆ ಪರಮಾರ್ಥವಾಸನೆಯೂ ಬಹು ಸ್ವಲ್ಪವಾಗಿರುವದು.

ಆದರೂ ನಾವು ನಿರಾಶರಾಗಬೇಕಾದ್ದಿಲ್ಲ. ಕಥೆಯಲ್ಲಿ ದೇವತೆಗಳಿಗೆ ಜಯವಾದಂತೆಯೇ ನಮಗೂ ಜಯವಾಗಿಯೇ ಆಗುತ್ತದೆ. ನಾವೂ ಅವರಂತೆಯೇ ಎದೆಗುಂದದೆ, ಇದ್ದಷ್ಟು ಸಹಾಯಸಂಪತ್ತನ್ನು ಒದಗಿಸಿಕೊಂಡು ಭಗವಂತನ ಮೇಲೆ ಭರವಸೆಯಿಟ್ಟು ಪ್ರಯತ್ನವನ್ನು ಮಾತ್ರ ಮಾಡಬೇಕು.

ಇರಲಿ. ಹೀಗೆ ದೇವತೆಗಳು ಕೈಸೋತು ಕುಳಿತಿರುವದನ್ನು ನೋಡಿ ಬ್ರಹ್ಮನು ಅವರಿಗೆಲ್ಲ ಬೆನ್ನು ತಟ್ಟಿ, ''ಎಲೈ ದೇವತೆಗಳಿರಾ, ಇನ್ನೇಕೆ ಹೆದರುವಿರಿ ? ಶ್ರೀಮನ್ನಾರಾಯಣನ ಅಪ್ಪಣೆಯಾಗಿರುವದು. ಹೊರಡಿ. ಕೆಲಸವು ಕೈಗೂಡಬೇಕಾದರೆ, ತಲೆಯ ಮೇಲೆ ಕೈಯಿಟ್ಟು ಕೂತರೆ ಆಗುವುದಿಲ್ಲ. ಎಷ್ಟು ಬೇಗನೆ ನಾವು ಅಸುರರೊಡನೆ ಸಂಧಿ ಮಾಡಿಕೊಳ್ಳುವೆವೋ ನಮಗೆ ಅಷ್ಟು ಬೇಗ ಶುಭಪ್ರಾಪ್ತಿಯಾಗುವದು'' ಎಂದು ಹುರಿದುಂಬಿಸಿದನು.

ಈ ಕಾಲಕ್ಕೆ ದೈತ್ಯರಿಗೆಲ್ಲ ಒಡೆಯನಾದ ಬಲಿರಾಯನು ದೇವತೆಗಳು ಸುಮ್ಮನಿರುವುದನ್ನೂ ತಮ್ಮ ಕಡೆಯ ಸೇನಾನಾಯಕರೂ ಸೋತಿರುವದನ್ನೂ ಕಂಡು ''ಈ ಕಾಲದಲ್ಲಿ ದೇವತೆಗಳಿಗೂ ನಮಗೂ ಸಂಧಿಯಾದರೆ ಸರಿಯಾದೀತು, ಕಾಲಾನುಕಾಲದಲ್ಲಿ ಬೇಕಾದ ಆನುಕೂಲ್ಯಗಳನ್ನು ಒದಗಿಸಿಕೊಂಡು ಮತ್ತೆ ಸಮಯವನ್ನು ನೋಡಿ ಶತ್ರುಗಳ ಮೇಲೆ ಬೀಳಬಹುದು'' ಎಂದು ಯೋಚಿಸುತ್ತಿದ್ದನು. ದೇವತೆಗಳೆಲ್ಲರೂ ಬ್ರಹ್ಮನ ಆಜ್ಞಾನುಸಾರವಾಗಿ ಅವನಲ್ಲಿಗೆ ಸಂಧಿಯನ್ನು ಮಾಡಿಕೊಳ್ಳುವದಕ್ಕೆ ಬರುತ್ತಿದ್ದಾರೆಂಬುದನ್ನು ಕೇಳುತ್ತಲೂ ಅವನಿಗೆ ಪರಮಸಂತೋಷವಾಯಿತು. ಅವನು ತಮ್ಮವರನ್ನೆಲ್ಲ ಕುರಿತು ''ಎಲೈ ಅಸುರಶ್ರೇಷ್ಠರೆ, ದೇವರಾಜನಾದ ಇಂದ್ರನು ತನ್ನ ಪರಿವಾರದೊಡನೆ ಬರುತ್ತಿದ್ದಾನೆಂದು ಕೇಳುತ್ತೇನೆ. ಹಾಗಿದ್ದರೆ

ಅವನಿಗೆ ಯಾವ ತೊಂದರೆಯನ್ನೂ ಮಾಡದೆ ಅವಶ್ಯವಾಗಿ ನನ್ನಲ್ಲಿಗೆ ಕರೆತನ್ನಿ'' ಎಂದು ಆಜ್ಞಾಪಿಸಿದನು.

ಇಷ್ಟರಲ್ಲಿ ದೇವೇಂದ್ರನು ಬೃಹಸ್ಪತಿಯೇ ಮೊದಲಾದವರೊಡನೆ ತಾನೇ ವಿರೋಚನನ ಮಗನಾದ ಬಲಿರಾಯನ ಸಭೆಯನ್ನು ಪ್ರವೇಶಿಸಿದನು. ಈಗ್ಗೆ ಬಲಿರಾಯನು ತನ್ನ ಶತ್ರುಗಳನ್ನೆಲ್ಲ ಜಯಿಸಿ, ದೇವತೆಗಳಲ್ಲಿಯೂ ದೈತ್ಯರಲ್ಲಿಯೂ ಮತ್ತೆ ಯಾರೂ ತನಗೆ ಸಮನಾದವರಿಲ್ಲವೆನಿಸುವಂಥ ಐಶ್ವರ್ಯವನ್ನು ಸಂಪಾದಿಸಿದ್ದಾನೆ. ಶಂಬರ, ಅರಿಷ್ಟನೇಮಿ- ಮುಂತಾದ ಅಸುರಶ್ರೇಷ್ಠರನೇಕರು ಅವನನ್ನು ಪಾದಸೇವೆಮಾಡುತ್ತಾ ಸಮಯ ನಿರೀಕ್ಷಣೆಯನ್ನು ಮಾಡುತ್ತಿದ್ದಾರೆ. ಹೀಗೆ ಸಿಂಹಾಸನದಲ್ಲಿ ಕುಳಿತಿರುವ ಅಸುರಾಧಿಪತಿಯ ಸಮೀಪಕ್ಕೆ ಮಹೇಂದ್ರನು ಬಂದು ಯಥೋಚಿತವಾಗಿ ಮರ್ಯಾದೆಯ ಮಾತುಗಳನ್ನು ಆಡಿ, ತನಗರ್ಹವಾದ ಆಸನದಲ್ಲಿ ಕುಳಿತು ಕಥಾಪ್ರಸ್ತಾವದಿಂದ ತಾನು ಬಂದ ವಿಚಾರವನ್ನು ಹೇಳಿದನು.

ಬಲಿಯು ''ದೇವೇಂದ್ರನೆ, ನೀನು ಬಂದದ್ದು ನನಗೆ ಬಹಳ ಸಂತೋಷವಾಯಿತು. ಬಲಿಷ್ಠರಾದ ಅಸುರರಿಗೆ ದೇವತೆಗಳ ಸಹಾಯವೇ ಬೇಕಿಲ್ಲವಾದರೂ ಒಂದೊಂದು ಕಾರ್ಯವನ್ನು ಮಾಡುವಾಗ ಅನೇಕರು ಇರುವದು ಒಳ್ಳೆಯದಾದ್ದರಿಂದ ನೀನು ಹೇಳುವ ಸಲಹೆಗೆ ನಾನು ಒಪ್ಪಿರುವೆನು. ನಿನ್ನ ಸೂಚನೆಯಂತೆ ದೇವಾಸುರರಿಬ್ಬರೂ ಕ್ಷೀರಸಮುದ್ರವನ್ನು ಕಡೆಯೋಣ. ಮಂದರ ಪರ್ವತವಾಗಲಿ, ವಾಸುಕಿಯಾಗಲಿ ನಮಗೆ ಲಕ್ಷ್ಯವಿಲ್ಲ. ಆದರೆ ಒಂದು ಮಾತು : ದೇವತೆಗಳು ವಾಸುಕಿಯ ಬಾಲವನ್ನು ಹಿಡಿದುಕೊಳ್ಳಬೇಕು. ಅಸುರರಾದ ನಮಗೆ ಬಾಲದಕಡೆ ಕೈಹಾಕುವದೆನ್ನುವದು ಗೌರವಕ್ಕೆ ಕುಂದುತರುವಂಥದ್ದು. ಇದೊಂದು ಸಣ್ಣ ನಿಯಮಕ್ಕೆ ನೀನು ಸಮ್ಮತಿಪಡುವದಾದರೆ ಮಿಕ್ಕವಿಷಯದಲ್ಲಿ ನನ್ನ ಅಡ್ಡಿಯೇನೂ ಇಲ್ಲ'' ಎಂದನು.

ಆಗ ಮಾತಿನಲ್ಲಿ ಜಾಣನಾದ ಬೃಹಸ್ಪತಿಯು ''ಅಸುರೇಂದ್ರನೇ , ನೀವು ನೀವೇ ಎದುರಿಗೆ ಇರುವಾಗ ನಡುವೆ ನಾನು ಮಾತಿಗೆ ಬರುವದು ಧಾರ್ಷ್ಟ್ಯವೆಂದು ತೋರಬಹುದಾದರೂ ನಮ್ಮಗಳಿಗೆಲ್ಲ ಒಡೆಯನಾದ ಇಂದ್ರನ ಮನೋಗತವನ್ನು ತಿಳಿದವನಾದ್ದರಿಂದ ಈ ಸಂದರ್ಭದಲ್ಲಿ ಎರಡು ಮಾತುಗಳನ್ನಾಡುವೆನು. ದೇವತೆಗಳು ಯಾವಾಗಲೂ ಕಿರಿಯವರು, ತಮ್ಮಂದಿರು; ಅಸುರರು ಎಂದಿಗೂ ಹಿರಿಯವರು, ಅಣ್ಣಂದಿರು. ಅಣ್ಣಂದಿರು

ಬಿಟ್ಟಿದ್ದನ್ನು ತಮ್ಮಂದಿರು ಒಪ್ಪಿಕೊಳ್ಳುವದು ಅವರಿಗೆ ಭೂಷಣವೂ ಶ್ರೇಯಸ್ಕರವೂ ಆಗಿರುವದೆಂದು ತಿಳಿದವರು ಹೇಳುವರು. ಹೀಗಿರುವದರಿಂದ ಈ ಸಂದರ್ಭದಲ್ಲಿ ಪೌರುಷಪ್ರಧಾನರಾದ ನಿಮ್ಮ ಮಾತುಗಳನ್ನು ಕೇಳುವದು ನಮ್ಮಗಳಿಗೆ ಶ್ರೇಯಸ್ಕರವೇ ಎಂದು ದೇವೇಂದ್ರನು ಭಾವಿಸಿರುವನು. ಮಂದರಪರ್ವತವನ್ನು ಹೊರುವದರಲ್ಲಿಯೂ ಸಮುದ್ರವನ್ನು ಕಡೆಯುವುದರಲ್ಲಿಯೂ ಸಮವಾದ ಶ್ರಮೆಯನ್ನು ತೆಗೆದುಕೊಂಡು ವಾಸುಕಿಯನ್ನು ತಲೆಯಕಡೆ ನಾವೇ ಹಿಡಿದುಕೊಳ್ಳುವೆವು ಎಂದು ಹೇಳುವ ನಿಮ್ಮಗಳ ಅಭಿಪ್ರಾಯದಂತೆ ನಾವೇಕೆ ನಡೆಯಬಾರದು? ಮುಖ್ಯವಾಗಿ ದೇವೇಂದ್ರನು ಕಾರ್ಯಗೌರವದಲ್ಲಿ ಲಕ್ಷ್ಯವಿಟ್ಟಿರುವನೇ ಹೊರತು, ಮಿಕ್ಕ ವಿಚಾರಗಳು ಅವನಿಗೆ ಎಣಿಕೆಯಿಲ್ಲ''ಎಂದು ಶ್ಲೇಷಗರ್ಭಿತವಾದ ಮಾತುಗಳನ್ನಾಡಿದನು. ಆದರೆ ದೇವತೆಗಳೆಲ್ಲ ಹೇಡಿಗಳೆಂದೂ ತಾನು ಹೇಳಿದಂತೆ ಕೇಳುವದಕ್ಕೆ ಅದೇ ಮುಖ್ಯ ಕಾರಣವೆಂದೂ ತಿಳಿದ ಬಲಿರಾಯನಿಗೆ ಆ ಬಲಗರ್ವದ ಭರದಲ್ಲಿ ದೇವಗುರುವಿನ ಮಾತಿನಲ್ಲಿರುವ ಸೂಕ್ಷ್ಮಾರ್ಥಗಳೇನೂ ತೋರದೆಹೋಯಿತು.

ಈ ಲೋಕದಲ್ಲಿ ತಮಗೆ ಎಲ್ಲರೂ ಎದುರಿಗೆ ಗೌರವವನ್ನು ತೋರಿಸುತ್ತಿದ್ದರೆ ಸಾಕು ; ಹಿಂದೆ ಕೈತಟ್ಟಿ ಕೇಕೆಹಾಕಿಕೊಂಡು ನಗುತ್ತಿದ್ದರೂ ಚಿಂತೆಯಿಲ್ಲ , ಎನ್ನುವವರು ಕೆಲವರು. ಇಂದ್ರ, ಚಂದ್ರ- ಎಂದು ಎದುರಿಗೆ ಮೃಷಾಸ್ತುತಿಯನ್ನು ಜನರು ಮಾಡಿ ಇವರನ್ನು ಮರುಳುಮಾಡಿ ತಮ್ಮ ಕೆಲಸವನ್ನು ಸಾಧಿಸಿಕೊಳ್ಳುವರು. ಸುಮ್ಮಸುಮ್ಮನೆ ಕೋಪವನ್ನು ಮಾಡಿಕೊಳ್ಳುತ್ತಾ, ತಾವು ಹಿಡಿದ ಪಟ್ಟನ್ನು ಬಿಡದೆ ತಮಗೆ ಎಲ್ಲೆಲ್ಲಿಯೂ ಮರ್ಯಾದೆಯೇ ಆಗುತ್ತಿರಬೇಕೆಂದು ನಿರೀಕ್ಷಿಸುತ್ತಾ ತಾವು ಹೇಳಿದ್ದೇ ಸಾಗಬೇಕು ಎಂದು ದುರಭಿಮಾನಪಡುತ್ತಿರುವ ಸ್ಥೂಲಬುದ್ಧಿಗಳು ಯಾವಾಗಲೂ ಕಾರ್ಯಾಂತದಲ್ಲಿ ಮೋಸಹೋಗುವರು. ಕಾರ್ಯಶಕ್ತಿ ಹೀನರಾದರೂ ಸೂಕ್ಷ್ಮಬುದ್ಧಿಯುಳ್ಳವರು ತಮ್ಮ ಕಾರ್ಯವಾಗುವವರೆಗೆ ಇವರನ್ನು ಆಶ್ರಯಿಸಿಕೊಂಡಿದ್ದು ಕಾರ್ಯಾಂತದಲ್ಲಿ ಪಕ್ಷಿಗಳು ಕೊಂಬೆಗಳಿಂದ ಹಾರಿಹೋಗುವಂತೆಯೂ ನದಿಯನ್ನು ದಾಟಿದವರು ದೋಣಿಯನ್ನು ಕೈಬಿಡುವಂತೆಯೂ ಎಳೆನೀರನ್ನು ಕುಡಿದವರು ಬುರುಡೆಯನ್ನು ಅನಾದರದಿಂದ ಬಿಸಾಡುವಂತೆಯೂ ಇಂಥಮೂರ್ಖರನ್ನು ಕೈಬಿಟ್ಟು ಹೋಗುವರು. ಪ್ರಕೃತದಲ್ಲಿ ಅಸುರರ ಪಾಡು ಇಂಥದ್ದಾಯಿತು.

ಕಾರ್ಯವಾಸಿ, ಕತ್ತೆಯಕಾಲುಕಟ್ಟು ಎಂಬಂತೆ ದೇವತೆಗಳು ತಮ್ಮ ಕಾರ್ಯಕ್ಕೆ ಬಾಹುಬಲಿಷ್ಠರಾದ ಅಸುರರ ನೆರವು ಬೇಕೆಂದು ತೋರಿದ್ದರಿಂದ ಬಲಿರಾಯನನ್ನು ಸ್ತುತಿವಚನಗಳಿಂದ ಉಬ್ಬಿಸಿ ಹುರುಪೇರಿಸಿದರು. ನಿಜವಾಗಿ ತಮ್ಮಕಡೆ ಶ್ರೀಮನ್ನಾರಯಣನಿರುವನೆಂದೂ ನಿಮಿತ್ತಮಾತ್ರಕ್ಕೆ ಅಸುರರೆಂದೂ ದೈವಭಕ್ತಿಪರಾಯಣರಾದ ತಮಗೆ ಪೌರುಷಪ್ರಧಾನರಾದ ಅಸುರರು ಸಹಾಯ ಮಾಡಿಯೇ ತೀರಬೇಕಾಗುವದೆಂದೂ ಬೃಹಸ್ಪತ್ಯಾಚಾರ್ಯರಿಗೆ ಗೊತ್ತು. ಅಸುರೇಶ್ವರನಾದ ಬಲಿಯು ಮಾತ್ರ, ದೇವತೆಗಳು ತನ್ನನ್ನು ಮರೆಬಿದ್ದು ಬಾಳದೆ ಇದ್ದರೆ ಅವರಿಗೆ ಗತಿಯೇ ಇಲ್ಲವೆಂದು ಹಿರಿಹಿರಿಹಿಗ್ಗಿದನು. ಜನ್ಮದಿಂದಲೂ ಕರ್ಮದಿಂದಲೂ ವಿದ್ಯೆಯಿಂದಲೂ ಪ್ರಖ್ಯಾತರಾದ ಅಸುರರು ಹಾವಿನ ಬಾಲವನ್ನು ಹಿಡಿಯಬೇಕೆ?- ಎಂಬ ಅಮಂಗಲವಾದ ಕುಬುದ್ಧಿಯು ಅವನಿಗೆ ದುರದೃಷ್ಟವಶದಿಂದ ಈಗ ಬಂದೊದಗಿತು. ಮುಂದಕ್ಕೆ ನಿಜವಾಗಿ ತನ್ನ ಈ ಸೂಚನೆಯೇ ದೇವತೆಗಳಿಗೆ ಶ್ರೇಯಸ್ಕರವೆಂಬುದು ದೇವತೆಗಳ ಗುರುವಿಗೆ ಹೊಳೆದಂತೆ ಆತನಿಗೆ ತೋರದೆ ಹೋಯಿತು.

ಆದ್ದರಿಂದ ಆ ದೈತ್ಯಪತಿಯು ''ಎಲೈ ಬೃಹಸ್ಪತಿಯೇ, ನೀನು ಹೇಳಿದ್ದು ಯಥಾರ್ಥವೇ ಆಗಿರುವದು. ಇನ್ನು ತಡವೇತಕ್ಕೆ ? ಎಲೈ ಅಸುರನಾಯಕರೆ ಬೇಗನೆ ಏಳಿ. ಮಂದರಪರ್ವತವನ್ನು ಬೇಗನೆ ಕಿತ್ತುತಂದು ಸಮುದ್ರದಲ್ಲಿ ಹಾಕಿ ಕಡೆಯೋಣ ! ಅಸುರರಲ್ಲಿ ಯಾರ ಯಾರ ಭುಜದಲ್ಲಿ ಎಷ್ಟೆಷ್ಟು ಸಾರವಿರುವದೆಂಬುದನ್ನು ಪರೀಕ್ಷಿಸುವದಕ್ಕೆ ಇದು ಒಳ್ಳೆಯ ಸಮಯವಾಗಿರುವದು. ದೇವತೆಗಳೂ ನೀವೂ ಒಮ್ಮೆಗೇ ಸೇರಿದರೆ ಸಪ್ತಕುಲಾಚಲದಿಂದ ಕೂಡಿದ ಭೂಮಿಯನ್ನೇ ತಲೆಕೆಳಗು ಮಾಡಿಬಿಡಬಹುದು ; ಹೀಗಿರುವಲ್ಲಿ ಈ ಮಂದರ ಪರ್ವತದ ಪಾಡೇನು? ನಮ್ಮ ನಗರದಲ್ಲಿರುವ ಅಸುರನಾಯಕರೆಲ್ಲರೂ ಈ ಕಾರ್ಯಕ್ಕೆ ಸೇರಬೇಕೆಂದು ಡಂಗುರವನ್ನು ಹೊಡೆಸಿರಿ'' ಎಂದು ಆಜ್ಞಾಪಿಸಿದನು.

ಬಲಿರಾಯನು ಈ ರೀತಿಯಲ್ಲಿ ಅಪ್ಪಣೆಯಿತ್ತ ಸಮಯದಲ್ಲಿಯೇ ಭೇರೀನಿನಾದಗಳು ದಿಕ್ಕುದಿಕ್ಕಿಗೆ ಹರಡಿದವು.''ಜಯ ಜಯ ವಿರಾಗ್ರೇಸರ! ಅಸುರಾಧಿಪತೇ, ಜಯ ಜಯ !'' ಎಂಬ ಸಭಿಕರ ಜಯಘೋಷಗಳು ಕೇಳಬಂದವು. ನೂರಾರು ಮಂದಿ ಅಸುರಶ್ರೇಷ್ಠರು ಈ ಕಾರ್ಯದಲ್ಲಿ ನಾನು ಮುಂದು, ತಾನು ಮುಂದೆಂದು ಪ್ರತಿಜ್ಞಾಪೂರ್ವಕವಾಗಿ ಮುಂದಕ್ಕೆ

ಹೆಜ್ಜೆಯಿಟ್ಟು ಅಪ್ಪಣೆಗಾಗಿ ತಮ್ಮ ಚಕ್ರವರ್ತಿಯ ಮುಖದಕಡೆಗೆ ನೋಡುತ್ತಿದ್ದರು. ಮಂದರಪರ್ವತವೆಂಬುದು ಅಸುರರ ಪಾಲಿಗೆ ಹುಡುಗರ ಕೈಯಲ್ಲಿರುವ ಚಂಡಾಗಿ ತೋರಿತೋ, ಗೋಲಿಗಜ್ಜುಗಗಳೆಂದು ತೋರಿತೋ, ಹೇಳುವದಕ್ಕೆ ಬರುವದಿಲ್ಲ. ಇಂದ್ರನು ತನ್ನ ಕಾರ್ಯವು ಇಷ್ಟು ಸುಲಭವಾಗಿ ನೆರವೇರುವದೆಂದು ಕನಸಿನಲ್ಲಿಯೂ ಯೋಚಿಸಿರಲಿಲ್ಲವೆಂದು ಹೇಳಬಹುದು; ಅಥವಾ ದೇವತೆಗಳಿಗೆ ಕನಸೇ ಇಲ್ಲವೆಂದು ನಮ್ಮ ಪುರಾಣಗಳು ಹೇಳುತ್ತಿರುವದರಿಂದ ಈ ಕಾಲಕ್ಕೆ ಅಸುರರು ಇಷ್ಟು ಉತ್ಸಾಹದಿಂದ ಸಂಧಿಮಾಡಿಕೊಂಡು ದೇವಕಾರ್ಯಕ್ಕೆ ನೆರವಾದಂತೆ ಮರ್ತ್ಯಲೋಕದಲ್ಲಿ ಜನರಿಗೆ ಕನಸಾಗುತ್ತಿರಬೇಕೆಂದು ಆ ದೇವಶ್ರೇಷ್ಠನು ಭಾವಿಸಿರಬಹುದು. ಅದು ಹೇಗೇ ಆಗಲಿ, ಇದೆಲ್ಲಾ ಶ್ರೀಮನ್ನಾರಾಯಣನ ಲೀಲೆಯೆಂದು ಭಾವಿಸಿಕೊಂಡು ಆತನು ಯಥೋಚಿತವಾಗಿ ಅಸುರಚಕ್ರವರ್ತಿಯ ಅಪ್ಪಣೆಯನ್ನು ಪಡೆದು ದೇವತೆಗಳನ್ನು ಕಾರ್ಯಕ್ಕೆ ಗುಂಪು ಕೂಡಿಸುವದಕ್ಕೆಂದು ಹೊರಟುಹೋದನು.

## ಐದನೆಯ ತರಂಗ

(ಸಮುದ್ರವನ್ನು ಕಡೆದದ್ದು)

ಎಂದು ದೇವತೆಗಳೂ ಅಸುರರೂ ಸಂಧಿಮಾಡಿಕೊಂಡರೋ ಆ ದಿನವು ಒಂದು ಮಹಾಶುಭದಿನವು. ಏಕೆಂದರೆ ದೇವತೆಗಳ ಬುದ್ಧಿಗೆ ಅಸುರರ ಭುಜಬಲವು ಸೇರಿದರೆ ಆಗದ ಕಾರ್ಯವು ಯಾವದಿದ್ದೀತು? ಮಂದರಪರ್ವತವೇನೂ ಸಾಮಾನ್ಯವಾದದ್ದಲ್ಲ. ಅದು ಮೋಡಗಳನ್ನು ಮುಟ್ಟುವಂಥ ಶಿಖರಗಳುಳ್ಳದ್ದು; ಎಲ್ಲೆಲ್ಲಿಯೂ ಗಿಡಮರಬಳ್ಳಿಗಳಿಂದ ಆವೃತವಾಗಿರುವಂಥದ್ದು; ಬಗೆಬಗೆಯ ಹಕ್ಕಿಗಳು, ಬಗೆಬಗೆಯ ಹಾವುಹಲ್ಲಿಗಳು, ಬಗೆಬಗೆಯ ದುಷ್ಟಮೃಗಗಳು- ಮುಂತಾದ ಪ್ರಾಣಿಗಳಿಂದ ಪರಿವೃತವಾಗಿರುವದು. ಅದರಲ್ಲಿ ಎಷ್ಟೋ ಜನ ಕಿನ್ನರರೂ ಅಪ್ಸರಸರೂ ದೇವತೆಗಳೂ ವಾಸವಾಗಿರುವರು. ಅದು ಹನ್ನೊಂದು ಸಾವಿರ ಯೋಜನದ ಅಗಲವೂ ಅಷ್ಟೆ ಉನ್ನತವೂ ಆಗಿರುವದು. ಇಂಥ ಪರ್ವತವನ್ನು ಹಿಡಿದು ಕೀಳುವದೆಂದರೇನೂ ಸಾಮಾನ್ಯಕಾರ್ಯವಲ್ಲ. ಆದರೂ ದೇವತೆಗಳೂ ಅಸುರರೂ ಎಂದು ಒಂದಾದರೋ ಆ ದಿನ ಈ ಮಹಾಕಾರ್ಯವು

ಸಲೀಸಾಗಿ ಜರುಗಿಯೇಬಿಟ್ಟಿತು. ನಮ್ಮ ಮನಸ್ಸೆಂಬುದು ಒಂದು ಮಹಾಪರ್ವತದಂತೆ ಇರುವದೆಂತಲೂ ವಿಷಯವಾಸನೆಗಳಿಂದ ಕೂಡಿದ ಆ ಮನಸ್ಸನ್ನು ಈ ಸಂಸಾರ ಸಾಗರದಲ್ಲಿ ತೇಲಿಬಿಡುವದು ಬಲುಕಷ್ಟವೆಂತಲೂ ಹಿಂದೆಯೇ ಹೇಳಿದೇವಷ್ಟೆ. ಆದರೆ ಅದನ್ನು ವಿಷಯಗಳ ಕಡೆಗೆ ಬೇರುಬಿಟ್ಟುಕೊಳ್ಳದಂತೆ ಕಿತ್ತು ಹಗುರವಾಗಿ ನಾವು ತೋರಿದಕಡೆ ನಿಲ್ಲಿಸುವದಕ್ಕೆ ಮುಖ್ಯವಾಗಿ ಎರಡು ಸಾಧನಗಳು ಸೇರಬೇಕು. ''ಮನಸ್ಸು ತೋರಿದ ಕಡೆ ಹರಿದಾಡುತ್ತಿರುವದಲ್ಲ, ಅದನ್ನು ಹಿಡಿದು ನಿಲ್ಲಿಸುವದಕ್ಕಾದೀತೆ?'' ಎಂದು ಅರ್ಜುನನು ಕೇಳಿದಾಗ ಭಗವಂತನು ಏನು ಅಪ್ಪಣೆಕೊಟ್ಟನು ?

''ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್ ।
ಅಭ್ಯಾಸೇನ ತು ಕೌನ್ತೇಯ ವೈರಾಗ್ಯೇಣ ಚ ಗೃಹ್ಯತೇ ॥ ''

(ಭಾವಾರ್ಥ- ಎಲೈ ಮಹಾಬಾಹುಬಲಶಾಲಿಯಾದ ಅರ್ಜುನನೇ ಶತ್ರುಗಳನ್ನು ಶರೀರಸಾಮರ್ಥ್ಯದಿಂದ ಹಿಡಿದಂತೆ ಈ ಮನಸ್ಸನ್ನು ಹಿಡಿದು ಕಟ್ಟುವದು ಆಗುವದಿಲ್ಲವೆಂಬುದೂ ಇದು ಬಹುಚಂಚಲವಾದ್ದರಿಂದ ಒಂದು ಕಡೆ ನಿಲ್ಲುವದಿಲ್ಲವೆಂಬುದೂ ನಿಜವೇ ; ಆದರೆ ವಿವೇಕದಿಂದಲೂ ವೈರಾಗ್ಯದಿಂದಲೂ ಇದನ್ನು ಹಿಡಿದು ನಿಲ್ಲಿಸುವದಕ್ಕೆ ಆಗಿಯೇ ಆಗುತ್ತದೆ.)

ಈ ಮನಸ್ಸೆಂಬ ಮಂದರಪರ್ವತವನ್ನು ಹಿಡಿದು ವಾಸುಕಿಯಿಂದ ಕಟ್ಟಿ ಸಂಸಾರಸಮುದ್ರದಲ್ಲಿ ಹಾಯಾಗಿ ತೇಲುವಂತೆ ಬಿಡಬೇಕಾದರೂ ಈ ಎರಡು ಸೇರಬೇಕಾಗುತ್ತದೆ. ದೇವತೆಗಳೂ ಅಸುರರೂ ಸಂಧಿಮಾಡಿಕೊಳ್ಳುವದೇ ಇದಕ್ಕೆ ಉಪಾಯವು. ಮನುಷ್ಯನು ಶುಭವಾಸನೆಯಿಂದ ಕೂಡಿರುವಾಗ ಇಂದ್ರಿಯಗಳು ತನ್ನನ್ನು ಕೆಟ್ಟಸ್ಥಿತಿಗೆ ತರುತ್ತಲಿವೆಯೆಂದು ಅವನ್ನು ಬಲಾತ್ಕಾರದಿಂದ ದಂಡಿಸುವದಕ್ಕೆ ಹೊರಡುವನು. ಇಂದ್ರಿಯಗಳಿಗೆ ವಿಷಯಗಳಿಲ್ಲದಂತೆ ಮಾಡಿ ಸೊರಗಿಸಿದರೂ ಅಥವಾ ಬಾಹ್ಯವಿಷಯಗಳಿಗೆ ಮನಸೋತು ಇಂದ್ರಿಯಗಳನ್ನು ಸೂರೆಗೊಟ್ಟರೂ ಎರಡೂ ಒಂದೇ ; ಈ ಎರಡು ಸಂದರ್ಭಗಳಲ್ಲಿಯೂ ಮನಸ್ಸನ್ನು ಜಯಿಸಿದಂತಾಗಲಿಲ್ಲ. ನಿಜವಾಗಿ ಈ ಮನಸ್ಸನ್ನು ವಶಮಾಡಿಕೊಳ್ಳುವ ಉಪಾಯವು ಈ ಎರಡು ಮಾರ್ಗಗಳ ನಡುವೆ ಇರುವದು. ಈ ವಿಷಯದಲ್ಲಿ ಶ್ರೀಕೃಷ್ಣಭಗವಂತನು ಅಪ್ಪಣೆ ಕೊಡಿಸಿರುವದನ್ನು ನೋಡಿ :-

"ರಾಗದ್ವೇಷವಿಯುಕ್ತೈಸ್ತು ವಿಷಯಾನಿನ್ದ್ರಿಯೈಶ್ಚರನ್ ।
ಆತ್ಮವಶ್ಯೈರ್ವಿಧೇಯಾತ್ಮಾ ಪ್ರಸಾದಮಧಿಗಚ್ಛತಿ ॥"

(ಭಾವಾರ್ಥ- ವಿಷಯಗಳು ಬೇಕೆಂದು ಅವುಗಳ ಕಡೆಗೆ ನುಗ್ಗದೆ, ಬೇಡವೆಂದು ಹಿಂಜಗ್ಗದೆ, ತತ್ತತ್ಕಾಲದಲ್ಲಿ ಬಂದ ಅವರ್ಜನೀಯವಾದ ವಿಷಯಗಳನ್ನು ತನ್ನ ಸ್ವಾಧೀನದಲ್ಲಿರುವ ಇಂದ್ರಿಯಗಳಿಂದ ಉಪಯೋಗಿಸುವಾತನಿಗೆ, ಮನಸ್ಸು ಸ್ವಾಧೀನವಾಗಿರುವದು, ಅದು ಪ್ರಸನ್ನವೂ ಆಗಿರುವದು.)

ಹೀಗೆ ವಿಷಯೋಪಭೋಗವನ್ನು ಹತೋಟಿಯಲ್ಲಿಟ್ಟುಕೊಳ್ಳುವದೇ ದೇವಾಸುರಸಂಧಿಯು. ದೇವತೆಗಳೆಂದರೆ ಶುಭವಾಸನೆಯನ್ನು ಬೆಳಗುವ ಇಂದ್ರಿಯಗಳು ; ಅಸುರರೆಂದರೆ ಅಶುಭವಾಸನೆಗಳನ್ನು ಬೆಳಗುವ ಇಂದ್ರಿಯಗಳು. ಇವರಿಬ್ಬರ ಸಂಧಿಯೆಂದರೆ ವಿಷಯದಲ್ಲಿ ಹೆಚ್ಚಾಗಿ ಆಸಕ್ತಿಯಾಗಲಿ ದ್ವೇಷವಾಗಲಿ ಇಲ್ಲದಂತೆ ವೈರಾಗ್ಯದಿಂದಲೂ ತಾನು ಮುಂದೆ ಪಡೆಯಬೇಕಾಗಿರುವ ಮನಃಪ್ರಸನ್ನತೆಯೆಂಬ ಸ್ಥಿತಿಯನ್ನು ಕುರಿತು ಮತ್ತೆಮತ್ತೆ ವಿಚಾರಿಸುವ ವಿವೇಕದಿಂದಲೂ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡಿರುವದು. ಹೀಗೆ ವಶ್ಯೇಂದ್ರಿಯರಾದವರಿಗೆ ಏನು ಸಿದ್ಧಿಯಾದೀತು, ಏನಾಗಲಾರದು?

ಇರಲಿ, ಇನ್ನು ಕಥೆಯನ್ನು ಸಾಗಿಸೋಣ. ದೇವಾಸುರರು ಹಿಂದೆ ಹೇಳಿದಂತೆ ಸಂಧಿಯನ್ನು ಮಾಡಿಕೊಂಡು ಪರಮೋತ್ಸಾಹದಿಂದ ಮಂದರಪರ್ವತದ ಬಳಿಗೆ ಬಂದರು. ಆಗ ಇವರಿಗೆ ಬೆಂಬಲವಾಗಿ ಶ್ರೀಮನ್ನಾರಾಯಣನು ಅನಂತನೆಂಬ ಫಣೀಂದ್ರನನ್ನು ಕಳುಹಿಸಿದನು. ದೇವತೆಗಳೆಲ್ಲರೂ ಅಸುರರೆಲ್ಲರೂ ಸೇರಿ ಒಂದೇ ಸಲಕ್ಕೆ ಮಂದರಪರ್ವತವನ್ನು ಅನಂತನಿಂದ ಸುತ್ತಿಹಿಡಿದೆತ್ತಲು ಬಾಲಕರ ಕೈಯಲ್ಲಿ ಚಂಡು ಆಡಕವಾಗುವಂತೆ ಅವರಿಗೆ ಆ ಪರ್ವತವು ವಶವಾಯಿತು. ಎಲ್ಲರೂ ಸೇರಿ ಉತ್ಸಾಹದಿಂದ ಮಂದರಪರ್ವತವನ್ನು ತೆಗೆದುಕೊಂಡುಹೋಗಿ ಸಾಗರದಲ್ಲಿ ಹಾಕಿಬಿಟ್ಟರು !

ಕಲ್ಲು ತೇಲುವದಿಲ್ಲ, ಬೆಂಡು ಮುಳುಗುವದಿಲ್ಲ- ಎಂಬುದು ಅತ್ಯಂತ ಮೂಢರಿಗೂ ತಿಳಿದಿರುವ ವಿಷಯವು. ಹೀಗಿರುವಲ್ಲಿ ದೇವತೆಗಳೂ ಅಸುರರೂ ಪರ್ವತವು ನೀರ ಮೇಲೆ ನಿಲ್ಲುವ ಪರಿ ಹೇಗೆಂದು ವಿಚಾರವನ್ನೇ ಮಾಡದೆ ಸಮುದ್ರದಲ್ಲಿ ಪರ್ವತವನ್ನಿಟ್ಟು ಕಡೆಯುವೆವೆಂದೂ ಯೋಚಿಸಿಕೊಂಡದ್ದು ಹೇಗೆಂದು ಕೆಲವರು ಶಂಕಿಸಬಹುದು. ಆದರೆ

ದೇವತೆಗಳಿಗೆ ನಾರಾಯಣನ ಅಭಯಪ್ರದವಾದ ವಾಕ್ಯದಲ್ಲಿ ನಂಬಿಕೆಯಿತ್ತು. ಅಸುರರಿಗೆ ತಮ್ಮ ಲೋಕವಿಲಕ್ಷಣವಾದ ಭುಜಬಲದಲ್ಲಿ ನಂಬಿಕೆಯಿತ್ತು. ವಸ್ತುಸ್ವರೂಪದ ನಿಜವಾದ ತಿಳಿವಳಿಕೆಯಿದ್ದವರಿಗೆ ಅವುಗಳನ್ನು ಬೇಕಾದಹಾಗೆ ಉಪಯೋಗಿಸಿಕೊಳ್ಳುವೆವೆಂಬ ನ್ಯಾಯವಾದ ಧೈರ್ಯವೂ ಅಂಥ ತಿಳಿವಳಿಕೆಯಿಲ್ಲದ ಮೂಢರಿಗೆ ಅವುಗಳಿಂದ ಆಗದ ಕಾರ್ಯವನ್ನು ಕೂಡ ಮಾಡಿಕೊಳ್ಳುವೆವೆಂಬ ಒಣ ಧೈರ್ಯವೂ ಇರುವದು ಸ್ವಭಾವವಷ್ಟೆ. ಹೀಗೆ ಉತ್ಸಾಹಶಾಲಿಗಳಿಗೆಲ್ಲ ಸ್ವಾಭಾವಿಕವಾಗಿರುವ ಧೈರ್ಯವು ದೇವತೆಗಳಿಗೂ ಅಸುರರಿಗೂ ಇದ್ದದ್ದರಿಂದಲೇ ಈ ಮಹಾಕಾರ್ಯವನ್ನು ಹೇಗೆ ಮಾಡಿಯೇವೆಂಬ ಶಂಕೆಯೇ ಇಲ್ಲದೆ ಅವರು ಮಂದರವನ್ನು ಸಮುದ್ರದಲ್ಲಿ ಹಾಕಿದರು. ಮುಂದಿನ ಕಾರ್ಯವನ್ನು ಸರಿಯಾಗಿ ಆಗಿಸಬೇಕೆಂಬ ಸಂಕಲ್ಪದಿಂದ ಶ್ರೀಮಹಾವಿಷ್ಣುವೇ ಕೂರ್ಮರೂಪದಿಂದ ಆ ಪರ್ವತವನ್ನು ಹೊತ್ತುಕೊಂಡು ಬಿಟ್ಟನು. ಹೀಗೆ ಮಂದರವನ್ನು ಕಡೆಗೋಲಾಗಿ ಮಾಡಿಕೊಂಡು ವಾಸುಕಿಯನ್ನು ಹಗ್ಗವಾಗಿಟ್ಟುಕೊಂಡು ಮೊದಲೇ ಗೊತ್ತಾಗಿದ್ದಂತೆ ಅಸುರರು ಬಾಯಕಡೆಗೂ ದೇವತೆಗಳು ಬಾಲದ ಕಡೆಗೂ ನಿಂತುಕೊಂಡು ಅತಿವೇಗವಾಗಿ ಕಡೆಯುವದಕ್ಕೆ ಮೊದಲುಮಾಡಿದರು.

ಇಷ್ಟರಲ್ಲಿ ಒಂದು ಚಮತ್ಕಾರವಾಯಿತು. ವಾಸುಕಿಯು ಉಸಿರನ್ನು ಕಟ್ಟಿ ಬಿಡಬೇಕಾಗಿಬಂದದ್ದರಿಂದ ಆಗಾಗ ಆತನ ಮುಖದಿಂದ ಬಿಸಿಯಾದ ನಿಟ್ಟುಸಿರುಗಳು ಬರುವದಕ್ಕಾರಂಭಿಸಿದವು. ಆ ಉಸಿರುಗಳು ಅಸುರರ ಕಡೆಗೇ ಬರುತ್ತಿದ್ದದ್ದರಿಂದ ಅವುಗಳ ಉರಿಯನ್ನೂ ಹೊಗೆಯನ್ನೂ ತಡೆಯಲಾರದೆ ಅವರು ಬಹುವಾಗಿ ಬಳಲಿಹೋದರು. ಆದರೆ ಅದೇ ಉಸಿರುಗಳು ಮೇಲಕ್ಕೆದ್ದು ಮೋಡಗಳನ್ನು ಅತ್ತಿತ್ತ ಚದುರಿಸುತ್ತ ಬರಲು ಅದರಿಂದ ಬಿದ್ದ ಮಳೆಯಹನಿಗಳು ದೇವತೆಗಳ ಶ್ರಮವನ್ನು ಪರಿಹರಿಸುವದಕ್ಕೆ ಚೆಲ್ಲಿದ ಪನ್ನೀರ ಹನಿಗಳಾದವು. ತಾವು ವಾಸುಕಿಯ ಬಾಲವನ್ನು ಹಿಡಿಯೆವೆಂದು ಮಾಡಿಕೊಂಡ ಪ್ರತಿಜ್ಞೆಯ ಫಲವಿದೆಂದು ಆಗಲೂ ಅಸುರರಿಗೆ ಹೊಳೆಯದೆ ಹೋಯಿತು. **ಅಹಂಕಾರಿಗಳಿಗೆ ವಿಚಾರಶಕ್ತಿಯೆಲ್ಲಿಯದು?** ಇದಿರಲಿ, ಆಗ ಹುಟ್ಟಿದ ಬಿರುಗಾಳಿಯಿಂದ ಪರ್ವತಶಿಖರದಿಂದ ಜಗುಳಿಬಿದ್ದ ಹೂಗಳ ಮಳೆಯು ಆ ಸುರಾಸುರರ ಸುತ್ತಲೂ ಅತಿಮನೋಹರವಾದ ನೋಟವನ್ನುಂಟುಮಾಡಿತು. ಆದರೆ ಸಮುದ್ರವನ್ನು ಕಡೆಯುವಾಗ ಉಂಟಾದ ಮಹಾನಾದವು ಮಾತ್ರ, ದೊಡ್ಡ ಗುಡುಗಿನ ಧ್ವನಿಯಂತೆಯೂ ಸಿಡಿಲಿನ

ಶಬ್ದದಂತೆಯೂ ಇದ್ದದ್ದರಿಂದ ಕೇಳುವವರ ಕಿವಿಗಳನ್ನು ಕಿವುಡುಮಾಡುವಂತಿತ್ತು. ಗಿರ್ರನೆ ಬುಗುರಿಯಂತೆ ತಿರುಗುತ್ತಿದ್ದ ಆ ಮಹಾದ್ರಿಯು ಹೊಡೆದು ಅಲ್ಲಿದ್ದ ಜಲಚರಗಳು ನೂರುನೂರುಗಟ್ಟಲೆಯಾಗಿ ಸತ್ತುಬೀಳುತ್ತಿದ್ದವು. ಸಮುದ್ರದ ತಳದಲ್ಲಿ ಇದ್ದ ಎಷ್ಟೋ ಪ್ರಾಣಿಗಳು ನೀರಿನ ಆ ಕ್ಷೋಭೆಯನ್ನು ಸಹಿಸಲಾರದೆ ಮೇಲಕ್ಕೆದ್ದು ರಪ್ಪೆಂದು ಹೊಡೆಯುತ್ತಿದ್ದ ಆ ಪರ್ವತದ ಅಂಚಿನಿಂದ ಹತವಾಗುತ್ತಿದ್ದವು. ವೇಗದಿಂದ ತಿರುಗುತ್ತಿದ್ದ ಆ ಪರ್ವತದ ಮೇಲಿದ್ದ ನೂರಾರು ಮರಗಳು ಒಂದಕ್ಕೊಂದು ತಾಟಾಡುತ್ತಾ ತಮ್ಮ ಕೊಂಬೆಗಳ ಮೇಲೆ ನಿಶ್ಯಂಕೆಯಿಂದ ಗೂಡುಕಟ್ಟಿಕೊಂಡು ವಾಸಿಸುತ್ತಿದ್ದ ಪಕ್ಷಿಗಳೊಡನೆ ಧೊಪ್ಪೆಂದು ಮುರಿದುಬೀಳುತ್ತಿದ್ದವು. ಹಾಗೆ ಬೀಳುತ್ತಿರುವ ಹೆಮ್ಮರಗಳೂ ಅವುಗಳ ಕೊಂಬೆಗಳೂ ಒಂದಕ್ಕೊಂದು ತಿಕ್ಕಿ ಹೊರಟ ಬೆಂಕಿಯ ಜ್ವಾಲೆಗಳೂ ಆ ಮಂದರಗಿರಿಯನ್ನು ಸುತ್ತಿಕೊಳ್ಳಲು ಕರಿಯ ಮೋಡದಲ್ಲಿ ಬಿಳಿಯ ಬಳ್ಳಿಮಿಂಚುಗಳು ಕಾಣಿಸಿಕೊಂಡಂತೆ ತೋರುತ್ತಿತ್ತು. ಆ ಪರ್ವತದ ಗವಿಗಳಲ್ಲಿ ಯಾವ ಯೋಚನೆಯೂ ಇಲ್ಲದೆ ಮಲಗಿ ನಿದ್ರಿಸುತ್ತಿದ್ದ ಹುಲಿಗಳೂ ಸಿಂಹಗಳೂ ಅಲ್ಲಲ್ಲಿ ಮದಿಸಿ ತಿರುಗಾಡುತ್ತಿದ್ದ ಹೇರಾನೆಗಳೂ ಇದ್ದಕಿದ್ದಹಾಗೆ ಬೆಚ್ಚಿಬಿದ್ದು ಪರ್ವತದ ಚಲನೆಗೆ ಕಾರಣವನ್ನು ತಿಳಿಯದೆ ಗರ್ಜಿಸುತ್ತಲೂ, ಘೀಳಿಡುತ್ತಲೂ ದಿಕ್ಕುದಿಕ್ಕಿಗೆ ಚದರಿಹೋಗಿ ಆ ಮೊದಲೇ ಆ ಭಾಗವನ್ನು ಆಕ್ರಮಿಸಿದ್ದ ಮಹಾಗ್ನಿಗೆ ತುತ್ತಾಗುತ್ತಿದ್ದವು. ಹೀಗೆ ಕಡೆತದಿಂದ ಪರ್ವತವೇಗವೂ, ಪರ್ವತದ ವೇಗದಿಂದ ವಾಯುವೇಗವೂ, ವಾಯುವಿನ ವೇಗದಿಂದ ಗಿಡಮರಗಳ ಭಂಗವೂ, ಆ ಮರಗಳ ಮುರಿಯುವಿಕೆಯಿಂದ ಛಿಟಿಛಿಟಿಲುಛಿಟಿಲೆಂಬ ಕರ್ಣಕಠೋರವಾದ ಶಬ್ದವೂ, ಅವುಗಳ ತಿಕ್ಕಾಡುವಿಕೆಯಿಂದ ಉರಿದೇಳ್ವ ಬೆಂಕಿಯ ಜ್ವಾಲೆಗಳೂ, ಆ ಬೆಂಕಿಯ ಜ್ವಾಲೆಗಳಿಂದ ಎಲ್ಲೆಲ್ಲಿಯೂ ದಿಕ್ಕುಗೆಟ್ಟು ಓಡಾಡುತ್ತಿರುವ ಪ್ರಾಣಿಗಳು ಒಂದಕ್ಕೊಂದು ತಾಟಾಡಿ ರೋಷದಿಂದ ಕಚ್ಚಿ ಕಾದಾಡಿ ಚೀರುವ ಆರ್ಭಟೆಯೂ ಅಷ್ಟರಲ್ಲಿಯೇ ಅವು ವೇಗದಿಂದ ಉಸಿರುಕಟ್ಟಿ ಹೊಗೆಯಿಂದ ಕಣ್ಣುಕಾಣದೆ ಬೆಂಕಿಯಿಂದ ಬೆಂದು ಉರಿದು ಸೀಕರಿಯಾಗುವಲ್ಲಿ ಕೇಳಿಬರುವ ಸಿಮಿಸಿಮಿಧ್ವನಿಯು ಆ ಸ್ಥಳವನ್ನು ನೋಡುವವರಿಗೆ ಮೊದಲು ಆಶ್ಚರ್ಯವನ್ನೂ ಆಮೇಲೆ ಉತ್ಸಾಹವನ್ನೂ ಮತ್ತೆ ಸ್ವಲ್ಪಹೊತ್ತಿನಲ್ಲಿ ಉದ್ವೇಗವನ್ನೂ ಇನ್ನೂ ಸ್ವಲ್ಪ ಹೊತ್ತಿನಲ್ಲಿ ಮರುಕವನ್ನೂ ಉಂಟುಮಾಡಿ ಮತ್ತೆ ಕ್ಷಣಾರ್ಧದಲ್ಲಿ ಅಸಹ್ಯವನ್ನೂ ಔದಾಸೀನ್ಯವನ್ನೂ ಹುಟ್ಟಿಸುವಂತಿದ್ದವು !

ನಾರಾಯಣನ ಅಪ್ಪಣೆಯಂತೆ ಬಗೆಬಗೆಯ ಸೊಪ್ಪು, ಸೆದೆ, ಗಿಡ, ಬಳ್ಳಿ- ಇವುಗಳನ್ನೆಲ್ಲ ಸಮುದ್ರದಲ್ಲಿ ಈ ಮೊದಲೇ ತಂದುಹಾಕಿದ್ದರಷ್ಟೆ. ಅವುಗಳೆಲ್ಲ ಈ ಕಡೆತದಿಂದ ಒಡೆದು ಚೂರಾಗಿ ಚೂರ್ಣವಾಗಿ ಮುದ್ದೆಗಟ್ಟಿ, ಕೊನೆಗೆ ಸಮುದ್ರದ ನೀರಿನಲ್ಲಿ ಬೆರೆತುಹೋದವು. ಆಮೇಲೆ ಕ್ರಮಕ್ರಮವಾಗಿ ಕಡೆಯುತ್ತಾ ಕಡೆಯುತ್ತಾ ನೀರಿನ ಮೇಲೆ ಏನೋ ಹಾಲಿನ ಕೆನೆಯಂತೆ ಸ್ವಲ್ಪ ಪರೆಗಟ್ಟಿಕೊಂಡಿತು; ಸ್ವಲ್ಪಹೊತ್ತಿನಲ್ಲಿ ಅದು ಬೆಣ್ಣೆಯಂತಾಯಿತು; ಮತ್ತೂ ಸ್ವಲ್ಪಹೊತ್ತಿನಲ್ಲಿ ಆ ಬೆಣ್ಣೆಯೂ ಕಡೆತದ ಬಿಸಿಯಲ್ಲಿ ಕರಗಿ ಮತ್ತೆ ಸಮುದ್ರದಲ್ಲಿಯೇ ಮಾಯವಾಯಿತು !

ಈ ಸಂಸಾರಸಮುದ್ರದಲ್ಲಿ ವಿಷಯವಾಸನೆಗಳಿಂದ ಭಾರವಾಗಿರುವ ಅಂತಃಕರಣವೆಂಬ ಮಂದರಾದ್ರಿಯನ್ನು ಸದ್ವಾಸನೆಗಳೆಂಬ ದೇವತೆಗಳೂ ಅಸದ್ವಾಸನೆಗಳೆಂಬ ಅಸುರರೂ ಒಂದೊಂದು ಕಡೆಗೆ ನಿಂತು ಹಿಗ್ಗಾಮುಗ್ಗಾ ಎಳೆದು ಕಡೆಯುವಾಗ ಎಂಥೆಂಥ ಅದ್ಭುತಗಳು ಮೇಲಿಂದಮೇಲೆ ತೋರಿಕೊಳ್ಳುವವು !

---

## ಆರನೆಯ ತರಂಗ

(ಕಾಮಧೇನ್ವಾದಿಗಳ ಉತ್ಪತ್ತಿ)

ಹೀಗೆ ಪರಮೋತ್ಸಾಹದಿಂದ ಕೂಡಿ ದೇವಾಸುರರು ಸಾಗರವನ್ನು ಬಹುಕಾಲ ಕಡೆಯುತ್ತಿದ್ದರೂ ಭಗವಂತನ ಅಪ್ಪಣೆಯಾಗಿದ್ದಂತೆ ಅಮೃತವೇನೂ ಉತ್ಪತ್ತಿಯಾಗಲಿಲ್ಲ. ಹಾಗೆ ಕಡೆದು ಹೀಗೆ ಕಡೆದು ನೋಡಿದರು, ಅಮೃತೋತ್ಪತ್ತಿಯಿಲ್ಲ ; ಸ್ವಲ್ಪ ಸುಧಾರಿಸಿಕೊಂಡು ಮತ್ತೆ ಕಡೆದರು, ಅಮೃತೋತ್ಪತ್ತಿಯಿಲ್ಲ ; ಮತ್ತೆ ಬೇಗಬೇಗನೆ ಕಡೆದುನೋಡಿದರು, ಅಮೃತೋತ್ಪತ್ತಿಯಾಗಲಿಲ್ಲ. ಕೆಲವು ಕಾಲ ಒಂದೇಸಮನೆ ಕಡೆದು ನೋಡಿದರು, ಯಾವ ಅಮೃತವೂ ಇಲ್ಲ. ಹೀಗೆ ಕಡೆದುಕಡೆದು ಸಾಕಾಗಿ ದೇವತೆಗಳೂ ಅಸುರರೂ ಒಬ್ಬರ ಮುಖವನ್ನು ಒಬ್ಬರು ನೋಡಹತ್ತಿದರು; ಮತ್ತೆ ಸ್ವಲ್ಪಹೊತ್ತಿನಲ್ಲಿ ಎಲ್ಲರಿಗೂ ಬೇಸರವಾಗಿ ಉಸ್ಸೆಂದು ಕೂತರು.

ಆದರೆ ಚತುರ್ಮುಖಬ್ರಹ್ಮನು ಬೇಸರಪಡಲಿಲ್ಲ. ಸ್ವಲ್ಪ ಹೊತ್ತಿನಲ್ಲಿಯೆ ಅವರನ್ನೆಲ್ಲ ಬೆನ್ನು ಚಪ್ಪರಿಸಿದನು. ಕಾರ್ಯವು ತುಸು ಕಷ್ಟವಾಗಿದ್ದರೆ ಸುಮ್ಮನೆ ತಲೆಯಮೇಲೆ ಕೈಜೋಡಿಸಿಕೊಂಡು ಕೂರಬಹುದೆ? ನಡುವೆ

ಬರಬಹುದಾದ ಅಡ್ಡಿಗಳಿಗೆ ಎದೆಗೆಡದೆ ಸ್ಥಿರಪ್ರಯತ್ನದಿಂದ ಕಾರ್ಯವು ಕೈಗೂಡುವವರೆಗೂ ಕೆಲಸವನ್ನು ಕೈಬಿಡದೆ ಇರುವುದೇ ಧೀರರ ಲಕ್ಷಣವು- ಎಂದು ಅಡಿಗಡಿಗೂ ಅವರಿಗೆ ಧೈರ್ಯವನ್ನು ಹೇಳಿ ಹುರಿದುಂಬಿಸುತ್ತಿದ್ದ ಆತನ ಪ್ರೋತ್ಸಾಹಕವಾಕ್ಕುಗಳಿಂದ ಚೋದಿತರಾಗಿ ದೇವತೆಗಳೂ ಅಸುರರೂ ಕೋರಡೆಯನ್ನು ಕಂಡ ಜಾತ್ಯಶ್ವಗಳಂತೆ ಮೊದಲಿಗಿಂತಲೂ ವೇಗಾತಿಶಯದಿಂದ ಕಡೆಯುವದಕ್ಕೆ ಪ್ರಾರಂಭಿಸಿದರು.

ಉದ್ಯೋಗಶೀಲರಿಗೆ ಮೊದಮೊದಲು ಕಷ್ಟವಾಗಿದ್ದ ಕೆಲಸವೇ ಬರುಬರುತ್ತ ಸುಖಕರವಾಗಿ ತೋರಹತ್ತುವದು ಸ್ವಾಭಾವಿಕವಷ್ಟೆ. ಅದರಂತೆ ಈಗ ದೇವಾಸುರರ ಕಾರ್ಯಕ್ಕೆ ಶುಭಶಕುನಗಳು ತೋರುತ್ತಾಬಂದವು. ಕಾರ್ಯದಲ್ಲಿದ್ದ ಅತ್ಯುತ್ಸಾಹದಿಂದ ಮೊದಲು ಇವರು ಬಲುವೇಗದಿಂದ ಕಡೆಯುತ್ತಿದ್ದರಷ್ಟೆ ; ಈಗ ಸ್ವಲ್ಪ ಹೊತ್ತಾದಮೇಲೆ ಅಂಥ ಅತಿವೇಗದ ಬಿರುಸು ಕಡಿಮೆಯಾಯಿತು. ನಡುವೆ ಫಲಾಶೆಯನ್ನು ತೊರೆದಾಗ ವೇಗವನ್ನು ತೀರ ಕಡಿಮೆಮಾಡಿಬಿಟ್ಟಿದ್ದರು; ಈಗ ಅಂಥ ಮಂದವೇಗದ ಸೋಲೂ ಇಲ್ಲವಾಯಿತು. ಶಾಂತಿಯಿಂದ ಕೂಡಿ ಸಮತೂಕ ಬರುವಂತೆ ಹಿಡಿದು ಸಮವೇಗದಿಂದ ಕಡೆಯುವದಕ್ಕೆ ಪ್ರಾರಂಭಮಾಡಿದರೋ ಇಲ್ಲವೋ, ಕಾರ್ಯದಲ್ಲಿ ಅವರಿಗಿದ್ದ ಬೇಸರವು ಕಡಿಮೆಯಾಗುವಂತೆ ಹೊರಗಿನ ಅನುಕೂಲ ಸಂಪತ್ತಿಯೂ ಉಂಟಾಗುವಂತಾಯಿತು. ಗಾಳಿಯು ಈಗ ಪ್ರಸನ್ನವಾಗಿ ಬೀಸುವದಕ್ಕೆ ಮೊದಲುಮಾಡಿದ್ದರಿಂದ ಇವರಿಗೆಲ್ಲಾ ಆಯಾಸಪರಿಹಾರವಾಗುವಂತೆ ಯಾರೋ ಬೀಸಣಿಗೆಯನ್ನು ಏರ್ಪಡಿಸಿದ ಹಾಗಾಯಿತು. ಸಮುದ್ರದಲ್ಲಿರುವ ಜಲಚರಗಳೂ ಪರ್ವತದ ಮೇಲಿದ್ದ ಮೃಗಪಕ್ಷಿಗಳೂ ಮೊದಮೊದಲಿನ ಕಾತರತೆಯನ್ನೂ ಭಯವನ್ನೂ ತೊರೆದು ಹೀಗೆ ಸಮುದ್ರದಲ್ಲಿ ಕಡೆತದಿಂದ ತಿರುಗತ್ತಿರುವದೇ ಈ ಪರ್ವತದ ಸ್ವಭಾವವಿರಬಹುದು- ಎಂಬ ವಿಶ್ವಾಸದಿಂದ ಸಂಚರಿಸಲಾರಂಭಿಸಿದವು. ಅವುಗಳ ಮೃದುಮಧುರ ಧ್ವನಿಯ ಗಾನವು ಇವರಿಗೆ ಕಿವಿಗಿಂಪಾಗಿ ತಮ್ಮನ್ನೆಲ್ಲಾ ಕಲಕಂಠಿಯರಾದ ಗಂಧರ್ವಸ್ತ್ರೀಯರೂ ಅಪ್ಸರಸ್ತ್ರೀಯರೂ ನೂತನಗೀತಗಳಿಂದ ಪ್ರೋತ್ಸಾಹಿಸುವಂತೆ ಭಾಸವಾಯಿತು. ಮೊದಲಿನಂತೆ ಪರ್ವತದಲ್ಲಿ ವೇಗವು ಕಂಡುಬರದೆ ಇದ್ದುದ್ದರಿಂದ ಕಾಡುಗಿಚ್ಚೂ ಏಳಲಿಲ್ಲ, ಹಿಂಸ್ರಮೃಗಾದಿಗಳ ಆರ್ಭಟೆಯೂ ಕಡಿಮೆಯಾಯಿತು.

ಎಲ್ಲಿಯವರೆಗೆ ಇಂಥ ಫಲವು ಆಗಬೇಕೆಂಬ ಅತ್ಯುತ್ಕಟವಾದ ಆಶೆಯು

ಬಾಧಿಸುತ್ತಿರುವದೋ ಅಲ್ಲಿಯವರೆಗೆ ಜನರು ಮಾಡುವ ಪ್ರಯತ್ನಗಳು ತೃಪ್ತಿಕರವಾಗಿರುವದಿಲ್ಲ. ಸನ್ನಿಪಾತಜ್ವರದಿಂದ ಸಿಕ್ಕಮಾತುಗಳನ್ನಾಡುತ್ತಿರುವ ರೋಗಿಗಳಂತೆ ಅವರು ತಮಗೆ ತೋಚಿದ ರೀತಿಯಲ್ಲಿ ಹರಕಲುಪರಕಲಾಗಿ ಮಾಡುವ ಯತ್ನವು ನಿಷ್ಫಲವಾಗುವದೇನಾಶ್ಚರ್ಯ ? ಉತ್ತಮ ಫಲವಾಗಬೇಕಾದರೆ ಉದ್ಯೋಗಶೀಲತೆಯು ಅವಶ್ಯ ; ಫಲವಾಗುವದೆಂಬ ಅತಿವಿಶ್ವಾಸದಿಂದಾಗಲಿ, ನಮ್ಮ ಕೈಯಲ್ಲಿ ಈ ಕಾರ್ಯವು ಹೇಗಾದೀತೆಂಬ ಅವಿಶ್ವಾಸದಿಂದಾಗಲಿ, ಈ ಕಾರ್ಯವು ಹೇಗೆ ಕೈಗೂಡಬೇಕೋ ಕಾಣೆನು-ಎಂಬ ಮೌಢ್ಯವೃತ್ತಿಯಿಂದಾಗಲಿ, ಮನಸ್ಸು ತಲ್ಲಣಗೊಳ್ಳುತ್ತಿರುವರೆಗೂ ನಿಜವಾದ ಉದ್ಯೋಗಶೀಲತೆಯು ಮೈದೋರುವದಿಲ್ಲ. ಆದರೆ ಶಾಂತಿಯಿಂದುಂಟಾದ ಸಮತೆಯು ಮನಸ್ಸಿನಲ್ಲಿ ಮೂಡಿದಮೇಲೆ ನಾವು ಮಾಡುವ ಅತ್ಯಲ್ಪಪ್ರಯತ್ನಕ್ಕೂ ಕೂಡ ಮಹಾಫಲವುಂಟಾಗುವದು. ಸರಿಯಾಗಿ ಜೋಡಿಸಿರುವ ಯಂತ್ರವಿಶೇಷಗಳಲ್ಲಿ ಒಬ್ಬ ಸಣ್ಣಹುಡುಗನು ಹಿಡಿಯನ್ನು ತಿರುಗಿಸಿದ ಮಾತ್ರಕ್ಕೇ ಮಹಾಮಹಾಚಲನೆಗಳುಂಟಾಗಿ ಅದ್ಭುತಕಾರ್ಯಗಳುಂಟಾಗುವದಿಲ್ಲವೆ ? ಮನಸ್ಸೆಂಬುದೂ ಒಂದು ಮಹಾಯಂತ್ರವೇ. ಇದು ಉತ್ತಮ ರೀತಿಯಲ್ಲಿ ಕಾರ್ಯಕಾರಿಯಾಗ ಬೇಕಾದರೆ ಇದಕ್ಕೆ ಸಮತೆಯೆಂಬುದೊಂದು ಸ್ಥಿತಿ ಬೇಕಾಗುವದು. ಸಮತೆಯು ಅಳವಟ್ಟ ಮಾತ್ರದಿಂದಲೇ ಮೊದಲು ವಿಘ್ನಕಾರಿಗಳಾಗಿದ್ದ ಸನ್ನಿವೇಶಗಳೇ ನಮಗೆ ಅನುಕೂಲಸಾಧನಗಳಾಗಿ ಪರಿಣಮಿಸುವವು. ದೇವಾಸುರರಿಗೆ ಮೊದಲು ಅನನುಕೂಲಗಳೂ ಆಮೇಲೆ ಅನುಕೂಲಗಳೂ ಒದಗಿದ್ದಕ್ಕೆ ಕಾರಣವನ್ನು ಈ ತತ್ತ್ವದ ಆಧಾರದಿಂದ ಸುಲಭವಾಗಿ ಮನಗಾಣಬಹುದಾಗಿದೆ.

ಸಮತ್ವದಿಂದೊಡಗೂಡಿದ ಮನಸ್ಸಿನಿಂದ ದೇವಾಸುರರು ಆ ಮಂದರಾದ್ರಿಯನ್ನು ಸಾಗರದಲ್ಲಿ ಕಡೆಯುತ್ತಿರಲು ಎಲ್ಲೆಲ್ಲಿಯೂ ಒಂದು ವಿಲಕ್ಷಣವಾದ ತೇಜಸ್ಸು ವ್ಯಾಪಿಸಿಕೊಂಡಂತೆ ಅವರಿಗೆ ತೋರಹತ್ತಿತು. ಆ ತೇಜಸ್ಸು ಹೊರಗೆ ಕಾಣುವ ಸೂರ್ಯಚಂದ್ರಾದಿಗಳ ಬೆಳಕಿನಂತೆ ಇರಲಿಲ್ಲ. ಮಂದರಾದ್ರಿಯನ್ನು ಹೊತ್ತಿದ್ದ ಕೂರ್ಮನಲ್ಲಿ ಆ ತೇಜಸ್ಸು ನಿಂತದ್ದರಿಂದಲೇ ಕೂರ್ಮನು ಸ್ವಲ್ಪವೂ ಆಯಾಸವನ್ನು ತೋರಿಸಲಿಲ್ಲವೋ ಏನೊ - ಎಂಬಂತೆ ಕಾಣಿಸುತ್ತಿತ್ತು. ದೇವತೆಗಳಲ್ಲಿಯೂ ಅಸುರರಲ್ಲಿಯೂ ಬೇರೆಬೇರೆಯ ರೂಪದಲ್ಲಿ ಆ ತೇಜಸ್ಸು ಕಾಣಿಸಿಕೊಂಡಿತು. ಇದರಿಂದ ಅವರಲ್ಲಿ ಪೂರ್ವವಿಲಕ್ಷಣವಾದ ಒಂದು ಬಗೆಯ ಉತ್ಸಾಹವು ತೋರಿಕೊಂಡಿತು.

ಮಂದರಕ್ಕೆ ಕಟ್ಟಿದ್ದ ನಾಗರಾಜನಾದ ವಾಸುಕಿಗೂ ಆ ತೇಜಸ್ಸು ವ್ಯಾಪಿಸಿಕೊಂಡಂತಾಗಿ, ಆಯಾಸಕ್ಕೆ ಬದಲು ಮಹಾಹರ್ಷವೊಂದು ಉತ್ಪನ್ನವಾಯಿತು. ಬೆಟ್ಟದ ಮೇಲೆಯೂ ಅದೇ ತೇಜಸ್ಸು ರೂಪಾಂತರದಿಂದ ಹಬ್ಬಿಕೊಂಡದ್ದರಿಂದ ಅದನ್ನು ನೋಡುವವರಿಗೆ ಒಂದು ಬಗೆಯ ಪ್ರಸನ್ನತೆಯುಂಟಾಗುತ್ತಿತ್ತು.

ಇಂಥ ಸುಸಮಯದಲ್ಲಿ ಸಮುದ್ರದಿಂದ ಕಾಮಧೇನುವು ಮೊದಲು ಹೊರಟುಬಂತು. ಇದೇನೆಂದು ಸಿದ್ಧಪುರುಷರು ಕೂಡ ಬೆರಗಾಗಿ ನೋಡುತ್ತಿರಲು ಬಳ್ಳಿಮಿಂಚಿನಂತಿರುವ ಬಾಲವನ್ನು ಎತ್ತಿಕೊಂಡು ಮೈಯಲ್ಲಿ ಕೂದಲುಗಳು ನೆಟ್ಟಗಾಗಿರುವಂತೆ ಮಾಡಿಕೊಂಡು ದೇವತೆಗಳಿಗೂ ದಾನವರಿಗೂ ಸಂತೋಷವನ್ನೂ ವಿಕ್ಷೇಪವನ್ನೂ ಉಂಟುಮಾಡುತ್ತಾ ಆ ಹವಿರ್ದ್ರವ್ಯಗಳಿಗೆ ಮೂಲಸ್ಥಾನವಾದ ಸುರಭಿಯು ಈಚೆಗೆ ಬಂದು ಅಲ್ಲಿದ್ದ ಬ್ರಹ್ಮಾದಿಗಳ ಪಕ್ಕದಲ್ಲಿ ನಿಂತುಕೊಂಡಿತು. ದೇವತೆಗಳೂ ಅಸುರರೂ ಪರಮೋತ್ಸಾಹದಿಂದ ಮತ್ತೆ ಕಡೆಯಲು ತನ್ನ ಸುವಾಸನೆಯಿಂದ ಎಲ್ಲರ ಮೂಗಿನ ಸೆಲೆಯೆನ್ನೂ ಬಡಿಯುತ್ತಾ ಕಲ್ಪವೃಕ್ಷವು ಮೇಲಕ್ಕೆ ಬಂತು. ಈ ಕಲ್ಪವೃಕ್ಷವು ಯಾರ ಮನಸ್ಸಿನಲ್ಲಿ ಏನು ಬೇಕೆಂದರೆ ಅಂಥ ಫಲವನ್ನು ಆ ಕೂಡಲೆ ತೋರಿಸುತ್ತ ಎಲ್ಲರಿಗೂ ವಿಸ್ಮಯವನ್ನುಂಟುಮಾಡುತ್ತಿತ್ತು. ಮತ್ತೊಂದು ಕ್ಷಣದಲ್ಲಿ ಮಹಾಶುಭ್ರತೇಜಸ್ಸಿನಿಂದ ಹೊಳೆಯುತ್ತಾ ಉಚ್ಚೈಃಶ್ರವಸ್ಸೆಂಬ ಕುದುರೆಯು ಎದ್ದುಬಂದಿತು. '' ಈ ಬಿಳಿಯ ಕುದುರೆಯ ಜೋಡಿಗೆ ನಾನೇ ಸರಿ'' ಎಂದು ಹೇಳುವಂತೆ ಇನ್ನೊಂದು ಕ್ಷಣಾರ್ಧದಲ್ಲಿ ಐರಾವತವೆಂಬ ನಾಲ್ಕುದಂತದ ಬಿಳಿಯ ಆನೆಯೂ ಹೊರಕ್ಕೆ ಬಂದಿತು. ಈ ಕುದುರೆಯೂ ಆನೆಯೂ ಇಂದ್ರನನ್ನೇ ತಮ್ಮ ಕಟಾಕ್ಷದಿಂದ ನೋಡುತ್ತಿದ್ದವು. ಆಮೇಲೆ ಕೌಸ್ತುಭವೆಂಬ ದಿವ್ಯವಾದ ಬೆಲೆಯುಳ್ಳ ರತ್ನವೊಂದು ಉತ್ಪನ್ನವಾಯಿತು. ಆಮೇಲೆ ದಿವ್ಯಾಂಬರವನ್ನು ಧರಿಸಿದವರಾಗಿಯೂ ಹಾವಭಾವವಿಲಾಸಗಳಿಂದಲೂ ಗೀತಾನೃತ್ಯಾದಿ ಗಳಿಂದಲೂ ಎಲ್ಲರ ಮನಸ್ಸನ್ನೂ ಆಕರ್ಷಿಸುತ್ತಾ ಸ್ವರ್ಣಭೂಷಣವನ್ನು ಧರಿಸಿದವರಾಗಿಯೂ ಇರುವ ಅಪ್ಸರಸ್ತ್ರೀಯರೇ ಮುಂತಾದವರು ಹುಟ್ಟಿದರು. ಆಮೇಲೆ ತನ್ನ ಸಹಸ್ರಾರು ಕಿರಣಗಳಿಂದ ಜನರೆಲ್ಲರಿಗೂ ಅಮೃತಸೇಚನವನ್ನು ಮಾಡುವಂತೆ ಶೀತಾಂಶುವಾದ ಚಂದ್ರನು ಗೋಚರನಾದನು.

ಕೊನೆಗೆ ಕೈಯಲ್ಲಿ ಲೀಲಾಕಮಲವನ್ನು ಧರಿಸಿ ಎಲ್ಲಾ ದಿಕ್ಕುಗಳಿಗೂ ತನ್ನ ಮಿಂಚಿನಂತಿರುವ ಶರೀರಲಾವಣ್ಯದಿಂದ ಹೊಸ ಶೋಭೆಯನ್ನುಂಟು ಮಾಡುತ್ತಾ ದಿವ್ಯಾದ್ಭುತಸೌಂದರ್ಯದಿಂದ ಕೂಡಿದವಳಾಗಿ ಶ್ರೀಮಹಾಲಕ್ಷ್ಮಿಯೇ ಅವರೆಲ್ಲರ ದೃಕ್ಪಥಕ್ಕೆ ಗೋಚರಳಾದಳು. ಆಗ ಅಲ್ಲಿದ್ದ ಸುರಾಸುರರೂ ಮಹರ್ಷಿಗಳೂ ಆಕೆಯ ದೃಕ್ಪಾತಮಾತ್ರದಿಂದ ಚಮಕಿತರಾಗಿರಲು ಗಂಗಾದಿನದಿಗಳು ಪೂರ್ಣಪ್ರವಾಹದಿಂದ ಆಕೆಯ ಅಭಿಷೇಕಕ್ಕೆ ಸನ್ನಿಹಿತವಾದವು ; ಎಂಟು ದಿಕ್ಕುಗಳಲ್ಲಿಯೂ ಇರುವ ಆನೆಗಳು ಚಿನ್ನದ ಕಲಶಗಳಿಂದ ನೀರನ್ನು ಹಾಕಿ ಸ್ನಾನಮಾಡಿಸಿದವು ; ಇಂದ್ರನು ದಿವ್ಯವಾದ ಆಸನವನ್ನು ತಂದಿಟ್ಟನು ; ಕಾಮಧೇನುವೂ ವಸಂತನೂ ಋಷಿಗಳೂ ಎಲ್ಲರೂ ಸ್ನಾನಕ್ಕೆ ಸಹಾಯಮಾಡಿದರು ; ಗಂಧರ್ವರು ಗಾನಮಾಡುತ್ತಿರಲು, ಅಪ್ಸರಸ್ತ್ರೀಯರು ನರ್ತನಮಾಡುತ್ತಿರಲು ಮೇಘ ದೇವತೆಗಳು ಮೃದಂಗ, ಪಣವ, ಮುರಜ, ಆನಕ, ಗೋಮುಖ - ಮುಂತಾದವುಗಳನ್ನೂ ಶಂಖ, ವೇಣು, ವೀಣೆ- ಮುಂತಾದವುಗಳನ್ನೂ ಬಾರಿಸುತ್ತಿರಲು, ಉಚಿತಾಸನದಲ್ಲಿ ಕುಳಿತಿದ್ದ ಆ ಮಹಾದೇವಿಗೆ ಸಮುದ್ರರಾಜನೇ ಪೀತಾಂಬರವನ್ನು ತಂದು ಹೊದಿಸಿದನು. ವರುಣನು ಝೇಂಕರಿಸುತ್ತಿರುವ ಭ್ರಮರಗಳಿಂದ ಮುಸುಕಿರುವ ಎಂದೆಂದಿಗೂ ಬಾಡದಿರುವ ವೈಜಯಂತೀಮಾಲೆಯನ್ನು ಕೊರಳಿಗೆ ಹಾಕಿದನು; ವಿಶ್ವಕರ್ಮನು ಬಗೆಬಗೆಯ ಭೂಷಣಗಳನ್ನು ಇಟ್ಟನು ; ಬ್ರಹ್ಮನು ಮುಕ್ತಾಹಾರವನ್ನೂ, ಸರಸ್ವತಿಯು ಪದ್ಮವನ್ನೂ, ನಾಗರುಕುಂಡಲಗಳನ್ನೂ ಹಾಕಿದರು. ಹೀಗೆ ಸ್ನಾನಮಾಡಿ ದಿವ್ಯಗಂಧ, ದಿವ್ಯಮಾಲ್ಯ, ದಿವ್ಯಾಂಬರ, ದಿವ್ಯ ಭೂಷಣಗಳಿಂದ ಅಲಂಕೃತೆಯಾಗಿ ಕುಂಡಲಾದಿಗಳ ಝಗಝಗಿಸುವ ಕಾಂತಿಯಿಂದಲೂ ನೇತ್ರಗಳೆರಡರಿಂದಲೂ ಹೊರಡುವ ತಂಗದಿರಿನಿಂದಲೂ ಸ್ವಭಾವಸಿದ್ಧವಾದ ಶರೀರಕಾಂತಿಯಿಂದಲೂ ದಿವ್ಯತೇಜೋರಾಶಿಯಾಗಿ ಎಲ್ಲರಿಗೂ ಮೋಹವನ್ನುಂಟುಮಾಡುತ್ತಾ ಮಂದಹಾಸವೆಂಬ ಬೆಳದಿಂಗಳಿಂದ ಎಲ್ಲರನ್ನೂ ಸುಖಸಾಗರದಲ್ಲಿ ಮುಳುಗಿಸುತ್ತಾ ಕುಳಿತಿರುವ ಶ್ರೀಮಹಾಲಕ್ಷ್ಮಿಯನ್ನು ನೋಡಿ ದೇವತೆಗಳೆಲ್ಲರೂ ಒಂದೇ ಕಾಲದಲ್ಲಿ ''ಜಯ ಜಗಜ್ಜನನೀ ಮಹಾಲಕ್ಷ್ಮೀ, ಮಹಾಮಾಯೇ, ಜಯಜಯ ! '' ಎಂಬ ಜಯಧ್ವನಿಯಿಂದ ಹತ್ತುದಿಕ್ಕುಗಳನ್ನೂ ತುಂಬಿಬಿಟ್ಟರು.

## ಏಳನೆಯ ತರಂಗ

### (ಹಾಲಾಹಲದ ಉತ್ಪತ್ತಿ)

ಈ ಲೋಕದಲ್ಲಿ ಮನುಷ್ಯನು ಎಂಥ ಕರ್ಮಗಳನ್ನು ಆಚರಿಸಬೇಕೆಂಬುದೂ ಎಂಥವುಗಳನ್ನು ಬಿಡಬೇಕೆಂಬುದೂ ತಿಳಿಯುವದಕ್ಕೆ ಅಷ್ಟು ಸುಲಭವಲ್ಲ. ಎಷ್ಟೋ ಜನರು ಕರ್ಮದ ಆಯಾಸವೇಕೆಂದು ಕೈಬಿಡುವರು ; ಆದರೆ ಬಿಡುವದೂ ಒಂದು ಕರ್ಮವೇ, ಅದಕ್ಕೂ ಒಂದಲ್ಲದಿದ್ದರೆ ಒಂದು ಫಲವಾಗುವದು- ಎಂದು ನೆನೆಯುವವರು ಬಹುವಿರಳ. ಮತ್ತೆ ಕೆಲವರು ಯಾವ ಕರ್ಮವಾದರೇನು? ಅಂತೂ ಕೆಲಸವನ್ನು ಮಾಡುತ್ತಿದ್ದರಾಯಿತು -ಎಂದು ತಿಳಿಯುವರು. ಆದರೆ ಮಾಡಿದ **ಕರ್ಮದ ಸ್ವಭಾವಕ್ಕನುಗುಣವಾಗಿಯೇ ಫಲವಾಗುವದು ; ಆ ಫಲವು ಶುಭವಾಗಿರಲಿ ಅಶುಭವಾಗಿರಲಿ, ಅನುಭವಿಸಿಯೇತೀರಬೇಕಾಗುವದು** - ಎಂದು ಯೋಚಿಸುವವರು ಬಹುಕಡಿಮೆ. ಮತ್ತೂ ಕೆಲವರು ''ಏನು ಮಾಡಿದರೂ ಕರ್ಮವು ನಮಗೆ ಗಂಟುಬಿದ್ದಿರುವದು. ಏಕೆಂದರೆ ಕೆಲಸವನ್ನು ಬಿಟ್ಟರೂ ಅದರ ಫಲವನ್ನು ಅನುಭವಿಸಬೇಕು, ಮಾಡಿದರಂತೂ ಅನುಭವಿಸಲೇಬೇಕು ; ಅಂದಮೇಲೆ ಇದು ಕೆಟ್ಟ ಕರ್ಮವೆಂದು ಏತಕ್ಕೆ ಹೆದರೋಣ ? ಇಂದು ಮಾಡಿ ಇಂದು ಉಂಡದ್ದೇ ನಮ್ಮದು'' -ಎಂದು ದುಷ್ಕರ್ಮಗಳಿಂದಾದರೂ ತಮ್ಮ ಇಂದ್ರಿಯ ಭೋಗಗಳನ್ನು ಸಲ್ಲಿಸಿಕೊಳ್ಳುವದಕ್ಕೆ ಆರಂಭಿಸುವರು. ಆದರೆ ''ನಾವು ಕರ್ಮವನ್ನು ಮಾಡಿಯೂ ಫಲಕ್ಕೆ ಕಟ್ಟುಬೀಳದೆಯೂ ಇರುವ ಜಾಣತನದ ಕರ್ಮವೊಂದುಂಟು. ಈ ಕರ್ಮವೇ **ಕರ್ಮಯೋಗವು**. ಈ ಕರ್ಮದ ಕೌಶಲವನ್ನು ಸಂಪಾದಿಸುವದೇ ಈ ಸಂಸಾರದಲ್ಲಿ ಜನ್ಮವೆತ್ತಿದ್ದರ ಸಾರ್ಥಕ್ಯವು'' ಎಂಬ ಮಹಾತತ್ತ್ವವನ್ನು ಅರಿತವರಂತೂ ತೀರ ಕಡಿಮೆ. ಆದ್ದರಿಂದಲೇ ಶ್ರೀಕೃಷ್ಣಭಗವಂತನು -

**''ಕರ್ಮಣೋ ಹ್ಯಪಿ ಬೋದ್ಧವ್ಯಂ ಬೋದ್ಧವ್ಯಂ ಚ ವಿಕರ್ಮಣಃ I**
**ಅಕರ್ಮಣಶ್ಚ ಬೋದ್ಧವ್ಯಂ ಗಹನಾ ಕರ್ಮಣೋ ಗತಿಃ II''**

(ಭಾವಾರ್ಥ- ಕರ್ಮದ ವಿಷಯದಲ್ಲಿಯೂ ತಿಳಿದುಕೊಳ್ಳಬೇಕಾದದ್ದಿರುವದು ; ಕೆಟ್ಟ ಕರ್ಮವು ಎಂಥದ್ದೆಂಬ ವಿಷಯದಲ್ಲಿಯೂ

ತ್ರಿಳಿದುಕೊಳ್ಳಬೇಕಾದದ್ದಿರುವದು ; ಕರ್ಮವನ್ನು ಬಿಡುವದರ ಸ್ವರೂಪವನ್ನೂ ತ್ರಿಳಿದುಕೊಳ್ಳಬೇಕಾದದ್ದಿರುವದು. ಇದು ಕರ್ಮ, ಇದು ಅಕರ್ಮ, ಇದು ವಿಕರ್ಮ- ಎಂದು ನಿಶ್ಚಯಿಸುವದು ತುಂಬ ಗಹನವಾಗಿರುವದು) ಎಂದು ಅಪ್ಪಣೆ ಕೊಟ್ಟಿರುವನು.

ದೇವಾಸುರರು ಮೊದಲು ಸಮುದ್ರಮಥನವೆಂಬುದು ಆಗದ ಮಾತೆಂದು ಕೈಬಿಟ್ಟು ಕೂತರು. ಆಮೇಲೆ ಅವರಿವರ ಉತ್ಸಾಹವನ್ನು ಕಂಡುಕೇಳಿ ಇದೇನು ಮಹಾಕಾರ್ಯವೆಂದು ಅಸಡ್ಡೆಯಿಂದ ಮನಸ್ಸು ಬಂದಂತೆ ಕಡೆಯುವದಕ್ಕೆ ಪ್ರಾರಂಭಿಸಿದರು. ಈಗ ಇವೆರಡೂ ಸ್ಥಿತಿಗಳೂ ಹೋಗಿ ಕಾರ್ಯವು ಸ್ವಲ್ಪ ಫಲೋನ್ಮುಖವಾಗಲು ನಡುನಡುವೆ ಸಿಕ್ಕಿದ ಅಲ್ಪಸ್ವಲ್ಪಫಲಗಳಿಗೆ ಬಾಯಿನೀರುಕರೆಯುವದಕ್ಕೆ ಮೊದಲುಮಾಡಿದರು. ಒಬ್ಬನು ಹಾಲು ಕರೆಯುವಾಗ ಪಾತ್ರೆಯ ಕಡೆಗೂ ಹಾಲುಕರೆಯುವ ಕೃತಿಯ ಕಡೆಗೂ ಲಕ್ಷ್ಯವಿಡದೆ ಕರುವಿನ ಬಾಯಿಯ ತುದಿಯಲ್ಲಿರುವ ಹಾಲಿನ ನೊರೆಯನ್ನು ಕಂಡು ಹಾಲು ತನಗೆ ಸಿಕ್ಕದೆಹೋದೀತೆಂದು ಆ ನೊರೆಯನ್ನು ಕೂಡಿಹಾಕುವದಕ್ಕೆ ನಿಂತರೆ, ಆ ಪ್ರಯತ್ನದಲ್ಲಿ ಪಾತ್ರೆಯನ್ನು ಕೆಡವಿಕೊಂಡರೆ, ಅಂಥ ಮನುಷ್ಯನನ್ನು ಎಂಥ ಮೂಢನೆನ್ನಬೇಕು ! ಅಥವಾ ಮೊಸರು ಕಡೆಯುತ್ತಿರುವಾಗ ಅಲ್ಲಲ್ಲಿ ಕಡೆತದಿಂದ ತೇಲುಬಿದ್ದ ಚೂರುಪಾರು ಬೆಣ್ಣೆಯ ತುಂಡುಗಳನ್ನು ಆರಿಸಿಡುವದಕ್ಕೆ ಹೊರಟು ಕಡೆಯುವ ಕಾರ್ಯವನ್ನೇ ಕೈಬಿಡುವವನನ್ನು ಎಂಥ ಮೂರ್ಖನೆನ್ನಬೇಕು ! ಕಾಮಧೇನು, ಕಲ್ಪವೃಕ್ಷ, ಕೌಸ್ತುಭ, ಉಚ್ಚೈಃಶ್ರವಸ್ಸು , ಐರಾವತ, ಚಂದ್ರ, ಲಕ್ಷ್ಮಿ-ಇವುಗಳೇನೂ ಕಾಡುಕವಡೆಗಳಲ್ಲ, ನಿಜ ; ಆದರೂ ಮುಂದೆ ಹುಟ್ಟಬೇಕಾಗಿರುವ ಅಮೃತಕ್ಕೆ ಹೋಲಿಸಿದರೆ ಇವು ಎಂಥ ಅಲ್ಪಫಲಗಳು ! ಆದರೂ ಮಹಾಜ್ಞಾನಿಗಳಾದ ದೇವತೆಗಳೂ ಮಹಾಪರಾಕ್ರಮಿಗಳಾದ ಅಸುರರೂ ಈ ಅಲ್ಪಫಲಗಳಿಂದಲೇ ತೃಪ್ತರಾಗಿರೋಣವೆಂದು ಯೋಚಿಸಿದ್ದರಿಂದ ಅವರ ಮನಸ್ಸು ಆಗಾಗ ವಿಕ್ಷೇಪವನ್ನು ಹೊಂದಿತು. ಇದರಿಂದ ಆಗಬೇಕಾಗಿದ್ದ ಮಹಾಫಲವು ಬೇಗನೆ ನಿರ್ವಿಘ್ನವಾಗಿ ಆಗದಂತಾಯಿತು.

ಹಿಂದೆ ಹೇಳಿದಂತೆ ಕಾಮಧೇನುವೇ ಮುಂತಾದ ಉತ್ತಮವಸ್ತುಗಳೇ ಈ ಸಮುದ್ರಮಥನದಿಂದ ಉತ್ಪನ್ನವಾಗಲಿಲ್ಲ. ಕಡೆತದಿಂದ ಕದಡಿದ ಸಮುದ್ರದಂತೆಯೇ ಆ ದೇವಾಸುರರ ಮನಸ್ಸೂ ಕದಡಿದಂತಾಗಿದ್ದ ಸಮಯದಲ್ಲಿ ಮದಿರಾದೇವಿಯೂ ಮದದಿಂದ ಕಣ್ಣುಗಳನ್ನು ತಿರುಗಿಸುತ್ತಾ

ಪ್ರಕಟಳಾಗಿ ಎಲ್ಲರಿಗೂ ವಿಸ್ಮಯವನ್ನುಂಟುಮಾಡಿದ್ದಳು ; ಆಕೆಯ ಕಟಾಕ್ಷವು ಅಸುರರ ಮೇಲೆಯೇ ವಿಶೇಷವಾಗಿ ಬಿದ್ದಿತ್ತು. ಆದರೆ ಉತ್ತಮವಸ್ತುಗಳನ್ನು ಹಂಚಿಕೊಳ್ಳುವ ಭರದಲ್ಲಿ ದೇವತೆಗಳೂ ಒಂದಿಷ್ಟು ಆಕೆಯ ಪ್ರಸಾದಕ್ಕೆ ಪಾತ್ರರಾದರೆಂದೇ ಹೇಳಬೇಕು. ಕಟ್ಟಕಡೆಗೆ ಶ್ರೀಮಹಾಲಕ್ಷ್ಮಿಯು ಸಮುದ್ರದಿಂದ ಹೊರಕ್ಕೆ ಬಂದು ಎಲ್ಲರಿಗೂ ದರ್ಶನಕೊಟ್ಟ ಕಾಲದಲ್ಲಿ ಯಾರಯಾರ ಮನಸ್ಸು ಶುದ್ಧಸತ್ತ್ವಮಯವಾಗಿಯೇ ಇದ್ದಿತೋ ಯಾರುಯಾರು ಮೋಹಾವಿಷ್ಟರಾಗಿ ಆ ಮದಿರಾದೇವಿಯ ಅನುಗ್ರಹವೂ ಅವಶ್ಯವೆಂದು ಭಾವಿಸಿದರೋ ಹೇಗೆ ಹೇಳುವದು? ಇದು ಹೇಗಾದರೂ ಇರಲಿ, ಯಾರಿಗೆ ಶ್ರೀಮಹಾಲಕ್ಷ್ಮಿಯಲ್ಲಿ ಶುದ್ಧಸತ್ತ್ವಪ್ರಧಾನವಾದ ಭಕ್ತಿಯೇ ಉಂಟಾಯಿತೋ ಅವರಿಗೆ ದಾನ, ದಮ, ಅಧ್ಯಯನ, ತಪಸ್ಸು, ಅಹಿಂಸೆ, ತ್ಯಾಗ, ಶಾಂತಿ, ಜ್ಞಾನ- ಮುಂತಾದ ಉತ್ತಮಗುಣಗಳಲ್ಲಿ ಮನಸ್ಸು ಬೀಳುವಂತಾಗಿ ಆ ಮಹಾದೇವಿಯ ಪರಮಾನುಗ್ರಹವಾಯಿತು ; ಮತ್ತು ಯಾರು ಆಕೆಯಿಂದ ವಿಮುಖರಾಗಿ ಕೇವಲ ಮದಿರಾದೇವಿಯ ಪ್ರಸಾದವನ್ನೇ ಸ್ವೀಕರಿಸಿದರೋ ಅವರಿಗೆ ದಂಭ, ದರ್ಪ, ಅಭಿಮಾನ, ಕ್ರೋಧ- ಮುಂತಾದವುಗಳ ಸಂಬಂಧವಾಯಿತು. ಇವೆರಡು ಪಂಗಡಗಳಲ್ಲಿ ಇಂಥ ಒಂದಕ್ಕೆ ಸೇರಿದವರೆಂದು ಖಂಡಿತವಾಗಿ ನಿಶ್ಚಯಮಾಡುವದಕ್ಕೆ ಯಾರ ಮನಸ್ಸು ಒಳಪಡದ್ದಾಯಿತೋ ಅವರು ತಮ್ಮ ಸ್ವಭಾವದಲ್ಲಿ ಇವರಿಬ್ಬರಿಗೂ ಮಧ್ಯವರ್ತಿಗಳಾದರು. ಲೋಕದಲ್ಲಿ ಒಳ್ಳೊಳ್ಳೆಯ ಸಾಧನಸಂಪತ್ತುಗಳೂ ಪದವಿಗಳೂ ಫಲಗಳೂ ದೊರೆತಿರುವಾಗ ಮನಸ್ಸು ಕ್ಷುಭಿತವಾಗದೆ ಇರುವ ಧೀರರು ವಿರಳವಷ್ಟೆ.

ಈ ರೀತಿಯಲ್ಲಿ ಎಲ್ಲರ ಮನಸ್ಸೂ ಅಲ್ಪಸ್ವಲ್ಪವಾದರೂ ತಳಮಳಗೊಂಡಿದ್ದ ಈ ಸಮಯದಲ್ಲಿ ಒಂದು ಅದ್ಭುತವು ನಡೆಯಿತು. ಸಮುದ್ರದ ಮೇಲೆ ಏನೋ ಒಂದು ಹೊಗೆಯಾದಂತೆ ತೋರಿಕೊಂಡು ಸ್ವಲ್ಪದರಲ್ಲಿಯೇ ಒಂದು ಕರಿಯ ಮೋಡವು ಆವರಿಸಿಕೊಂಡಿತು. ಇಷ್ಟರಲ್ಲಿ ಒಂದು ಬಿರುಗಾಳಿಯೆದ್ದು ಸುಂಟರಗಾಳಿಯಾಗಿ ಪರಿಣಮಿಸಿತು. ಆ ಗಾಳಿಯು ಭರ್‍ರೆಂದು ತಿರುಗುತ್ತಿರಲು ಇದೇನೆಂದು ಎಲ್ಲರೂ ಚಮಕಿತರಾಗಿ ನೋಡುವಷ್ಟರಲ್ಲಿ ನಾಲ್ಕುದಿಕ್ಕಿನಿಂದಲೂ ಸಮುದ್ರದಲ್ಲಿ ಮೀನು, ಮೊಸಳೆ, ಆಮೆ, ಏಡಿ, ತಿಮಿ, ತಿಮಿಂಗಿಲ- ಮುಂತಾದವುಗಳು ಸಂಭ್ರಾಂತವಾಗಿ ಚದರುತ್ತಲೂ, ಮತ್ತೆಸೇರುತ್ತಲೂ ಬೆದರಿ ಬೆಂಡಾಗಿ ಕ್ಷಣಾರ್ಧದಲ್ಲಿ ಸತ್ತು

ಮೈಯನ್ನು ಮೇಲುಮಾಡಿಕೊಂಡು ತೇಲುವದಕ್ಕಾರಂಭಿಸಿದವು. ಆಕಡೆ ಈಕಡೆ ನೋಡುತ್ತಿದ್ದ ದೇವಾಸುರರ ಮೈಗೆ ಬೆಚ್ಚಗಿರುವ ಗಾಳಿಯು ಸೋಂಕಿದಂತಾಯಿತು. ಹೀಗೆ ಸುತ್ತಲೂ ಏಕೆ ಕಾವು ಏರಿದಂತಾಯಿತೆಂದು ಯೋಚಿಸುವದರೊಳಗೇ ಬೆಟ್ಟದ ಮೇಲ್ಗಡೆಯಿಂದ ಹಕ್ಕಿಗಳೂ ಪ್ರಾಣಿಗಳೂ ರೆಕ್ಕೆಗಳನ್ನೂ ಕೈಕಾಲುಗಳನ್ನೂ ಮುದುರಿಕೊಂಡು ಬಿದ್ದವು. ಮೇಲೆ ನೋಡುವಲ್ಲಿ ಬಳ್ಳಿಗಳು ಸುರುಟಿಗೊಂಡಿದ್ದವು, ಗಿಡಗಳ ಚಿಗುರುಗಳೂ ಹೂಗಳೂ ಬಾಡಿ ಉದುರಿದ್ದವು, ಎಷ್ಟೋ ಗಿಡಗಳು ಒಣಗಿದ್ದವು, ಮತ್ತೆ ಕೆಲವು ಅರ್ಧ ಅರ್ಧವಾಗಿ ಸೀದಿದ್ದವು. ಇದೆಲ್ಲ ಹೇಗೆ ಸಂಭವಿಸಿತೆಂಬುದು ಯಾರಿಗೂ ಕೂಡಲೆ ಗೊತ್ತಾಗಲಿಲ್ಲವಾದರೂ ಇವರನ್ನು ಈ ವಿಷಯದ ವಿಸ್ಮಯವು ಕೊನೆಯವರೆಗೂ ಆವರಿಸಲಿಲ್ಲ. ಏಕೆಂದರೆ ಬಲುಬೇಗನೆ ಎಲ್ಲರಿಗೂ ಉಬ್ಬಸವಾಯಿತು, ಮೈಗೆ ಬಿಸಿಲು ಬಡಿದಂತೆಯೂ ಬೆಂಕಿಯನ್ನು ಹತ್ತಿಸಿದಂತೆಯೂ ತಾಪವಾಯಿತು. ಸ್ವಲ್ಪದರಲ್ಲಿಯೇ ಕೈಕಾಲು, ಕಣ್ಣು , ಕಿವಿ, ಮೂಗು, ಬಾಯಿ- ಎಲ್ಲವೂ ಒಂದು ವಿಲಕ್ಷಣವಾದ ಉರಿಯಿಂದ ಬಾಧೆಪಡುವದಕ್ಕೆ ಮೊದಲಾಯಿತು. ಕೊನೆಗೆ ಹೊಟ್ಟೆಯ ಒಳಗಡೆಯೂ ತಡೆಯಲಾರದಂಥ ಸಂಕಟವಾಗಲಾರಂಭಿಸಿತು. ಕೆಲವರಿಗೆ ತೇಲುಗಣ್ಣು ಮೇಲುಗಣ್ಣೂ ಮತ್ತೆ ಕೆಲವರಿಗೆ ಹೊಟ್ಟೆಯುಬ್ಬಸವೂ ಇನ್ನು ಕೆಲವರಿಗೆ ತಲೆತಿರುಗುವಿಕೆಯೂ ಆಗಿ ಅವರಲ್ಲನೇಕರು ಭೂತಾದಿಗಳ ಆವೇಶ ಬಂದವರಂತೆ ಕಾಣುತ್ತಿದ್ದರು !

ಏನೂ ತೋಚದೆ ಇದ್ದ ಬೃಹಸ್ಪತಿಗೆ ಒಂದು ಯೋಚನೆ ಹೊಳೆಯಿತು. ತಾವು ಕಡೆಯುತ್ತಿದ್ದ ಸಮುದ್ರದಲ್ಲಿ ಅಗೋಚರವಾದ ಒಂದು ಬಗೆಯ ವಿಷವೇನಾದರೂ ಎದ್ದಿರಬಹುದೆ ? ಎಂಬ ಸಂಶಯವು ಅವನನ್ನು ಹಿಡಿದುಕೊಂಡಿತು. ಆತನು ಕೂಡಲೆ ತನ್ನ ಯೋಚನೆಯನ್ನು ಮಿಕ್ಕವರಿಗೆ ಹೇಳಿದನು. ಎಲ್ಲರಿಗೂ ಇದೇ ಸರಿಯೆಂದು ನಿಶ್ಚಯವಾಯಿತು.

ವಾಚಕರೆ, ಏನೇನೋ ಶುಭಸೂಚನೆಗಳು ಹಾಗೆ ತೋರಿದವು, ಹೀಗೆ ತೋರಿದವು- ಎಂದು ವರ್ಣನೆಮಾಡಿದ ಪುರಾಣಕಾರರು ''ಮಾಡಿದ ಕೆಲಸವು ಮಂಗನಾಯಿತು'' ಎಂಬಂತೆ ನಡುವೆ ವಿಷದ ಉತ್ಪತ್ತಿಯನ್ನು ಏಕೆ ತಂದರೆಂದು ನಿಮ್ಮಲ್ಲಿ ಕೆಲವರಿಗೆ ಎನಿಸಿರಬಹುದಲ್ಲವೆ ? ನಿಜ, ಮೊದಮೊದಲು ಹಾಗೆಯೇ ತೋರುವದು. ಆದರೆ ಇದು ಲೋಕಸಿದ್ಧವಾದ ಅನುಭವವಲ್ಲದೆ ಮತ್ತೇನು ? ಮೊದಲು ಮನುಷ್ಯನು ಹಸಿವುನೀರಡಿಕೆಗಳು

ಆರುವದಕ್ಕೂ ತನ್ನ ಇಂದ್ರಿಯಗಳಿಗೆ ಬೇಸರವಿಲ್ಲದೆ ಸಾಧಾರಣವಾದ ಸುಖವು ದೊರೆಯುವದಕ್ಕೂ ಏನು ಮಾಡಿದರಾದೀತೆಂದು ಹವಣಿಸುತ್ತಿರುವನು. ಇದಕ್ಕಿಂತ ಹೆಚ್ಚಿನದೇನೂ ಇವನಿಗೆ ಬೇಕಿರುವದಿಲ್ಲ. ಇಂಥ ಅವನ ಸ್ವಾಭಾವಿಕವಾದ ಇಚ್ಛೆಯು ನೆರವೇರಲೆಂದು ಅನವಧಿಕಕೃಪಾಸಿಂಧುವಾದ ಭಗವಂತನು ''ಈ ಪ್ರಪಂಚದಲ್ಲಿ ಪರಸ್ಪರಸಹಾಯದಿಂದಲೂ ಸಹಾನುಭೂತಿಯಿಂದಲೂ ಯಾರು ಏನು ಬಯಸಿದರೂ ಸಿಕ್ಕಲಿ !'' ಎಂದು ಹರಸಿಯೂ ಇರುವನು. ಆದರೆ ''ಬರಿಯ ಹಾಲೋಗರವೇ ಸೇರದಿದ್ದರೆ ತುಸು ಸಕ್ಕರೆ ಬೆರೆಯಿಸಿಕೊಳ್ಳಿ'' ಎಂದು ವೈದ್ಯರು ಹೇಳಿದಮಾತ್ರದಿಂದ ಮನೆಯ ಹುಡುಗರುಮಕ್ಕಳಿಗೆ ಕೂಡ ವಂಚನೆಮಾಡಿ ಸಿಕ್ಕುಸಿಕ್ಕಿದ ಲಡ್ಡುಮಿಠಾಯಿಗಳನ್ನು ತಿಂದು ಅಪಥ್ಯಮಾಡಿ ವೈದ್ಯರಿಗೂ ವಾಸಿಮಾಡುವದಕ್ಕೆ ಆಗದ ಹೊಸ ರೋಗವನ್ನು ತಂದಿಟ್ಟುಕೊಳ್ಳುವ ಅವಿವೇಕಿಯಾದ ರೋಗಿಯಂತೆ ಇದೇ ಮನುಷ್ಯನು ತನ್ನ ಇಚ್ಛೆಯು ಸ್ವಲ್ಪ ನೆರವೇರುತ್ತಲೂ ಕಾಮಕ್ರೋಧಾದಿಗಳಿಗೆ ಪರವಶನಾಗಿ ಲೋಕದಲ್ಲಿರುವ ಉತ್ತಮವಸ್ತುಗಳೆಲ್ಲ ತನಗೇ ಆಗಬೇಕು, ತಾನು ಸುಖವನ್ನು ಅನುಭವಿಸುತ್ತಿರುವಾಗ ಇತರರು ದುಃಖನ್ನನುಭವಿಸುತ್ತಲೂ ಇರಬೇಕು-ಎಂದು ಬಯಸುವನು ! ಆದರೆ ಇದು ಸ್ವಭಾವವಿರುದ್ಧವು, ದೈವ ನಿಯಮವಿರುದ್ಧವು. ಮತ್ತೊಬ್ಬರ ಅನುವನ್ನು ನೋಡದೆ ತನಗೆ ಸುಖವು ದೊರಕಬಾರದು, ಪರಸ್ಪರಸಹಾನುಭೂತಿಯಿಂದಲೇ ಸುಖವು ದೊರಕಬೇಕು-ಎಂಬುದು ಭಗವಂತನ ಕಟ್ಟಲೆ. ಹೀಗಿರುವಲ್ಲಿ 'ಕಲ್ಪವೃಕ್ಷ , ಕಾಮಧೇನು, ಚಿಂತಾಮಣಿ, ಚಂದ್ರ, ಲಕ್ಷ್ಮಿ-ಮುಂತಾದದ್ದೆಲ್ಲ ನಮ್ಮಲ್ಲಿ ಒಬ್ಬೊಬ್ಬರಿಗೇ ಆಗಬೇಕು. ಮತ್ತೊಬ್ಬರಿಗೆ ಇವುಗಳ ಗೋಜು ಇರಕೂಡದು' ಎಂಬ ಸಂಕಲ್ಪವು ದೇವಾಸುರರಿಗೆ ಹುಟ್ಟಿದ ಕಾಲದಲ್ಲಿ ಸಮುದ್ರದಲ್ಲಿ ವಿಷವಲ್ಲದೆ ಮತ್ತೇನು ಹುಟ್ಟೀತು ? ಈ ಪ್ರಪಂಚವೇ ಕಾಮಧೇನು, ನಮ್ಮ ಮನಸ್ಸೆ ಕಲ್ಪವೃಕ್ಷವು, ಮನೋವೃತ್ತಿಗಳೇ ಚಿಂತಾಮಣಿಗಳು, ಮನಃಪ್ರಸಾದವೆ ಚಂದ್ರನು, ಸರ್ವರಲ್ಲಿಯೂ ಸುಖವನ್ನುಂಟುಮಾಡುವ ಮನಃಕಮಲದ ಅರಳುವಿಕೆಯಲ್ಲಿ ಕಾಣಬರುವ ಶುಭವೃತ್ತಿಯೇ ಶ್ರೀಮಹಾಲಕ್ಷ್ಮಿಯು. ಈ ರೀತಿಯಲ್ಲಿ ಸಂಸಾರಸಾಗರವನ್ನು ಸರಿಯಾಗಿ ಕಡೆದಾಗ ಉತ್ತಮೋತ್ತಮ ವಾದ ಪದಾರ್ಥಗಳು ಉತ್ಪನ್ನವಾಗುವವು. ಆದರೆ ಇವುಗಳ ಬೆಲೆಯನ್ನು ನಾವು ಸರಿಯಾಗಿ ಅರಿತುಕೊಳ್ಳದೆ ಇರುವಾಗ ಇದೇ ಪ್ರಪಂಚದಲ್ಲಿ ಪರಸ್ಪರ

ದ್ವೇಷವೂ, ಹಗೆತನವೂ, ಸಿಟ್ಟೂ, ಹಸಿವೂ, ಕ್ಷಾಮವೂ, ಡಾಮರವೂ, ಕಳವೂ, ಜಗಳವೂ, ಹೊಡೆದಾಟವೂ, ಹಿಂಸೆಯೂ, ಗೋಳುಕರೆಯೂ ಕಂಡುಕೊಳ್ಳುವವು. ಇವೇ ಹಾಲಾಹಲವೆಂಬ ವಿಷದ ಮಾರ್ಪಾಡುಗಳು.

ಇರಲಿ, ಕಥೆಯನ್ನು ಸಾಗಿಸೋಣ. ಹೀಗೆ ವಿಷದ ಗಾಳಿಯೂ ಸೋಂಕೂ ಬೇಗೆಯೂ ಉರಿಯೂ ಮೇಲಿಂದಮೇಲೆ ಎಲ್ಲರನ್ನೂ ವ್ಯಾಪಿಸುತ್ತಿರಲು, ದೇವಾಸುರರು ದಿಕ್ಕುಗೆಟ್ಟು ಓಡುವರಾದರು. ಲೋಕವೆಲ್ಲ ನಿಶ್ಚೇಷ್ಟಿತವಾಯಿತು. ಎಲ್ಲೆಲ್ಲಿ ಹೋದರೂ ಅಲ್ಲಲ್ಲಿ ಆವರಿಸಿಕೊಂಡು ಬರುತ್ತಿರುವ ವಿಷದ ಹೊಗೆಯ ವೇಗವನ್ನು ಸಹಿಸಲಾರದೆ ''ಕುಯ್ಯೋ, ಮೊರೆಯೋ''ಎಂದು ಗೋಳಿಡುತ್ತಾ ದೇವಾಸುರಗಣಗಳು ಕೊನೆಗೆ ಮುಂದುಗಾಣದೆ ಸರ್ವಸಂಹಾರಕಾಲದಲ್ಲಿಯೂ ತನ್ನ ಮನಸ್ಸಿನ ಸಮಾಧಾನವನ್ನು ಒಂದೇ ಸಮತೆಯಲ್ಲಿಟ್ಟುಕೊಂಡಿರುವ ಮಹಾಕಾರುಣಿಕನಾದ ಪರಶಿವನೇ ಈ ಸಮಯದಲ್ಲಿ ತಮಗೆಲ್ಲಾ ಗತಿಯೆಂದು ನಿಶ್ಚಯಿಸಿ ಆತನನ್ನು ಈ ರೀತಿಯಲ್ಲಿ ಸ್ತೋತ್ರ ಮಾಡುವುದಕ್ಕೆ ಪ್ರಾರಂಭಿಸಿದರು :

''ದೇವದೇವನೆ, ಮಹಾದೇವನೆ, ಸರ್ವಭೂತಾತ್ಮಸ್ವರೂಪನೆ, ಸರ್ವಭೂತರಕ್ಷಕನೆ, ನಿನಗೆ ಶರಣು ಬಂದಿದ್ದೇವೆ. ಮೂರು ಲೋಕಗಳನ್ನೂ ಸುಟ್ಟುರುಹತ್ತಿರುವ ಈ ಮಹಾವಿಷದ ಭಯದಿಂದ ನಮ್ಮನ್ನು ರಕ್ಷಿಸು ! ಈ ಸರ್ವಜಗತ್ತಿಗೂ ಬಂಧಮೋಕ್ಷಗಳಿಗೆ ಕಾರಣನಾದವನು ನೀನೊಬ್ಬನೇ ಅಲ್ಲವೆ? ಆದ್ದರಿಂದ ಪ್ರಪನ್ನರಾದವರ ಸಂಕಟವನ್ನು ಅವಶ್ಯವಾಗಿ ನೀನು ನೀಗುವೆಯೆಂದು ತಿಳಿದಿರುವ ಜಾಣರು ನಿನ್ನನ್ನೇ ಅರ್ಚಿಸುವರು. ಸತ್ವರಜಸ್ತಮೋಮಯವಾದ ನಿಜಶಕ್ತಿಯಿಂದ ಸರ್ಗಸ್ಥಿತಿಲಯಗಳನ್ನು ಮಾಡುವನಾಗಿ ಬ್ರಹ್ಮ, ವಿಷ್ಣು, ಶಿವ-ಎಂಬ ಹೆಸರುಗಳನ್ನು ನೀನು ಧರಿಸುತ್ತಿರುವೆಯಾದರೂ ನೀನು ಯಾವಾಗಲೂ ಸ್ವಯಂಪ್ರಕಾಶವೇ ಆಗಿರುವದಾಗಿಯೂ ಸದಸದ್ರೂಪವಾದ ಪ್ರಪಂಚಕ್ಕೆಲ್ಲ ಆಧಾರವಾಗಿಯೂ ಇರುವ ಪರಬ್ರಹ್ಮವೇ ಆಗಿರುವೆ. ನಾನಾಶಕ್ತಿಗಳೊಡನೆ ತೋರಿಕೊಳ್ಳುತ್ತಿರುವ ಜಗದೀಶ್ವರನಾದ ಪರಮೇಶ್ವರನೇ ನೀನು. ವೇದಕ್ಕೆಲ್ಲ ಕಾರಣನಾಗಿಯೂ ವೇದಪ್ರಮಾಣಗೋಚರನಾಗಿಯೂ ಜಗದಾದಿಯಾಗಿಯೂ ಇರುವ ಪರಮಾತ್ಮನೇ ನೀನು. ಇಂದ್ರಿಯರೂಪವಾಗಿಯೂ ಪ್ರಾಣರೂಪವಾಗಿಯೂ ದ್ರವ್ಯರೂಪವಾಗಿಯೂ ಗುಣರೂಪವಾಗಿಯೂ ನೀನು ತೋರಿಕೊಳ್ಳುತ್ತಿರುವೆ. ಕಾಲ, ಕ್ರತು, ಸತ್ಯ, ಋತು, ಧರ್ಮ- ಇವುಗಳೂ

ತ್ರಿಗುಣಾತ್ಮಕವಾದ ಮಾಯೆಯೂ ನಿನ್ನ ಆಧಾರದಿಂದಲೇ ನಿಂತಿರುವವು. ಅಖಿಲದೇವತಾಸ್ವರೂಪನೆ, ಅಗ್ನಿಯೇ ನಿನ್ನ ಮುಖವಾಗಿರುವದು, ಭೂಮಿಯು ನಿನ್ನ ಪಾದಪಂಕಜವಾಗಿರುವದು, ಕಾಲವೇ ನಿನ್ನ ಸಂಚರಣವು, ದಿಕ್ಕುಗಳು ಕಿವಿಗಳು, ವರುಣನೇ ನಾಲಗೆಯು, ಆಕಾಶವೇ ಹೊಕ್ಕಳು, ವಾಯುವೇ ಉಸಿರು, ಸೂರ್ಯನೇ ಕಣ್ಣು, ನೀರೇ ರೇತಸ್ಸು , ಸಮುದ್ರವೇ ಕುಕ್ಷಿಯು, ಗಿರಿಗಳೇ ಎಲುಬುಗಳು, ಗಿಡಮರಗಳೇ ಕೂದಲು, ಅಂತರಿಕ್ಷವೇ ಶಿರಸ್ಸು, ಚಂದ್ರನೇ ಮನಸ್ಸು, ಛಂದಸ್ಸುಗಳೇ ನಿನ್ನ ಶರೀರದಲ್ಲಿರುವ ಏಳು ಧಾತುಗಳು, ಧರ್ಮವೆಲ್ಲ ನಿನ್ನ ಹೃದಯವು, ಪಂಚೋಪನಿಷತ್ತುಗಳೇ ನಿನ್ನ ಮುಖಗಳು, ಶಿವನೆಂಬ ಹೆಸರುಳ್ಳ ಸ್ವಯಂಪ್ರಕಾಶವಾದ ತತ್ವವೇ ನಿನ್ನ ನಿಜವಾದ ಇರುವಿಕೆಯು. ಬ್ರಹ್ಮಾದಿಗಳಿಗೂ ಅಗೋಚರವಾದ ನಿನ್ನ ಆ ಸ್ವರೂಪವನ್ನು ಈ ಬ್ರಹ್ಮಾಂಡದಲ್ಲಿ ಸೃಷ್ಟವಾಗಿರುವ ನಮ್ಮಂಥ ಪ್ರಾಣಿಗಳು ಇದ್ದಂತೆ ಅರಿಯುವ ಮಾತು ಹಾಗಿರಲಿ, ಹೊರಗೆ ವ್ಯಕ್ತವಾಗಿ ಗೋಚರವಾಗಿರುವ ನಿನ್ನ ಮಹಾಶಕ್ತಿಯ ಅಂಶವನ್ನು ಕೂಡ ನಾವು ಸರಿಯಾಗಿ ತಿಳಿಯಲಾರೆವು. ಆದರೆ ನಾವು ಇಷ್ಟುಮಾತ್ರ ಬಲ್ಲೆವು : **ಪರಮಾರ್ಥವಾಗಿ ಅವ್ಯಕ್ತಕ್ಕಿಂತಲೂ ಅವ್ಯಕ್ತನಾಗಿರುವ ನೀನು ಜಗದ್ಧಿತಾರ್ಥವಾಗಿ ವ್ಯಕ್ತರೂಪನಾಗಿರುವೆ** ಎಂಬುದು ನಿಶ್ಚಯವು. ಎಲೈ ಮೃಡನೆ, ಜಗದ್ರಕ್ಷಣೆಗೋಸ್ಕರವೇ ನಿನ್ನ ಕರ್ಮವೆಲ್ಲ ತೋರಿಕೊಳ್ಳುವದಾದ್ದರಿಂದ ನಿನ್ನನ್ನು ಬಿಟ್ಟು ನಾವು ಮತ್ತೊಬ್ಬರನ್ನು ಕಾಣೆವು. ನಿನ್ನನ್ನೇ ಈಗ ಶರಣು ಹೊಕ್ಕಿದ್ದೇವೆ. ನೀನು ಸಂರಕ್ಷಿಸಬೇಕು !''

## ಎಂಟನೆಯ ತರಂಗ

(ಅಮೃತದ ಉತ್ಪತ್ತಿ )

ಹಿಂದಿನ ತರಂಗದಲ್ಲಿ ವರ್ಣಿತವಾಗಿರುವಂತೆ ದೇವತೆಗಳೂ ಅಸುರರೂ ಬಾಣಲೆಯಲ್ಲಿ ಹುರಿಯುವದಕ್ಕೆಂದು ಹಾಕಿದ ಸೊಪ್ಪಿನಂತೆ ಹಾಲಾಹಲದ ಬೇಗೆಯನ್ನು ತಾಳಲಾರದೆ ಸುರುಟಿಕೊಳ್ಳುತ್ತಲೂ ಬೆಂದು ಬಾಡಿ ಕಳವಳಪಡುತ್ತಲೂ ಅನನ್ಯಗತಿಕರಾಗಿ ಮೊರೆಯಿಡುತ್ತಿರುವದನ್ನು ಕೇಳಿ ಪರಮಕಾರುಣಿಕನಾದ ಈಶ್ವರನಿಗೆ ಹೃದಯವು ಕರಗಿತು. ಲೋಕವೆಲ್ಲ ಹಾಳಾಗುತ್ತಿರುವದನ್ನು ನೋಡುವದು ಆ ದಯಾಮೂರ್ತಿಗೆ ಆಗಲಿಲ್ಲ.

ಎಲ್ಲರನ್ನೂ ಆವರಿಸುತ್ತಿದ್ದ ಆ ಘೋರವಿಷವನ್ನು ಸ್ವಲ್ಪವೂ ಹಿಂದುಮುಂದೆ ನೋಡದೆ ಇವರಿಗೆಲ್ಲ ಕಲ್ಯಾಣವಾದರೆ ಸಾಕೆಂದು ಆ ಪರಮೇಶ್ವರನು ಅಂಗೈಯಲ್ಲಿ ತೆಗೆದುಕೊಂಡು ಹೀರಿಬಿಟ್ಟನು ! ಅತ್ಯಂತಶುಭ್ರವಾದ ಸ್ಫಟಿಕದ ಹಾಗೆ ಹೊಳೆಯುತ್ತಿದ್ದ ಆತನ ನಿರ್ಮಲವಾದ ಶರೀರದಲ್ಲಿ ಕಪ್ಪುಬಣ್ಣದ ಆ ವಿಷವು ಎಲ್ಲಿ ಹೋದರೂ ಅದು ಇಂಥ ಕಡೆಯಲ್ಲಿರುವದೆಂದು ಹೇಳುವದಕ್ಕೆ ಬರುವಂತಿತ್ತು. ಪರಮಶಿವನು ತನ್ನ ಕಂಠದಲ್ಲಿಯೇ ಅದನ್ನು ನಿಲ್ಲಿಸಿಕೊಳ್ಳಲಾಗಿ ಅದು ಇಂದ್ರನೀಲಮಣಿಯಂತೆ ಶೋಭಿಸುತ್ತಾ ಕಂಠಕ್ಕೆ ಆಭರಣವಾಗಿ ಮೈಯ ಸೊಬಗನ್ನು ಹೆಚ್ಚಿಸಿದ್ದಲ್ಲದೆ ಆತನ ಲೋಕಾನುಗ್ರಹ ಬುದ್ಧಿಯನ್ನು ಭಕ್ತರಿಗೆ ಡಂಗುರದಿಂದ ಸಾರುವ ಹಾಗೆಯೂ ಆಯಿತು. ಅಂದುಮೊದಲು ಆ ಮಹಾತ್ಮನಿಗೆ ಶ್ರೀಕಂಠನೆಂದೂ ನೀಲಕಂಠನೆಂದೂ ಅನ್ವರ್ಥಾಭಿಧಾನವು ನೆಲೆಗೊಂಡಿತು. ''ಉದಾರಚರಿತೆಯುಳ್ಳವರಿಗಾದರೆ ಲೋಕವೆಲ್ಲವೂ ಕುಟುಂಬವೇ'' ಎಂಬ ಸುಭಾಷಿತವು ಈಗ ಸಾರ್ಥಕವಾಯಿತು.

ತಾವೂ ತಿನ್ನದೆ ಇತರರನ್ನೂ ತಿನ್ನಗೊಡಿಸದೆ, ದನದ ಗೊಂತಿನಲ್ಲಿದ್ದು ದನವನ್ನು ಕಚ್ಚುವದಕ್ಕೆ ಬಗುಳುತ್ತಾ ಹೋದ ಕಥೆಯ ನಾಯಿಯ ಹಾಗೆ, ಆತ್ಮಪರವಂಚಕರಾಗಿರುವ ಅಧಮಾಧಮರಿಗಿಂತ ತಾವೂ ಅನುಭವಿಸಿ ಮಿಕ್ಕದ್ದನ್ನು ಉಳಿದವರಿಗೂ ದಾನಮಾಡುವವರೇ ಎಷ್ಟೋ ಮೇಲು ; ತಮ್ಮ ಸುಖವನ್ನು ನೋಡದೆ ಉಳಿದ ಜನರು ಸುಖವಾಗಿರಲೆಂದು ತಮ್ಮಲ್ಲಿದ್ದದ್ದನ್ನೆಲ್ಲಾ ಲೋಕಕ್ಕೆ ಧಾರೆಯೆರೆಯುವ ಮಹಾತ್ಮರಂತೂ ಬಹುವಿರಳ. ಹೀಗಿರುವಲ್ಲಿ 'ನಾನು ಎಂಥ ಕಷ್ಟವನ್ನಾದರೂ ಸಹಿಸುವುದಕ್ಕೆ ಸಿದ್ಧನಾಗಿರುವೆನು ; ಸರ್ವಜನರೂ ಸುಖವಾಗಿದ್ದರೆ ಸಾಕು, ಅದೇ ನನ್ನ ಸುಖ' -ಎನ್ನುವ ಪರಮಾರ್ದ್ರಹೃದಯರು ಎಲ್ಲಿ ಸಿಕ್ಕುವರು? ಇತಿಹಾಸದಲ್ಲಿ ಮತ್ತೊಬ್ಬನ ಕಷ್ಟಕ್ಕಾಗಿ ಪ್ರಾಣವನ್ನು ಒಪ್ಪಿಸಿದವರ ಕಥೆಗಳು ಅಲ್ಲಲ್ಲಿ ಕಂಡುಬರುತ್ತವೆ ; ಆದರೆ ಅಂಥವರಲ್ಲಿ ಶಿವನು ಅಗ್ರ ಪೂಜೆಗೆ ಯೋಗ್ಯನೆಂದೆನಿಸಿರುವನು. ಏಕೆಂದರೆ, ಆತನು ಭೋಗಾಸಕ್ತರಾದ ಜನರ ಮೇಲೆ ತನಗಿರುವ ಅಪಾರಕರುಣೆಯಿಂದ ಅವರು ಕೇಳುವ ಭೋಗಗಳನ್ನೆಲ್ಲಾ ಕೊಟ್ಟು , ತಾನು ಮಾತ್ರ ತೊಗಲಿನ ಹೊದಿಕೆ, ಕಪಾಲಪಾತ್ರೆ, ಚಿತಾಭಸ್ಮ, ಸ್ಮಶಾನವಾಸ- ಇವುಗಳನ್ನು ಅಂಗೀಕರಿಸಿ ಅಲ್ಪತುಷ್ಟನಾಗಿರುವ ವೈರಾಗ್ಯದ ರಹಸ್ಯವನ್ನು ತನ್ನ ಉದಾಹರಣೆಯಿಂದ ಯಾವಾಗಲೂ ಜನರಿಗೆ

ಬೋಧಿಸುತ್ತಲೂ ಇರುವನು. ಲೌಕಿಕರು ಪ್ರಿಯವೆಂದು ನಂಬಿರುವ ಭೋಗವಸ್ತುಗಳು ಒಂದಿಲ್ಲದಿದ್ದರೆ ಒಂದು ದಿನ ವಿಷವನ್ನು ಕಕ್ಕಿ ಅವರನ್ನು ಅಳುವಂತೆ ಮಾಡುವವೆಂದು ವೇದವು ಸಾರುತ್ತಿರುವದು ; ಇದು ನಮ್ಮಲ್ಲಿ ಅನೇಕರಿಗೆ ಆಗಾಗ್ಗೆ ಅನುಭವಕ್ಕೆ ಬರುತ್ತಲೂ ಇರುವದು. ಇಂಥ ಸಮಯದಲ್ಲಿ ತಮ್ಮ ಅಪರಾಧವನ್ನು ಕ್ಷಮಿಸೆಂದು ಶರಣುಬಂದ ಮಾತ್ರದಿಂದ ಆ ವಿಷದಿಂದಾದ ಸಂಕಟವನ್ನು ಪರಿಹರಿಸಿ ಅವರಿಗೆ ಪಶ್ಚಾತ್ತಾಪವನ್ನೂ ವೈರಾಗ್ಯವನ್ನೂ ನೀಡಿ ಕ್ರಮಕ್ರಮವಾಗಿ ತನ್ನ ಪರಮಪದವನ್ನೇ ಸೇರುವಂತೆ ಮಾಡುವ ಆ ಶಂಭುವಿನ ಔದಾರ್ಯವು ಎಂಥದೆನ್ನಬೇಕು ! ಹೀಗೆ ದೇವತೆಗಳಿಗೂ ಭುಕ್ತಿಮುಕ್ತಿಪ್ರದನಾಗಿರುವ ಪಶುಪತಿಯ ಕಾರುಣ್ಯವನ್ನು ಅನುಗ್ರಹ ಸಾಮರ್ಥ್ಯವನ್ನೂ ಹೊಗಳುವುದಕ್ಕೆ ಆದಿಶೇಷನಿಗೂ ಶಕ್ಯವಿರುವುದಿಲ್ಲ. ಆದ್ದರಿಂದಲೇ ಭಕ್ತರು ಆತನನ್ನು ಮಹಾದೇವನೆಂದು ಕೊಂಡಾಡುವದು ಸ್ವಭಾವೋಕ್ತಿಯಾಗಿರುವದು.

ಲೋಕದಲ್ಲಿ ಮಹಾಪುಣ್ಯಕರ್ಮಗಳು ನಡೆದಾಗ ಅದಕ್ಕೆ ತಕ್ಕ ಉತ್ತಮಫಲವು ದೊರಕುವದು ಸ್ವಾಭಾವಿಕವಷ್ಟೆ. ನಿರತಿಶಯವಾದ ಔದಾರ್ಯದಿಂದ ಶಿವನು ಹಾಲಾಹಲವನ್ನು ನುಂಗಿದನೊ ಇಲ್ಲವೊ, ಎಲ್ಲರ ಕಣ್ಣಿಗೂ ತಣ್ಣನೆಯ ಒಂದಾನೊಂದು ದಿವ್ಯರಸವನ್ನು ಎರಚಿದಂತೆ ಭಾಸವಾಯಿತು. ಎಲ್ಲೆಲ್ಲಿ ನೋಡಿದರೂ ದಿಕ್ಕುಗಳು ಪ್ರಸನ್ನವಾದವು, ಸುವಾಸನೆಯ ತಂಗಾಳಿಯು ಮೆಲ್ಲಗೆ ಬೀಸಲಾರಂಭಿಸಿತು. ಸೂರ್ಯನ ಪ್ರತಾಪವು ಕಡಿಮೆಯಾಗಿ ಆ ಬಿಸಿಲೆಲ್ಲ ಅಮೃತಕಿರಣಗಳ ಬೆಳದಿಂಗಳೋ ಎಂಬಂತೆ ಕಾಣಿಸಹತ್ತಿತು. ಎಲ್ಲರ ಮನಸ್ಸೂ, ಅದೇಕೋ, ಉತ್ಸಾಹದಿಂದಲೂ ಪ್ರಸನ್ನತೆಯಿಂದಲೂ ಕೂಡಿಕೊಂಡಿತು. ಇಂಥ ಶುಭಸಮಯದಲ್ಲಿ ಅತಿಶುಭ್ರವಾದ ದಿವ್ಯವಸ್ತ್ರವನ್ನು ಹೊದ್ದುಕೊಂಡು ಶುಭ್ರಸ್ಫಟಿಕಮಯವಾದ ಕಲಶವನ್ನು ಕೈಯಲ್ಲಿ ಹಿಡಿದುಕೊಂಡು ಧನ್ವಂತರಿ ಎಂಬ ಮಹಾಪುರುಷನು ಸಾಗರದಿಂದ ಎದ್ದುಬಂದನು !

ಧನ್ವಂತರಿಯು ವಯಸ್ಸಿನಲ್ಲಿ ತರುಣನು. ಅವನ ತೋಳುಗಳು ಉದ್ದವಾಗಿಯೂ ದಪ್ಪವಾಗಿಯೂ ಇದ್ದವು ; ಎದೆಯು ವಿಶಾಲವಾಗಿತ್ತು , ಕತ್ತು ಮಾಟವಾಗಿ ಶಂಖವನ್ನನುಕರಿಸಿತ್ತು ; ಸ್ವಲ್ಪ ಕೆಂಪಾದ ಕಣ್ಣುಗಳೂ ವಿಶಾಲವಾದ ಹಣೆಯೂ ಮುಖಕ್ಕೆ ಅಂದವನ್ನುಂಟುಮಾಡುತ್ತಿದ್ದವು. ಕಿವಿಗಳಲ್ಲಿ ರತ್ನಕುಂಡಲಗಳು ಥಳಗುಟ್ಟುತ್ತಿದ್ದವು. ನೋಡಿದವರ ಮನಸ್ಸನ್ನು

ಆಕರ್ಷಿಸುವಂತೆ ತಲೆಯ ಮೇಲಿಂದ ಕೂದಲು ಸುತ್ತಲೂ ಜೋಲು ಬಿದ್ದಿತ್ತು. ಪೂರ್ಣಾರೋಗ್ಯವೇ ಮೂರ್ತಿಯಾದಂತಿರುವ ಇಂಥ ಆಕಾರವನ್ನೊಂದನ್ನು ನೋಡಿದರೆ ಸಾಕು, ಎಂಥ ಮುದುಕನಿಗೂ ಎಂಥ ರೋಗಿಗೂ ಸಂತೋಷವೂ ಆರೋಗ್ಯವೂ ಯೌವನವೂ ಒಂದೇ ಕಾಲದಲ್ಲಿ ತನಗುಂಟಾದಂತೆ ತೋರುತ್ತದೆ ; ಸ್ವರ್ಣಮಯವಾದ ಕಂಕಣವನ್ನು ಹಾಕಿರುವವನಾಗಿ ಕೈಯಲ್ಲಿ ಅಮೃತಕಲಶವನ್ನು ಹಿಡಿದುಕೊಂಡು ಮುಂದೆ ನಿಂತರೆ ಹೇಗಾಗಬೇಡ ! ಪೀತಾಂಬರವನ್ನುಟ್ಟುಕೊಂಡು ತಮ್ಮ ಮುಂದೆ ನಿಂತಿರುವ ಆ ದಿವ್ಯ ಪುರುಷನನ್ನು ನೋಡಿದ ಕೂಡಲೇ ಎಲ್ಲರ ಮನಸ್ಸಿನಲ್ಲಿಯೂ ಒಂದು ವಿಲಕ್ಷಣವಾದ ಪರಿಣಾಮವುಂಟಾಯಿತು. ಶರೀರದಲ್ಲೆಲ್ಲ ರಕ್ತವು ಬೇಗಬೇಗ ಹರಿಯುವ ಹಾಗೆ ತೋರಿತು ; ತಾವು ಎಂದೆಂದಿಗೂ ನಿರೋಗರಾಗಿಯೇ ಇದ್ದಂತೆಯೂ ಭಾಸವಾಯಿತು. ಮೈಯಲ್ಲಿ ಒಂದು ಬಗೆಯ ಹೆಚ್ಚಿನ ಉತ್ಸಾಹವು ಹುಟ್ಟಿ ಶರೀರದ ಅಂಗಾಂಗಗಳೆಲ್ಲ ವಜ್ರದಿಂದ ಮಾಡಿದಷ್ಟು ಬಲವಾಗಿರುವಂತೆಯೂ ತಾವೆಲ್ಲರೂ ಧೀರ್ಘಾಯುಷ್ಮಂತರಾಗಿ ಬಹುಕಾಲದಿಂದ ಇರುವಂತೆಯೂ ತಮಗೆ ದುಷ್ಕರವಾದದ್ದೇ ಯಾವದು ಇಲ್ಲವೆಂತಲೂ ಎಲ್ಲರಿಗೂ ತೋರಹತ್ತಿತು !

ಇದೆಲ್ಲ ವಿಷ್ಣುವಿನ ಅಂಶಸ್ವರೂಪನಾದ ಆಯುರ್ವೇದದ್ರಷ್ಟೃವಾದ ಧನ್ವಂತರಿಯ ದರ್ಶನದ ಫಲವಾಯಿತು. ಇನ್ನು ಆತನ ಕೈಯಲ್ಲಿದ್ದ ಅಮೃತದ ವಿಚಾರವನ್ನು ಹೇಳಬೇಕೆ ? ದೃಷ್ಟಿಮಾತ್ರದಿಂದ ಮಹಾಶಾಂತಿಯನ್ನುಂಟು ಮಾಡುವ ಶಕ್ತಿಯುಳ್ಳ ಆ ಅಮೃತಕಲಶವು ಎಲ್ಲರ ಕಣ್ಣುಗಳನ್ನು ಬೇಗ ತನ್ನ ಕಡೆಗೆ ಸೆಳೆದುಕೊಂಡುಬಿಟ್ಟಿತು. ಅದರ ಮೇಲೆ ನೆಟ್ಟ ಕಣ್ಣುಗಳು ಯಾರದೇ ಆಗಿರಲಿ, ಹಿಂತಿರುಗಲೇ ಇಲ್ಲ. ಕಲಶದ ಕಾಂತಿಯೇ ಮೊದಲು ಎಲ್ಲರನ್ನೂ ಮೋಹಗೊಳಿಸಿತ್ತು ; ಈಗ ಅದರಲ್ಲಿರುವ ಅಮೃತವು ದೃಗ್ಗೋಚರವಾಗಿ ಹೊಳೆಯುತ್ತಿರಲು ಎಲ್ಲರೂ ತಾವು ಮಾಡುವ ಕಾರ್ಯವನ್ನು ಮರೆತು ಆನಂದಪರವಶರಾದರು ! ಆ ಪರವಶತೆಯೇ ಮುಂದಿನ ಅನರ್ಥಕ್ಕೆ ಬೀಜವಾಯಿತು. ಪ್ರಮಾದಕ್ಕಿಂತ ಹೆಚ್ಚಿನ ಮೃತ್ಯು ಎಲ್ಲಿರುವದು?

ಇದುವರೆಗೂ ತಾವು ಮಾಡುತ್ತಾ ಇದ್ದ ಪ್ರಯತ್ನವು ಕೊನೆಗೆ ಕೈಗೂಡಿತಲ್ಲ! -ಎಂಬ ಹರ್ಷದಿಂದ ದೇವತೆಗಳೂ ಅಸುರರೂ ಉಬ್ಬಿಬಿಟ್ಟರು. ಅದರಲ್ಲಿಯೂ ಅಸುರರು ಮೊದಲಿಂದಲೂ ಸ್ವಾರ್ಥಪರರಾಗಿದ್ದರು.

ಉತ್ತಮೋತ್ತಮವಾದ ವಸ್ತುಗಳು ಹುಟ್ಟಿದಹಾಗೆಲ್ಲ ಅವು ದೇವತೆಗಳ ಪಾಲಾಗುತ್ತಿದ್ದದ್ದನ್ನು ನೋಡಿ ಅವರಿಗೆ ತುಂಬಾ ಉಬ್ಬಸವಾಗಿತ್ತು. ''ಈಗ ಸರ್ವಪ್ರಯತ್ನಕ್ಕೂ ಫಲವಾದ ಅಮೃತವು ಕೈಗೆ ಸಿಕ್ಕಿರುವಾಗ ನಾವು ಮೋಸ ಹೋಗಬಾರದು. ಮುಖ್ಯವಾಗಿ ಅಮೃತ, ಲಕ್ಷ್ಮಿ- ಇವೆರಡೇ ಸಮುದ್ರದಲ್ಲಿ ಹುಟ್ಟಿದ ವಸ್ತುಗಳಲ್ಲಿ ಸಾರತರವಾಗಿರತಕ್ಕವು. ಇವುಗಳನ್ನು ನಮ್ಮ ಕೈವಶ ಮಾಡಿಕೊಂಡುಬಿಡೋಣ, ಮಿಕ್ಕದ್ದು ಎಲ್ಲಿಯಾದರೂ ಹೋಗಲಿ ! ''ಎಂದು ತಮ್ಮತಮ್ಮೊಳಗೆ ಮಾತನಾಡಿಕೊಂಡರು. ಇಷ್ಟರೊಳಗಾಗಿ ದೇವತೆಗಳ ಪೂರ್ಣದೃಷ್ಟಿಯು ಅಮೃತದ ಮೇಲೆ ಬಿದ್ದಿತ್ತು. ಇದನ್ನು ಕಂಡು ಅಸುರರಿಗೆ ಮನಸ್ಸಿನಲ್ಲಿ ಮತ್ತಷ್ಟು ವಿಕ್ಷೋಭವಾಯಿತು.

ಈ ನಡುವೆ ನಡೆದ ಮತ್ತೊಂದು ಘಟನೆಯು ಅವರೆಲ್ಲರ ಉದ್ವೇಗವನ್ನು ಇನ್ನೂ ಹೆಚ್ಚಿಸಿತು. ಪರಮಸೌಂದರ್ಯವತಿಯಾದ ಲಕ್ಷ್ಮಿಯು ಯಾರನ್ನು ವರಿಸುವಳೆಂಬುದು ಎಲ್ಲರನ್ನೂ ಯೋಚನೆಗಿಟ್ಟಿತ್ತು. ಶೌರ್ಯದಿಂದಲೂ ಪರಾಕ್ರಮದಿಂದಲೂ ಪ್ರಸಿದ್ಧನಾದ ತನ್ನನ್ನೇ ಸ್ವಾಭಾವಿಕವಾಗಿ ಅವಳು ಮೆಚ್ಚುವಳೆಂದು ಅಸುರರಾಜನಾದ ಬಲಿಯ ಮನಸ್ಸಿನಲ್ಲಿ ನಿರ್ಣಯವಾಗಿತ್ತು. ಆ ಮಹಾಸಭೆಯಲ್ಲಿ ಗಂಧರ್ವರು, ಯಕ್ಷರು, ಅಸುರರು, ಸಿದ್ಧರು, ಚಾರಣರು- ಮುಂತಾದವರೆಲ್ಲ ನೆರೆದಿದ್ದರು. ಮಹಾಲಕ್ಷ್ಮಿಯ ಕುಂಡಲಕಾಂತಿಯೊಡನೆ ಕೆನ್ನೆಯ ಕಾಂತಿಯೂ ಸೇರಿ ಶೋಭಿಸುತ್ತಿರಲು ತನ್ನ ಚಂದ್ರಮುಖವನ್ನು ಅತ್ತಿತ್ತ ತಿರುಗಿಸುತ್ತಾ ಸ್ವಲ್ಪ ಲಜ್ಜೆಯನ್ನೂ ಮಂದಹಾಸವನ್ನೂ ಪ್ರಕಟಿಸುತ್ತಾ , ಕಾಲಿನ ಪಿಲ್ಲಿಯ ನಾದಗಳಿಂದ ಅವರೆಲ್ಲರಿಗೂ ಶ್ರೋತ್ರಸುಖವನ್ನುಂಟುಮಾಡುತ್ತಾ ಒಂದೆರಡು ಹೆಜ್ಜೆಗಳನ್ನೂ ಇಟ್ಟಳು. ''ಕೆಲವರಲ್ಲಿ ತಪಸ್ಸಿದೆ, ಆದರೆ ಅವರು ಸಿಟ್ಟನ್ನು ಜಯಿಸಿರುವದಿಲ್ಲ. ಕೆಲವರಿಗೆ ಪಾಂಡಿತ್ಯವಿರುವದು, ಆದರೆ ಅವರಲ್ಲಿ ವಿಷಯಾಸಕ್ತಿಹೋಗಿರುವದಿಲ್ಲ. ಮತ್ತೆ ಕೆಲವರು ಅನುಕೂಲಸಂಪತ್ತಿಯುಳ್ಳ ವರಾಗಿದ್ದಾರೆ ; ಆದರೇನು? ಅವರಿಗೆ ಕಾಮವನ್ನು ಜಯಿಸುವ ಶಕ್ತಿಯಿಲ್ಲ. ಇನ್ನು ಕೆಲವರಲ್ಲಿ ಧರ್ಮವು ಹೆಚ್ಚಾಗಿದೆ ; ಆದರೂ ಅವರಲ್ಲಿ ಭೂತದಯೆ ಇರುವುದಿಲ್ಲ. ಕೆಲವರಲ್ಲಿ ತ್ಯಾಗವುಂಟು, ಆದರೆ ಮುಮುಕ್ಷುತೆಯಿರುವುದಿಲ್ಲ. ಕೆಲವರು ದೀರ್ಘಾಯುಗಳಾಗಿರುವರು, ಆದರೆ ಅವರಿಗೆ ಉತ್ತಮವಾದ ನಡತೆಯಿರುವುದಿಲ್ಲ ; ಬೇರೆ ಕೆಲವರಿಗೆ ಅದೂ ಇದೆ, ಆಯಸ್ಸು ನಿಯತವಿಲ್ಲ. ಇನ್ನೂ ಕೆಲವರಿಗೆ ಈ ಎರಡೂ ಇವೆ, ಆದರೆ ಮಂಗಲ

ಸ್ವರೂಪವಿಲ್ಲ. ಅಂತೂ ಒಬ್ಬೊಬ್ಬರಲ್ಲಿ ಒಂದೊಂದು ದೋಷವಿದೆ. ಯಾರನ್ನು ವರಿಸಲಿ?'' ಎಂದು ಯೋಚಿಸುತ್ತಾ ಕೊನೆಗೆ ನಿರ್ಗುಣನಾಗಿದ್ದರೂ ಸಕಲಗುಣಗಳಿಗೂ ಆಶ್ರಯನಾಗಿ, ಯಾವ ಬಯಕೆಯೂ ತನಗೆ ಇಲ್ಲದಿದ್ದರೂ ತನ್ನನ್ನು ಎಲ್ಲರೂ ಬಯಸುವ ಹಾಗೆ ಇರುವಂಥ ಮಹಾವಿಷ್ಣುವನ್ನೇ ಮನಸ್ಸಿನಲ್ಲಿ ತನಗೆ ಅನುರೂಪನೆಂದು ನಿಶ್ಚಯಿಸಿ ಝೇಂಕಾರದಿಂದ ಭ್ರಮರಗಳು ಮುತ್ತುತ್ತಿರುವ ಕಮಲಮಾಲೆಯನ್ನು ಆ ಭಗವಂತನ ಕೊರಳಲ್ಲಿ ಹಾಕಿ ಆತನ ಸಾಮೀಪ್ಯವನ್ನು ಸೇರಿಬಿಟ್ಟಳು !

ಇನ್ನು ಅಸುರರಿಗೆ ತಡೆಯುವದಕ್ಕಾಗದೆಹೋಯಿತು. ಕಾಮಧೇನು, ಕಲ್ಪವೃಕ್ಷ , ಉಚ್ಚೈಃಶ್ರವಸ್ಸು , ಐರಾವತ , ಕೌಸ್ತುಭ , ಪಾರಿಜಾತ , ಚಂದ್ರ, ಅಪ್ಸರಸ್ತ್ರೀಯರು , ಲಕ್ಷ್ಮಿ- ಇಷ್ಟು ವಸ್ತುಗಳು ಉತ್ಪನ್ನವಾದರೆ ತಮಗೆ ಒಂದೂ ಬೇಡವೆ? ಈ ದೇವತೆಗಳಿಗೆ ತಕ್ಕ ಶಾಸನವನ್ನು ಮಾಡಬೇಕು- ಎಂದು ಅವರು ಯೋಚಿಸಿದರು. ಒಂದು ಕ್ಷಣದೊಳಗಾಗಿ ಅಮೃತಕಲಶವು ಬಲಿರಾಜನ ಕೈಯನ್ನು ಸೇರಿಬಿಟ್ಟಿತು !

ದೇವತೆಗಳೂ ಅಸುರರೂ ಸಮವಾಗಿ ಆಯಾಸಪಟ್ಟು ಸಮುದ್ರ ಮಥನವನ್ನು ಮಾಡಿದ್ದಾರೆಂಬುದು ನಿಜ. ಆದರೆ ತಮ್ಮಂತೆ ದೇವತೆಗಳಿಗೂ ಸರಿಯಾಗಿ ಅರ್ಧಪಾಲು ಅಮೃತವು ಸೇರತಕ್ಕದೆಂದು ಅಸುರರಿಗೆ ಈಗ ತೋರಲಿಲ್ಲ. ಕಾಮಧೇನು ಮುಂತಾದವುಗಳು ದೇವತೆಗಳನ್ನು ತಾವೇ ವರಿಸಿದ್ದವು; ಮದಿರಾದೇವಿಯನ್ನು ಅಸುರರು ತಾವಾಗಿಯೇ ವಶಮಾಡಿ ಕೊಂಡಿದ್ದರು. ಅಮೃತವನ್ನು ಯಾರೊಬ್ಬರೂ ತಮಗೆ ಬೇಕೆನ್ನುವದಕ್ಕೆ ಕಾರಣವೇ ಇರಲಿಲ್ಲವಾದರೂ ''ಬಲಿಷ್ಠರಾದ ನಮ್ಮ ಸಹಾಯವಿಲ್ಲದಿದ್ದರೆ ದೇವತೆಗಳಿಂದಲೇ ಈ ದೊಡ್ಡ ಕೆಲಸವು ಈಡೇರುತ್ತಿತ್ತೆ? ದೇವತೆಗಳು ನೆಪಕ್ಕೆ ನಿಂತಿದ್ದರೇ ಹೊರತು ನಿಜವಾಗಿ ನಾವೇ ಸಮುದ್ರವನ್ನು ಕಡೆದೆವು ! ಹೀಗಿರುವಲ್ಲಿ ನಮಗೂ ಅವರಿಗೂ ಸರಿಪಾಲೆಂಬುದು ಎಲ್ಲಿಯ ಮಾತು? ಚಿಲ್ಲರೆಪಲ್ಲರೆಯ ಸಾಮಾನುಗಳನ್ನು ಅವರು ತೆಗೆದುಕೊಂಡರು. ಅವು ಹೋಗಲಿ, ಮುಖ್ಯಫಲವಾದ ಅಮೃತವು ನಮ್ಮದೇ ಹೊರತು ಅವರಿಗೇನೂ ಇದರಲ್ಲಿ ಭಾಗವಿರುವದಕ್ಕೆ ಕಾರಣವಿಲ್ಲ'' ಎಂದು ಅಸುರರೆಲ್ಲರೂ ಯೋಚಿಸತೊಡಗಿದರು. ತಮ್ಮ ಮತವು ಅಯುಕ್ತವೆಂದು ಅವರಲ್ಲಿ ಯಾರೊಬ್ಬರಿಗೂ ತೋರಲಿಲ್ಲ.

ಒಗ್ಗಟ್ಟಾಗಿ ಕೆಲಸವನ್ನು ಮಾಡುವದುತ್ತಮವೆಂಬುದನ್ನು ಈ ಲೋಕದಲ್ಲಿ ಅನೇಕರು ಹೇಳುವರು ; ಆದರೆ ಬರುವ ಫಲಿತಾಂಶವು ಸಮವಾಗಿ ಎಲ್ಲರಿಗೂ ಸಿಕ್ಕುವದು ಯುಕ್ತವೆಂದು ಯಾರಿಗೂ ತೋಚುವದಿಲ್ಲ. ಪ್ರತಿಯೊಬ್ಬನೂ ''ನಾನೇ ಈ ಕೆಲಸದಲ್ಲಿ ಮುಖ್ಯ ಭಾಗವನ್ನು ವಹಿಸಿದೆನು, ನನಗೇ ಪೂರ್ಣಫಲವು ಭರಬೇಕು ; ಒಂದು ವೇಳೆ ಅಲ್ಪಸ್ವಲ್ಪಭಾಗದ ಫಲವನ್ನು ನನ್ನಷ್ಟಣೆ ಪಡೆದು ಮಿಕ್ಕವರು ಅನುಭವಿಸಿದರೂ ಅನುಭವಿಸಲಿ !'' ಎನ್ನುವನು. ಅದರಲ್ಲೂ ಫಲವು ಕೈಗೆ ಬಂದಾಗ ಕಾರ್ಯದ ಸಮಯದಲ್ಲಿ ಮುಖ್ಯವಾಗಿ ಸಹಾಯಮಾಡಿದವನ ನೆನಪು ಕೂಡ ಬರದೆ ಇರುವದುಂಟು! ಭೂಲೋಕದಲ್ಲಿ ಆಗಾಗ ನಡೆಯುವ ಮಹಾಯುದ್ಧಗಳಿಗೇನು ಕಾರಣ ? ಆ ಯುದ್ಧಗಳು ಪೂರೈಸಿದ ಮೇಲೆ ಒಂದೊಂದು ಕಡೆ ನಿಂತು ಕೆಲಸಮಾಡಿದವರು ತಮ್ಮತಮ್ಮೊಳಗೆ ಹೊಂದಿಕೊಳ್ಳದೆ ಮತ್ತೆ ಕಚ್ಚಾಡುವದಕ್ಕೆ ಏನು ಕಾರಣ? ಕಾರ್ಯದ ಮೊದಲು ಇದ್ದ ನಿಃಸ್ಪೃಹತೆ ಕಾರ್ಯಾಂತದಲ್ಲಿ ಇಲ್ಲದೆ ಹೋಗುವದೆ ಅಲ್ಲವೆ? ಮನುಷ್ಯನಿಗೆ ಸ್ವಾರ್ಥಬುದ್ಧಿಯಿರುವವರೆಗೆ ಯುಕ್ತಾಯುಕ್ತವಿಚಾರವು ಅವನಿಗೆ ತೋಚದೆ ಹೋಗುವದೇನೂ ಆಶ್ಚರ್ಯವಲ್ಲ.

ಇಲ್ಲಿ ಇನ್ನೊಂದು ವಿಷಯ. ದುಷ್ಟರಿಗೆ ಮತ್ತೊಬ್ಬರಿಗೆ ತೊಂದರೆಯನ್ನುಂಟುಮಾಡುವದು ತಿಳಿಯುವದೇ ಹೊರತು ತಾವು ಸುಖ ಪಡುವ ರೀತಿಯು ಗೊತ್ತಿರುವದು ಕಡಿಮೆ. ರಾಗದ್ವೇಷಗಳಿಗೆ ಪರವಶರಾಗಿದ್ದ ಅಸುರರೊಳಗೆ ಒಬ್ಬರಿಗೂ ಅಮೃತವು ತಮ್ಮ ಕೈಯಲ್ಲಿ ಈಗ ಸಿಕ್ಕಿರುವದರಿಂದ ಅದನ್ನು ಕುಡಿದು ಬಿಡಬೇಕೆಂಬ ಬುದ್ಧಿ ಬರಲಿಲ್ಲ. ದೇವತೆಗಳಲ್ಲಿ ಯಾವಾಗ ಯಾರು ಬಂದು ಅದನ್ನು ಎಲ್ಲಿ ಅಪಹರಿಸಿಕೊಂಡು ಹೋಗಿಬಿಟ್ಟಾರೋ ಎಂದು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಎಲ್ಲರ ಕಡೆಗೂ ನೋಡುತ್ತಾ ಅವರು ನಿಂತುಕೊಂಡುಬಿಟ್ಟರು. ಅಷ್ಟೇ ಅಲ್ಲ. ತಮ್ಮತಮ್ಮೊಳಗೆ ವ್ಯವಸ್ಥೆಯನ್ನು ಮಾಡಿಕೊಳ್ಳುವದು ಅವರಿಂದಾಗಲಿಲ್ಲ. ಅಮೃತವನ್ನು ಮೊದಲು ಯಾರು ಪಾನ ಮಾಡಬೇಕು? ಅದು ಎಲ್ಲರಿಗೂ ಸರಿಯಾಗಿ ಸಲ್ಲಬೇಕೆ? ಅಥವಾ ತಮ್ಮಲ್ಲಿ ಯಾರಾದರೊಬ್ಬನ ಪಾಲಾಗುವದು ಯುಕ್ತವೆ? -ಎಂದು ಮುಂತಾಗಿ ವಿಚಾರಗಳು ಒಂದರ ಹಿಂದೊಂದು ಅವರಿಗೆ ಬರತೊಡಗಿದವು. ಬರುಬರುತ್ತಾ ಅವರಲ್ಲಿ ಪಿಸುಗುಟ್ಟುವದು, ಗೊಣಗುಟ್ಟುವದು, ಆ ಮಾತು, ಈ ಮಾತು- ಹೀಗೆ ಸ್ವಲ್ಪಸ್ವಲ್ಪವಾಗಿ ಶಬ್ದವು ಹುಟ್ಟಿ ಕೊನೆಗೆ ದೊಡ್ಡ

ಕೋಲಾಹಲವೇ ಎದ್ದುಬಿಟ್ಟಿತು. ಅವರೆಲ್ಲರೂ ಹಲ್ಲುಕಡಿಯುತ್ತಾ ಮೀಸೆಗಳನ್ನು ಕುಣಿಸುತ್ತಾ ಕಣ್ಣುಗಳಲ್ಲಿ ಕೆಂಡವನ್ನುಗುಳುತ್ತಾ ಕೈಯಲ್ಲಿ ಮುಷ್ಠಿಗಳನ್ನು ಮಾಡಿಕೊಂಡು ಒಬ್ಬರನ್ನೊಬ್ಬರು ನೋಡುವದಕ್ಕೆ ಪ್ರಾರಂಭಿಸಿದರು !

## ಒಂಬತ್ತನೆಯ ತರಂಗ

### (ಮೋಹಿನಿಯ ಪ್ರಾದುರ್ಭಾವ)

ಅಮೃತಕಲಶವನ್ನು ಒಬ್ಬರ ಕೈಯಿಂದೊಬ್ಬರು ಕಸಿದುಕೊಳ್ಳುತ್ತಾ ದೇವತೆಗಳನ್ನು ಕೆಂಗಣ್ಣುಗಳಿಂದ ನೋಡಿ ಬೆದರಿಸುತ್ತಾ ಅಸುರರು-ಪಂಚಭಕ್ಷ್ಯಪರಮಾನ್ನದ ಸಮಾರಾಧನೆಯು ನಡೆಯುತ್ತಿರುವಾಗ ಅಡಿಗೆಯ ಸುವಾಸನೆಗೆ ಪರವಶವಾಗಿ ಒಳಕ್ಕೆ ನುಗ್ಗಿ ಒಂದನ್ನೊಂದು ನೋಡಿ ಗುರುಗುಟ್ಟಿ ಬೊಗಳುತ್ತಿರುವ ನಾಯಿಗಳ ಹಾಗೆ- ಕಾಣಿಸುತ್ತಿದ್ದರಷ್ಟೆ. ಇಂಥ ಸಮಯಕ್ಕೆ ಸರಿಯಾಗಿ ರಂಗಸ್ಥಲಕ್ಕೆ ಮತ್ತೊಂದು ಪಾತ್ರದ ಪ್ರವೇಶವಾಯಿತು. ಸರ್ವೋಪಾಯಗಳಲ್ಲಿಯೂ ಚತುರನಾದ ಮಹಾವಿಷ್ಣುವು ಜನರು ಯಾರೂ ಹಿಂದೆ ನೋಡದ್ದಾಗಿಯೂ ಮುಂದೆ ನೋಡುವ ಸಂಭವವೇ ಇಲ್ಲದ್ದಾಗಿಯೂ ಇರುವ ಒಂದು ಅನಿರ್ದೇಶ್ಯವಾದ ಸ್ತ್ರೀವೇಷವನ್ನು ಧರಿಸಿ ಅವರ ನಡವೆ ಕಾಣಿಸಿಕೊಂಡನು.

ಆಕೆಯ ಮೈಬಣ್ಣವನ್ನು ನೋಡುವದಕ್ಕೆ ಕಣ್ಣು ಹಾಕಿದವರು ಎವೆ ಇಕ್ಕುವದಕ್ಕೆ ಅವಕಾಶವೇ ಇರಲಿಲ್ಲ. ಮೈಬಣ್ಣವೇನೂ ಕೆಂಪಾಗಿರಲಿಲ್ಲ ; ಆದರೆ ಅದು ಇಂದ್ರನೀಲದ ಚಾಕಚಕ್ಯವನ್ನು ವಹಿಸಿದ್ದಿತು. ಅವಳ ಬಟ್ಟನೆಯ ಮುಖದ ಸೌಂದರ್ಯವನ್ನು ನಿರ್ಣಯಿಸುವದು ಬಲುಕಷ್ಟವಾಗಿತ್ತು. ವಿಶಾಲವಾಗಿದ್ದ ಹಣೆಯಲ್ಲಿಟ್ಟಿದ್ದ ಕುಂಕುಮವು ಸಮುದ್ರದಿಂದೆದ್ದ ಹುಣ್ಣಿಮೆಯ ಚಂದ್ರನನ್ನು ನೋಡಿ ನಗುವಂತಿತ್ತು. ಕೆಳಗಡೆ ಜೋಡಿಯ ಮೀನುಗಳಂತೆ ಎಸೆಯುವ ಕಾಂತಿಯಿಂದ ಕೂಡಿದ್ದ ಕಣ್ಣುಗಳೂ ಅವುಗಳ ಕೊನೆಯಲ್ಲಿದ್ದ ಕಸ್ತೂರಿಯ ರೇಖೆಗಳೂ ಮೇಲುಗಡೆಯಲ್ಲಿ ಕಾಮನಬಿಲ್ಲಿನಂತೆ ಬಾಗಿದ್ದ ಹುಬ್ಬುಗಳೂ ಮುಖದ ಶೋಭೆಯನ್ನು ಇಮ್ಮಿಗಿಲಾಗಿಸುತ್ತಿದ್ದವು. ಆಕೆಯ ಕಪೋಲದೇಶದಲ್ಲಿ ಎದುರಿಗೆ

ನೋಡುವವರ ಪ್ರತಿಬಿಂಬವು ಬಿದ್ದು ಮೇಲೆ ಬರೆದಿರುವ ಮಕರಿಕೆಯನ್ನು ಸೇರಿಕೊಳ್ಳುವದನ್ನು ಕಂಡು ಅಸುರರಿಗೆ ಒಬ್ಬರಲ್ಲೊಬ್ಬರಿಗೆ ದ್ವೇಷವೂ ಅಸೂಯೆಯೂ ಅಂಕುರಿಸುವದಕ್ಕೆ ಮೊದಲಾಯಿತು. ಆಕೆಯ ದಿವ್ಯಕರ್ಣಾಭರಣದ ಕಾಂತಿಯೂ ಉನ್ನತವಾದ ಮೂಗಿನಲ್ಲಿ ಥಳಾರೆಂದು ಎದ್ದುಕಾಣುವ ವೈಡೂರ್ಯಮಣಿಯ ಮೂಗುಬಟ್ಟಿನ ಕಾಂತಿಯೂ ಪರಸ್ಪರ ಯೋಗಕ್ಷೇಮವನ್ನು ವಿಚಾರಿಸುವಂತೆ ಒಂದನ್ನೊಂದು ತಾಕಿ ಕೆನ್ನೆಯ ಬಣ್ಣವು ಕ್ಷಣಕ್ಕೊಂದು ಬಗೆಯಾಗಿ ತೋರುವಂತೆ ಮಾಡುತ್ತಿದ್ದವು. ಬಂಧುರವಾದ ಆಕೆಯ ಕಂಧರವನ್ನು ಬಿಟ್ಟು ಕೆಳಗೆ ಉರಃಪ್ರದೇಶದವರೆಗೆ ಜೋತು ಬಿದ್ದಿದ್ದ ಮುಕ್ತಾಹಾರಗಳು ನವಯೌವನವನ್ನು ವ್ಯಕ್ತಗೊಳಿಸುವ ಸ್ತನಗಳೆಂಬ ರತ್ನಕಲಶಗಳ ಮೇಲೆ ಹೊದಿಸಿರುವ ಅರೆಸೆರಗಿನ ಹಸುರು ಸೀರೆಯ ಕಾಂತಿಯನ್ನು ಒಳಗೊಂಡು ಇದ್ದದ್ದರಿಂದ ತಿಳಿಯದ ಜನರಿಗೆ ಒಮ್ಮೆ ಮಾಣಿಕ್ಯದ ಹಾರದಂತೆಯೂ ಮತ್ತೊಮ್ಮೆ ಮರಕತದ ಹಾರದಂತೆಯೂ ಇನ್ನೊಮ್ಮೆ ಇಂದ್ರನೀಲದ ಹಾರದಂತೆಯೂ ತೋರುತ್ತ ಭ್ರಾಂತಿಯನ್ನುಂಟು ಮಾಡುತ್ತಿದ್ದವು. ಮೈಲಾವಣ್ಯವು ಹೆಚ್ಚಿದಷ್ಟೂ ಬಡವಾಗಿರುವ ನಡುವಿನಿಂದ ಕೂಡಿದ ಆ ರಮಣಿಯು ನಿರ್ಮಲವಾಗಿರುವ ಸೀರೆಯ ನೆರಿಗಳನ್ನು ಮುಂದಕ್ಕೆ ಚಿಮ್ಮುತ್ತಿರುವ ಕಾಲುಗಳಿಂದ ಒಂದೊಂದು ಹೆಜ್ಜೆಯಾಗಿ ಮನ್ಮಥನ ಮದ್ದಾನೆಯಂತೆ ಬರುತ್ತಿರುವಾಗ ಆಕೆಯ ಹಿಂದೆ ಬೆನ್ನಿನ ಮೇಲೆ ಜರತಾರಿಯ ಸೀರೆಯ ಸೆರಗಿನ ಮೇಲೆ ಇಳಿಯ ಬಂದಿರುವ ಕೃಷ್ಣಸರ್ಪನ ಹೋಲುವೆಯ ಜಡೆಯನ್ನು ನೋಡಿದರೆ ವಿರಕ್ತರಾದ ಜನಗಳಿಗೂ ಶೃಂಗಾರ ಚೇಷ್ಟೆಗಳುಂಟಾಗುವಂತಿರುವಾಗ ರಾಗದ್ವೇಷಾದಿಗಳಿಗೇ ಮನಸ್ಸನ್ನು ಸೂರೆಗೊಟ್ಟಿದ್ದ ಆ ಬಣಗುಗಳಾದ ಅಸುರರ ಪಾಡನ್ನು ಹೇಳಬೇಕೆ? ಜಡೆಯ ಮೇಲೂ ಕೊರಳಲ್ಲಿಯೂ ಇರುವ ಅರೆಬಿರಿದ ಮಲ್ಲಿಗೆಯ ಮೊಗ್ಗುಗಳ ಸುವಾಸನೆಗೆಂದು ಎರಗುವ ದುಂಬಿಗಳ ಝೇಂಕಾರಕ್ಕೆ ಚಕಿತಳಾದಂತೆ ವಿಲಾಸಯುಕ್ತವಾದ ನೋಟಗಳನ್ನು ಬೀರುವದಕ್ಕೆ ಕಣ್ಣುಗಳನ್ನು ಸಿದ್ಧವಾಗಿಸುವದಕ್ಕೋಸ್ಕರ ಮುಚ್ಚಿಕೊಳ್ಳುತ್ತಲೂ ಝುಣತ್ಕಾರದಿಂದ ಪಿಲ್ಲಿಗಳ ಧ್ವನಿಮಾತ್ರದಿಂದ ಎಷ್ಟೋಜನ ಯುವಕರಾದ ಅಸುರರನ್ನು ಮುಗ್ಧರನ್ನಾಗಿ ಮಾಡುತ್ತಲೂ ನಾಚಿಕೆಯನ್ನು ಸೂಚಿಸುವಂತೆ ತುಸು ಬಗ್ಗಿದ ತಲೆಯಿಂದ ಮುಖದ ಭಾವವೂ ತುಟಿಯ ಮೇಲುಗಡೆ ಸುಳಿದಾಡುತ್ತಿರುವ ಹುಸಿನಗೆಯೂ ಹುಬ್ಬಿನ ವಿಕ್ಷೇಪವೂ ಮುಂದಿರುವವರಿಗೆ

ಚೆನ್ನಾಗಿ ಕಾಣುತ್ತಿರಲು, ಬೆಪ್ಪಾಗಿರುವಾಗಲೇ ಅವರನ್ನು ತನ್ನ ತೀವ್ರವಾಗಿಯೂ ಮೋಹಕವಾಗಿಯೂ ಇರುವ ಕಟಾಕ್ಷಗಳಿಂದ ಹಿಡಿದು ಬಿಗಿದು ಕಾಮನಿಗೆ ಒಲಿಕೊಡುತ್ತಲೂ ದೈತ್ಯರಾಜರ ಗುಂಪಿನಲ್ಲಿ ಮಹಾಕಾಮೋದ್ದೀಪಕವಾದ ವಿಲಕ್ಷಣಸೌಂದರ್ಯದಿಂದ ಆ ಯುವತಿಯು ಎಲ್ಲೆಲ್ಲಿಯೂ ಜನರಿಗೆ ಮನಃಕ್ಷೋಭೆಯನ್ನುಂಟುಮಾಡುತ್ತಿದ್ದಳು.

ಆಗ ಅಸುರರು ಆಕೆಯು ಬೀಸಿದ ಬಲೆಯಲ್ಲಿ ಒಬ್ಬೊಬ್ಬರಾಗಿ ಬೀಳುವದಕ್ಕೆ ಮೊದಲುಮಾಡಿ ''ಆಹಾ ! ಏನು ರೂಪವು, ಏನು ಕಾಂತಿಯು, ಏನು ಯೌವನವು !'' ಎಂದು ಆಕೆಯ ಬಳಿಗೆ ಓಡಿಬಂದರು. ಅವಳನ್ನು ಕುರಿತು ''ಎಲೈ ಕಮಲಪತ್ರದಂತೆ ಕಣ್ಣುಗಳುಳ್ಳವಳೆ, ನೀನು ಯಾರು? ಏನು ಮಾಡುವದಕ್ಕಾಗಿ ಇಲ್ಲಿಗೆ ಬಂದಿರುವೆ? ಎಲೈ ವಾಮೋರುವೆ, ನೀನು ಯಾವಾತನ ಪತ್ನಿಯು? ನಿನ್ನನ್ನು ನೋಡಿ ನಮ್ಮ ಮನಸ್ಸುಗಳು ಕಡೆದಹಾಗೆ ಆಗಿಬಿಟ್ಟಿವೆ. ನಿನ್ನನ್ನು ನೋಡಿದರೆ ದೇವತೆಗಳಾಗಲಿ, ದೈತ್ಯರಾಗಲಿ, ಸಿದ್ಧರಾಗಲಿ, ಸಾಧ್ಯರಾಗಲಿ, ಗಂಧರ್ವರಾಗಲಿ, ಚಾರಣರಾಗಲಿ, ಲೋಕಪಾಲಕರಾಗಲಿ, ಮತ್ತೆ ಯಾರಾಗಲಿ, ಇದಕ್ಕೆ ಪೂರ್ವದಲ್ಲಿ ನಿನ್ನನ್ನು ಸ್ಪರ್ಶಮಾಡಿರುವಂತೆ ತೋರುವದಿಲ್ಲ; ಹೀಗಿರುವಾಗ ಮನುಷ್ಯರಿಗೆ ನೀನು ದಕ್ಕಿಲ್ಲವೆಂದು ಹೇಳಬೇಕಾದದ್ದೆ ಇಲ್ಲ. ದಯಾಮಯನಾದ ವಿಧಿಯು ಶರೀರಗಳ ಸರ್ವೇಂದ್ರಿಯಗಳಿಗೂ ಮನಸ್ಸಿಗೂ ತೃಪ್ತಿಯಾಗಲಿ ಎಂದು ನಿನ್ನನ್ನು ಸೃಷ್ಟಿಮಾಡಿರಬೇಕು. ಎಲೈ ಮಾನಿನಿಯೇ, ಸದ್ಯಕ್ಕೆ ನಮ್ಮನಮ್ಮಲ್ಲಿಯೇ ಒಂದು ಜಗಳವುಂಟಾಗಿರುವದು. ನಾವೆಲ್ಲರೂ ಕಶ್ಯಪರ ವಂಶದಲ್ಲಿಯೇ ಹುಟ್ಟಿದ್ದರೂ ಈಗ್ಗೆ ಅಮೃತವೆಂಬ ಈ ಒಂದು ಪದಾರ್ಥದ ವಿಷಯದಲ್ಲಿ ವೈಷಮ್ಯವುಂಟಾಗಿರುವದು. ನಾವೆಲ್ಲರೂ ಸಮುದ್ರವನ್ನು ಕಡೆದು ಈ ಪದಾರ್ಥವನ್ನು ತೆಗೆದಿರುತ್ತೇವೆ ; ಆದ್ದರಿಂದ ನಮ್ಮಲ್ಲಿ ಯಾವಭೇದವೂ ಇಲ್ಲದ ಹಾಗೆ ಇದನ್ನು ಹಂಚುವಳಾಗು. ಇಗೋ, ಈ ಕಲಶವನ್ನು ನಿನ್ನ ಕೈಯಲ್ಲಿ ಕೊಟ್ಟಿರುತ್ತೇವೆ. ನಿನಗೆ ಹೇಗೆ ನ್ಯಾಯವೆಂದು ತೋರುವದೋ ಅದರಂತೆ ಇದನ್ನು ಹಂಚುವಳಾಗು''ಎಂದು ಹೇಳಿದರು.

ಆಗ ಮಾಯಾಸ್ತ್ರೀಯಾದ ಶ್ರೀಹರಿಯು ಅವರನ್ನು ಕುರಿತು ''ಎಲೈ , ಕಶ್ಯಪದಾಯಾದರೆ, ನನ್ನಂಥವಳಲ್ಲಿ ನಿಮಗೆ ವಿಶ್ವಾಸವುಂಟಾದದ್ದು ಹೇಗೆ? ಹೊಸಹೊಸ ವಸ್ತುಗಳಲ್ಲಿ ಮನಸ್ಸಿರುವ ನನ್ನಂಥ ಸ್ತ್ರೀಯರಲ್ಲಿ ಯಾರ

ವಿಶ್ವಾಸವೂ ನಿತ್ಯವಾಗಿರುವದು ಕಷ್ಟವು. ಜೋಕೆ, ನೋಡಿಕೊಳ್ಳಿ ! ಆಮೇಲೆ ನನ್ನಿಂದ ಅನ್ಯಾಯವಾಯಿತು ಎಂದೀರೀ ! ತಪ್ಪೋನೆಪ್ಪೊ , ನನಗೆ ತಿಳಿದಹಾಗೆ ನಾನು ಹಂಚಿಬಿಡುವೆನು. ಅದೇ ನಿಮಗೆ ಸಮ್ಮತವಾಗಿದ್ದರೆ ಮಾತ್ರ ಹೇಳಿ ; ಇಲ್ಲದಿದ್ದರೆ ಈ ಕಾರ್ಯಕ್ಕೆ ನನ್ನನ್ನು ನಿಯೋಜಿಸಲೇಬೇಡಿ ?'' ಎಂದಳು. ಆದರೂ ಅಸುರರು ''ಈಕೆಯು ಖಂಡಿತವಾಗಿಯೂ ನ್ಯಾಯವಾಗಿ ಹಂಚುವಳು; ನಮ್ಮನ್ನು ಪರೀಕ್ಷೆಮಾಡುವದಕ್ಕೇ ಹೀಗೆ ಹೇಳುತ್ತಿದ್ದಾಳೆ'' ಎಂದೇ ಧೃಢವಾಗಿ ನಂಬಿ ''ನಿನಗೆ ಹೇಗೆ ತೋರಿದರೆ ಹಾಗೆ ಮಾಡುವಳಾಗು; ಅದೇ ನಮಗೆ ಪಥ್ಯವು. ನಿನ್ನ ಕೈಯ್ಯಾರೆ ಈ ದಿವ್ಯಾಮೃತವನ್ನು ಬಡಿಸಿದ್ದನ್ನು ನಾವು ನೋಡಬೇಕೆಂದು ಬಹಳ ಕುತೂಹಲಿಗಳಾಗಿದ್ದೇವೆ'' ಎಂದರು.

ಮನುಷ್ಯನು ಶ್ರಮದಿಂದ ದುಡಿದಮಾತ್ರಕ್ಕೆ ಅದರ ಫಲವನ್ನೆಲ್ಲಾ ಅನುಭವಿಸಿಯೇ ತೀರುವನೆಂಬ ನಿಯಮವೇನೂ ಇಲ್ಲ. ಕೆಲವು ವೇಳೆಗಳಲ್ಲಿ ಈಗ ನಾವು ಪಡುವ ಶ್ರಮವು ಹಿಂದೆ ನಾವು ಅನುಭವಿಸಿದ ಸುಖಕ್ಕೆ ಕಾರಣರಾಗಿದ್ದವರಿಗೆ ತೀರಿಸಬೇಕಾದ ಸಾಲವಾಗಿರುವದು. ಇನ್ನು ಕೆಲವು ವೇಳೆಗಳಲ್ಲಿ ಈಗ ನಾವು ಪಡುವ ಕಷ್ಟವು ವಿಘ್ನಗಳಿಂದ ಉಪಹತ ವಾಗಿರುವದರಿಂದ ಕೂಡಲೆ ಫಲವನ್ನು ಕೊಡಲಾರದೆ ಕಾಲಾಂತರದಲ್ಲಿಯೋ ಜನ್ಮಾಂತರದಲ್ಲಿಯೋ ಫಲವನ್ನು ಕೊಡುವಹಾಗಿರುವದು. ಇದೇನು ಅದೃಷ್ಟವಾದ ! ಎಂದು ಈಗಿನ ಪೌರುಷಪ್ರಧಾನರಾದ ಕೆಲವರು ಈ ಮತವನ್ನು ಅಲ್ಲಗೆಳೆಯುವರು. ನಾವು ಪೌರುಷವನ್ನು ಅಸಡ್ಡೆ ಮಾಡುವದಕ್ಕಾಗಿ ಈ ಅಭಿಪ್ರಾಯವನ್ನು ಕೊಟ್ಟಿರುವೆವೆಂದು ಯಾರೂ ತಿಳಿಯಬಾರದು. ಫಲಕ್ಕೆ ಶ್ರಮವೊಂದೇ ಕಾರಣವಲ್ಲವೆಂತಲೂ ಶ್ರಮದ ಪರಿಮಾಣಕ್ಕನುಸಾರವಾಗಿ ಕೆಲಸವು ಸಫಲವಾಗಿಯೇತೀರಬೇಕೆಂದು ಭಾವಿಸುವದು ತಪ್ಪೆಂತಲೂ ತಿಳಿಸುವದೇ ನಮ್ಮ ಉದ್ದೇಶವು. ಇದನ್ನು ಧೃಢಪಡಿಸುವ ಉದಾಹರಣೆಗಳು ಬೇಕಾದಷ್ಟು ವ್ಯವಹಾರದಲ್ಲಿ ಸಿಕ್ಕುತ್ತವೆ. ಕಷ್ಟಪಟ್ಟು ಪೈರುಮಾಡಿ ಕಟಾವುಮಾಡಿ ತಾವು ತಂದ ಧಾನ್ಯವನ್ನೆಲ್ಲಾ ಬಡ್ಡಿಗೆಂದು ಸಾಹುಕಾರನ ಮನೆಗೆ ಬೆನ್ನುಮುರಿಯ ಹೊತ್ತುಕೊಂಡುಹೋಗಿ ಕೊಟ್ಟು ವರ್ಷವೆಲ್ಲ ಒಪ್ಪತ್ತು ರಾಗಿಯ ಕಾಳನ್ನೇ ಕಾಣುವದು ದುರ್ಲಭವಾಗಿರುವ ರೈತರನ್ನೂ, ದೊಡ್ಡದೊಡ್ಡ ಗಿರಣಿಗಳಲ್ಲಿ ಯಜಮಾನನಿಗೆ ನೂರಕ್ಕೆ ಐವತ್ತರಂತೆ ಲಾಭವನ್ನುಂಟುಮಾಡುವಷ್ಟು ದುಡಿಯುತ್ತಿದ್ದರೂ ತಮ್ಮ ಮಟ್ಟಿಗೆ ಉಡುವದಕ್ಕೆ ಮಾರುಬಟ್ಟೆಯೂ ಮಕ್ಕಳು ಮರಿಗಳನ್ನು ರಾತ್ರಿಯಲ್ಲಿ ಮಲಗಿಸುವದಕ್ಕೆ ಒಂದು ಗುಡಿಸಲೂ ಒಬ್ಬೊಬ್ಬರಿಗೆ

ದಿನಕ್ಕೆ ಒಂದು ಹಿಡಿದವಸವೂ ಸಿಕ್ಕುವದೇ ಹಬ್ಬವೆಂದೂ ಎಣಿಸುವ ಕೂಲಿಕಾರರನ್ನೂ ನೋಡಿರಿ . ತಾವೇ ಊರನ್ನೆಲ್ಲಾ ಗುಡಿಸಿ ಚೊಕ್ಕಟ ಮಾಡುವವರಾದರೂ ತಮ್ಮ ಹಟ್ಟಿಯನ್ನು ಪ್ರತ್ಯಕ್ಷನರಕವಾಗುವಂತೆ ಮಾಡಿಕೊಂಡು ''ಅತ್ತ ಹೋಗಿ, ಇತ್ತ ಬನ್ನಿ''ಎನಿಸಿಕೊಳ್ಳುತ್ತಾ ಪಶುಗಳಿಗಿಂತ ಕೀಳುಸ್ಥಿತಿಯಲ್ಲಿ ಕಾಲಹಾಕುತ್ತಿರುವ ಅನುಕಂಪನೀಯ ಜನರನ್ನು ನೋಡಿರಿ. ಇವರೇಕೆ ಹೀಗೆ ಕಷ್ಟಪಡುತ್ತಿರುವರು? ಇವರೆಲ್ಲ ಮತ್ತೊಬ್ಬರ ಮಾಯೆಯಿಂದ ಮೋಸಹೋಗಿರುವ ಮೂಢರೆಂದೂ ಸ್ವತಂತ್ರರಾಗಿರುವ ಜನರು ಹಾಗೆ ದುಃಖಕ್ಕೊಳಗಾಗುವುದಿಲ್ಲವೆಂದೂ ಯಾರಾದರೂ ಹೇಳಬಹುದು. ಆದರೆ ಮನೆಯಲ್ಲಿ ಲೆಕ್ಕವಿಲ್ಲದಷ್ಟು ಮಕ್ಕಳಿರುವವರು ಕೂಡ ತಕ್ಕಮಟ್ಟಿಗೆ ಸಾಕಾಗುವಷ್ಟು ಹಣವನ್ನು ವರ್ಷವೆಲ್ಲ ಗಳಿಸುತ್ತಿದ್ದರೂ ಹಣವು ಕೈಸೇರಿದಾಗ ಅದನ್ನು ಜೂಜು, ಕುಡಿತ, ನಾಟಕ, ಹೋಟಲು, ಸಿನೆಮಾ-ಎಂದು ಅಡಿಕೆಕಡಿಯುವಷ್ಟು ಹೊತ್ತಿನಲ್ಲಿ ಕಂಡವರಿಗೆ ಸೂರೆಗೊಟ್ಟು ದಿವಾಳಿಯಾಗಿ ತಾವೂ ಕೆಟ್ಟು ತಮ್ಮನ್ನು ನಂಬಿದವರನ್ನೂ ಗೋಳಾಡಿಸುತ್ತಿರುವದೂ ಉಂಟಷ್ಟೆ. ಅವರು ಏತಕ್ಕೆ ಹಾಗೆ ಶೋಚನೀಯವಾದ ಸ್ಥಿತಿಯಲ್ಲಿರುವರು? ನಾವು ಮಾಡಿದ ಕರ್ಮವು ಸರಿಯಾಗಿ ಫಲವನ್ನು ಕೊಡಬೇಕಾದರೆ ಸುಮ್ಮನೆ ಶ್ರಮಪಡುವದೊಂದೇ ಸಾಲದು. ಮುಂದೆ ಆಗಬೇಕಾದ ಫಲವನ್ನೂ ನಾವು ಅದಕ್ಕಾಗಿ ಪಡಬೇಕಾಗಿರುವ ಶ್ರಮವನ್ನೂ ಇದರಿಂದ ನಮಗೂ ಉಳಿದವರಿಗೂ ಆಗಬಹುದಾದ ಹಿಂಸೆಯನ್ನೂ ತೂಕಹಾಕಿರಬೇಕು ; ಆಮೇಲೆ ಅದರಂತೆ ತಕ್ಕಷ್ಟು ಉತ್ಸಾಹವನ್ನೂ ಸಹಾಯಸಂಪತ್ತಿಯನ್ನೂ ಒದಗಿಸಿಕೊಳ್ಳಬೇಕು ; ಫಲವು ಕೈಸೇರುವಂತೆ ಆದರೆ, ಅಂಥ ಸಮಯದಲ್ಲಿ ಉಬ್ಬಿಹೋಗಿ 'ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡ' ಎಂಬಹಾಗೆ ಮಾಡದೆ ಕಾರ್ಯವು ಪೂರ ಸಫಲವಾಗುವವರೆಗೂ ಎಚ್ಚರದಿಂದ ಇರಬೇಕು ; ಫಲವು ಕೈಸೇರಿದಾಗ ಕೂಡ ರಾಗದ್ವೇಷಾದಿಗಳ ವಶರಾಗದೆ ಅದನ್ನು ಮಿತವಾಗಿ ಉಪಯೋಗಿಸಿಕೊಂಡು ಬೇರೆಯವರಿಗೆ ನಮ್ಮಲ್ಲಿ ಅಸೂಯೆಯುಂಟಾಗದಿರುವದಕ್ಕಾಗಿಯೂ ನಾವು ಅನುಭವಿಸುವ ಸುಖವು ಸವಿಹತ್ತುವದಕ್ಕಾಗಿಯೂ ನಮ್ಮ ಜೊತೆಗೆ ಬೇರೆಯವರನ್ನೂ ಫಲಾನುಭವಕ್ಕೆ ಭಾಗಿಗಳಾಗಗೊಡಬೇಕು. ಹಾಗಿಲ್ಲದೆ ಸುಮ್ಮನೆ ಶ್ರಮಪಟ್ಟ ಮಾತ್ರದಿಂದ ನಮಗೆ ಫಲದಲ್ಲಿ ಭಾಗವು ದೊರೆಯುವದೆಂದು ಭಾವಿಸುವದು ತೀರ ತಪ್ಪು. ಆ ಭಾವನೆಯನ್ನಿಟ್ಟು

ಕೊಂಡವರಿಗೆ ಯಾವಾಗಲಾದರೂ ಒಂದುಸಲ ಆಶಾಭಂಗವಾಗುವದು ತಪ್ಪುವದಿಲ್ಲ.

ಅಸುರರಿಗೆ ಇದನ್ನು ಬೇಗ ಮನಗಾಣುವ ಸಮಯವು ಬಂದೊದಗಿತು. ಅವರೆಲ್ಲರೂ ದೇವತೆಗಳೊಡನೆ ಸ್ನಾನಮಾಡಿ ನಿಯಮದಿಂದ ಹೋಮವನ್ನೂ ದಾನವನ್ನೂ ಮಾಡಿ ಶುಭ್ರವಸ್ತ್ರಗಳನ್ನುಟ್ಟುಕೊಂಡು ಪೂರ್ವಾಭಿಮುಖವಾಗಿ ಕುಳಿತಿರಲು ಧೂಪದ ಸುವಾಸನೆಯಿಂದಲೂ ದೀಪದ ಬೆಳಕಿನಿಂದಲೂ ಶೋಭಿಸುತ್ತಿದ್ದ ಆ ಭೋಜನಶಾಲೆಗೆ ತಾನುಟ್ಟ ಮಹಾರ್ಘವಾದ ಸೀರೆಯ ಸೆರಗನ್ನು ನೇವರಿಸಿಕೊಳ್ಳುತ್ತಲೂ ಕಾಲಿನ ನೂಪುರಗಳನ್ನು ಝಣಝಣಗುಟ್ಟಿಸುತ್ತಲೂ ಅತ್ತಿತ್ತ ತನ್ನ ಚಂಚಲವಾದ ನೋಟಗಳನ್ನು ಬೀರುತ್ತಲೂ ಆ ಮೋಹಿನಿಯು ಕೈಯಲ್ಲಿ ಕಲಶವನ್ನು ಹಿಡಿದುಕೊಂಡು ಬಂದಳು. ಕನಕಕುಂಡಲಗಳಿಂದಲೂ ಸುಂದರತರವಾದ ಕಿವಿಕಣ್ಣುಮೂಗುಕೆನ್ನೆಗಳಿಂದಲೂ ಶೋಭಿಸುತ್ತಿದ್ದ ಆ ಚಂದ್ರಮುಖಿಯಾದ ದಿವ್ಯಸ್ತ್ರೀಯನ್ನು ಕಂಡಮಾತ್ರದಿಂದ ದೇವಾಸುರರೆಲ್ಲರೂ ಸಮ್ಮೋಹದಿಂದ ಚಿತ್ರಪ್ರತಿಮೆಗಳಹಾಗೆ ನಿಶ್ಶಬ್ದರಾದರು. ''ಅಸುರರು ಒಂದುಸಾಲು, ದೇವತೆಗಳು ಒಂದುಸಾಲು- ಹೀಗೆ ಕುಳಿತುಕೊಳ್ಳಿ !'' ಎಂದು ಆಕೆಯು ಮೃದುಮಧುರಧ್ವನಿಯಿಂದ ಒಂದು ಸಲ ಹೇಳಿದಳೊ ಇಲ್ಲವೊ, ವಶೀಕರಣ ಮಂತ್ರಕ್ಕೆ ಕಟ್ಟುಬಿದ್ದವರಂತೆ ಅವರೆಲ್ಲರೂ ಕ್ಷಣಮಾತ್ರದಲ್ಲಿ ಎರಡು ಸಾಲಾದರು. ಅಮೃತಕಲಶವನ್ನು ಹಿಡಿದು ಪ್ರದಕ್ಷಿಣಾಕಾರವಾಗಿ ಬಡಿಸುವ ಕ್ರಮವನ್ನನುಸರಿಸುವವಳಂತೆ ದೇವತೆಗಳ ಪಙ್ಕ್ತಿಯಲ್ಲಿ ಬಡಿಸುವದಕ್ಕೆ ಹೊರಟು ಒಂದುಕಡೆಯಿಂದ ಅವರಿಗೆಲ್ಲ ಅಮೃತಪಾನವನ್ನು ಮಾಡಿಸುತ್ತಾ ಬಂದಳು. ಒಳಗೆ ಸುಪಕ್ವವಾದ ಭಕ್ಷ್ಯಭೋಜ್ಯಗಳು ಘಮಘಮವೆಂದು ವಾಸನೆ ಬೀರುತ್ತಿರಲು ಮನೆಯವರು ಏನು ಮಾಡುವರೋ ಎಂದು ಅಂಜಿ ಹೊರಗೆ ಇರುತ್ತಾ ಯಾರೂ ಕಾಣದಂತೆ ಎಂದಿಗೆ ಒಳಕ್ಕೆ ಹೋದೇವೆಂದು ಹಾತುವರಿಯುವ ಬೀದಿಯ ನಾಯಿಗಳ ಸ್ಥಿತಿಯನ್ನು ಅಸುರರೆಲ್ಲ ಆಗ ಹೋಲುತ್ತಿದ್ದರೆನ್ನಬಹುದು. ತಾವು ಕೊಟ್ಟ ಮಾತಿಗೆ ತಪ್ಪಬಾರದೆಂಬ ಗೌರವ ದೃಷ್ಟಿಯೊಂದು ಕಡೆ, ಇಂಥ ನಿರತಿಶಯ ಸುಂದರಳಾದ ಈ ಮಹಾಭಾಗಳ ಸ್ನೇಹವನ್ನು ಕಳೆದುಕೊಳ್ಳಬೇಕಲ್ಲ ! ಎಂಬ ಯೋಚನೆಯೊಂದು ಕಡೆ, ಹೆಂಗಸರ ಕೈಯಲ್ಲಿ ತಮ್ಮಂಥ ವೀರರು ಜಗಳವಾಡಬೇಕೆ? ಎಂಬ

ಹೇಸಿಕೆಯೊಂದು ಕಡೆ- ಇವೆಲ್ಲವೂ ಸೇರಿ ಅವರು ತುಟಿಪಿಟಕ್ಕೆನ್ನದೆ ಸುಮ್ಮನೆ ಕುಳಿತಿದ್ದರು.

ಇಷ್ಟರಲ್ಲಿ ಸ್ವರ್ಭಾನುವೆಂಬ ಅಸುರನು ತಾನೂ ದೇವತೆಗಳಂತೆಯೇ ವೇಷವನ್ನು ಧರಿಸಿ ಹೇಗೋ ದೇವತೆಗಳ ಗುಂಪಿನಲ್ಲಿ ಸೇರಿಕೊಂಡಿದ್ದನು. ಅವನಿಗೂ ದೇವತೆಗಳ ಜೊತೆಯಲ್ಲಿ ಅಮೃತವೂ ಸಂದುಹೋಯಿತು. ಸೂರ್ಯಚಂದ್ರರು ಇದನ್ನು ತಿಳಿದು ಸನ್ನೆಯನ್ನು ಮಾಡಲು ಕೂಡಲೆ ವಿಷ್ಣುವು ಅವನ ತಲೆಯನ್ನು ಚಕ್ರದಿಂದ ಕತ್ತರಿಸಿ ಇದ್ದಲ್ಲಿಯೇ ಮಾಯವಾಗಿ ಬಿಟ್ಟನು. ಹಾವಿಗೆ ಹಾಲೆರೆಯುವದು ಹೇಗೋ ಹಾಗೆ ಅಸುರರಿಗೆ ಅಮೃತ ಪಾನವು ಲೋಕಕ್ಕೆ ಅಹಿತವನ್ನೇ ಮಾಡುವದೆಂದು ತಿಳಿದ ಭಗವಂತನು ಹೀಗೆ ಅಸುರರನ್ನೆಲ್ಲಾ ಮೋಹಪಡಿಸಿ ದೇವತೆಗಳಿಗೆ ಅಮೃತಪಾನವನ್ನು ಮಾಡಿಸುವನಾದನು. ದೇವತೆಗಳ ಸೋಗನ್ನು ಹಾಕಿಕೊಂಡು ಅಮೃತವನ್ನು ಗಂಟಲುವರೆಗೆ ನುಂಗಿದ್ದ ಸ್ವರ್ಭಾನುವಿನ ರುಂಡವು ರಾಹುವೆಂಬ ಹೆಸರಿನಿಂದ ಅಮರನಾಗಿ ಗ್ರಹಗಳಲ್ಲಿ ಸೇರಿಹೋಯಿತು ; ಮುಂಡವು ಕೇತುವೆಂಬ ಹೆಸರಿನಿಂದ ಪ್ರಸಿದ್ಧಿಯನ್ನೈದಿತು.

ದೇವತೆಗಳು, ಅಸುರರು - ಇಬ್ಬರೂ ಒಂದೇ ದೇಶದಲ್ಲಿ, ಒಂದೇ ಕಾಲದಲ್ಲಿ , ಒಂದೇ ಕಾರಣದಿಂದ, ಒಂದೇ ಬುದ್ಧಿಯಿಂದ ಅದೇ ಕರ್ಮವನ್ನು ಮಾಡುತ್ತಿದ್ದರೂ ಫಲವು ಮಾತ್ರ ಬೇರೆಬೇರೆಯಾಯಿತು. ಇದಕ್ಕೆ ಕಾರಣವೇನು ? ಎಂದರೆ ತಿಳಿದವರು ಹೀಗೆ ಹೇಳಿರುವರು : ದೇವತೆಗಳು ಪರಮಾತ್ಮನನ್ನು ಶರಣುಹೊಂದಿ ಅವನ ಅಪ್ಪಣೆಯಿಂದ ಆತನು ಹೇಳಿದಂತೆ ಕೆಲಸವನ್ನು ಮಾಡಿದವರು ; ಅವರ ಕಾರ್ಯದಲ್ಲಿ ಸ್ವಾರ್ಥವೇನೂ ಇರಲಿಲ್ಲ. ದೇವತೆಗಳು ಪರಾರ್ಥವಾಗಿ ತಮ್ಮತಮ್ಮ ಕೆಲಸವನ್ನು ಮಾಡುತ್ತಿರುವರಾದ್ದರಿಂದ ಅವರಿಗೆ ಅಮೃತವು ದಕ್ಕಿತು. ಅಸುರರು ಪರಮಸ್ವಾರ್ಥಪರರು. ''ಅಸುಷು ರಮನ್ತೆ ಇತ್ಯಸುರಾಃ'' ಅಸುಗಳಲ್ಲಿ ಎಂದರೆ ತಮ್ಮ ಪ್ರಾಣಗಳಲ್ಲಿಯೇ ಪ್ರೀತಿಯಿಟ್ಟಿರುವವರಾದ್ದರಿಂದ ಇವರಿಗೆ ಅಸುರರು ಎಂಬ ಹೆಸರು ಅನ್ವರ್ಥವಾಗಿರುವದು. ಪ್ರಾಣ, ಧನ, ಮನಸ್ಸು , ವಾಕ್ಕು - ಇವುಗಳನ್ನೆಲ್ಲ ತಮ್ಮ ದೇಹ, ಹೆಂಡಿರುಮಕ್ಕಳು- ಮುಂತಾದವುಗಳಿಗಾಗಿ ಯಾರು ವಿನಿಯೋಗಿಸುವರೋ ಅವರೇ ಅಸುರರು. ದೇಹಾದಿಗಳು ಕೊಂಬೆಯಿದ್ದಂತೆ, ಪರಮಾತ್ಮನು ಅವುಗಳ ಬೇರಿದ್ದಂತೆ ; ಬೇರಿಗೆ ನೀರುಹಾಕಿದರೆ ಕೊಂಬೆಗಳಿಗೆ ನೀರುಹಾಕಿದಂತೆಯೇ. ಆದರೆ

ಕೊಂಬೆಗಳು ಹಣ್ಣುಬಿಡುವವಾದ್ದರಿಂದ ಅವುಗಳಿಗೆ ಮಾತ್ರ ನೀರು ಹಾಕುವದು ಯುಕ್ತವೆಂದೂ ಬೇರು ಯಾವ ಫಲವನ್ನೂ ಕೊಡದಿರುವದರಿಂದ ಅದನ್ನು ಕಡಿದುಹಾಕುವದೇ ಒಳ್ಳೆಯದೆಂದೂ ಎಣಿಸುವ ಮೂಢರಂತೆ ಅಸುರರು ಪರಮಾತ್ಮನನ್ನು ಅಸಡ್ಡೆಯಿಂದ ಕಂಡು ಜನರಿಗೆ ತೊಂದರೆಮಾಡುವದಕ್ಕಾಗಿ ತಮ್ಮ ಮೈಯನ್ನು ಬೆಳೆಯಿಸಬೇಕೆಂದು ಎಣಿಸಿದರು. ಅವರಿಗೆ ತಮ್ಮ ತೋಳಬಲವು ಆತ್ಮಬಲಕ್ಕಿಂತಲೂ ಹೆಚ್ಚಾಯಿತು. ''ಆತ್ಮನಾ ವಿನ್ದತೇ ವೀರ್ಯಂ ವಿದ್ಯಯಾ ವಿನ್ದತೇಽಮೃತಮ್'' (ಪರಮಾತ್ಮನಿಂದಲೇ ವೀರ್ಯವು ದೊರಕುವದು, ಪರಮಾತ್ಮನ ಜ್ಞಾನ ಭಕ್ತಿಗಳಿಂದಲೇ ಅಮೃತವು ದೊರಕುವದು) - ಎಂಬ ಶ್ರುತಿವಾಕ್ಯವನ್ನು ದೇವತೆಗಳು ನಂಬಿದ ಹಾಗೆ ಅವರು ನಂಬಲಿಲ್ಲ. ಆದ್ದರಿಂದ ಅಸುರರ ಶ್ರಮಕ್ಕೆ ಶ್ರಮವೇ ಫಲವಾಯಿತು.

# ಹತ್ತನೆಯ ತರಂಗ

## (ದೇವಾಸುರರ ಯುದ್ಧ)

ದೇವತೆಗಳಿಗೆಲ್ಲ ಅಮೃತಪಾನವನ್ನು ಮಾಡಿಸಿ ಮಾಯಾಸ್ತ್ರೀಯಾಗಿದ್ದ ಆ ಮಹಾವಿಷ್ಣುವು ಅದೃಶ್ಯನಾದನೊ ಇಲ್ಲವೊ, ಸಮ್ಮೋಹನಾಸ್ತ್ರದಿಂದ ಬಿಡುಗಡೆಯಾದವರಂತೆ ಆ ದೈತೇಯರೆಲ್ಲರೂ ಬೆಪ್ಪಾಗಿ ತಮ್ಮ ತಪ್ಪನ್ನು ತಾವೇ ನಿಂದಿಸಿಕೊಳ್ಳುವದಕ್ಕೆ ಮೊದಲುಮಾಡಿದರು. ಲಾವಣ್ಯವತಿಯಾದ ಸ್ತ್ರೀಮುಖವನ್ನು ನೋಡಿದ್ದರಿಂದ ತಾವು ಮುಗ್ಧರಾಗಿಹೋದೆವೆಂದೂ ಇದೆಲ್ಲ ಶ್ರೀವಿಷ್ಣುವಿನ ಕೃತ್ಯವೆಂದೂ ಅವರಿಗೆ ತಿಳಿಯುತ್ತಲೂ ಎದುರಿಗಿದ್ದ ದೇವತೆಗಳ ಮೇಲೆ ಸೇಡುತೀರಿಸಿಕೊಳ್ಳಬೇಕೆಂಬ ಯೋಚನೆ ಅವರಿಗೆ ಹುಟ್ಟಿತು. ಸಂಗದಿಂದ ಕಾಮವೂ ಕಾಮದಿಂದ ಕ್ರೋಧವೂ ಕ್ರೋಧದಿಂದ ಸಮ್ಮೋಹವೂ ಹುಟ್ಟುವವೆಂದೂ ಅಂಥ ಮೋಹದಿಂದ ಸರಿಯಾದ ಜ್ಞಾನವು ನೆನಪಿಗೂ ಬಾರದೆ ಕಾರ್ಯಾಕಾರ್ಯಗಳ ವಿವೇಕವೂ ತೊಲಗಿ ಮನುಷ್ಯನೇ ಹಾಳಾಗುವನೆಂದೂ ಭಗವಂತನು ಅಪ್ಪಣೆ ಕೊಡಿಸಿರುವ ಅಮೋಘವಾದ ಮಾತು ಅಸುರರಲ್ಲಿ ನಿದರ್ಶನವನ್ನು ಹೊಂದಿತು. ಅವರಿಗೆ ಸ್ತ್ರೀಸಂಗದಿಂದ ಕಾಮವುಂಟಾಯಿತು ; ಆಮೇಲೆ ಈ ಕಾಮವೇ ಸಿಟ್ಟಿಗೆ ಕಾರಣವಾಯಿತು. ಈ ಸಿಟ್ಟಿನಿಂದ ಅವರೆಲ್ಲ ಮೋಹಗೊಂಡು ಅಮೃತಪಾನದಿಂದ ದೇವತೆಗಳು

ಬಲಿಷ್ಠರಾಗುವರೆಂಬುದಾಗಲಿ, ಇದುವರೆಗೆ ಅವರ ಕಡೆಗೇ ಇದ್ದು ಸಹಾಯ ಮಾಡಿ ತಮ್ಮನ್ನು ವಂಚಿಸಿದ ಮಹಾವಿಷ್ಣುವು ಈಗಲೂ ಇದ್ದೇ ಇರುವದರಿಂದ ತಮಗೆ ಎದುರಾಳಿಗಳಿಗಿರುವಷ್ಟು ಬಲವು ಇಲ್ಲವೆಂಬುದಾಗಲಿ ನೆನಪಿಗೆ ಬರಲಿಲ್ಲ. ದೇವತೆಗಳ ಸಾತ್ತ್ವಿಕವೃತ್ತಿಯೂ ತಮ್ಮ ಸ್ವಾರ್ಥವೃತ್ತಿಯೂ ತಮ್ಮಿಬ್ಬರಲ್ಲಿ ಉಂಟಾದ ಫಲಭೇದಕ್ಕೆ ಕಾರಣವಾದವೆಂಬ ವಿವೇಕಜ್ಞಾನ ವಂತೂ ಅವರ ಬುದ್ಧಿಯ ಬಳಿಯಲ್ಲಿ ಸುಳಿಯಲೂ ಇಲ್ಲ.

ಆದ್ದರಿಂದ ಅವರ ಹೃದಯದಲ್ಲಿ ಹೊಗೆಯಾಡುತ್ತಿದ್ದ ಸಿಟ್ಟಿನ ಬೆಂಕಿಯು ಮೇಲಕ್ಕೆ ಏಳುವದಕ್ಕೆ ಮೊದಲಾಯಿತು. ಅವರು ಹುಬ್ಬನ್ನು ಗಂಟಿಕ್ಕುತ್ತಲೂ ಮೀಸೆಗಳನ್ನು ಕುಣಿಸುತ್ತಲೂ ಕಣ್ಣುಗಳಿಂದ ಕೆಂಡವನ್ನು ಉಗುಳುತ್ತಲೂ ನಡಗುತ್ತಿರುವ ಅಧರಗಳಿಂದ ಹಲ್ಲುಕಡಿಯುತ್ತ ದೇವತೆಗಳನ್ನು ಮನಸ್ಸಿಗೆ ತೋರಿದಹಾಗೆ ಬಯ್ಯುತ್ತಲೂ ಗರ್ಜಿಸುತ್ತಲೂ ಯುದ್ಧಕ್ಕೆ ಸನ್ನದ್ಧರಾದರು. ದೇವತೆಗಳೂ ಅವರ ಸಿಟ್ಟನ್ನು ಲೆಕ್ಕಿಸದೆ ಒಟ್ಟು ಗೂಡಿ ಅವರನ್ನು ಎದುರಿಸಿ ನಿಂತರು.

ಕೂಡಲೆ ಶಂಖ, ತುತೂರಿ, ಮೃದಂಗ, ಭೇರಿ, ಡಮರುಗ - ಮುಂತಾದ ರಣವಾದ್ಯಗಳು ತಮ್ಮ ಝೇಂಕಾರದಿಂದ ದಿಕ್ಕುಗಳನ್ನೆಲ್ಲ ತುಂಬಿದವು. ಆನೆಗಳ ಘೀಂಕಾರವೂ ಅಶ್ವಗಳ ಹೇಷಾರವವೂ ರಥಗಳ ಚೀತ್ಕಾರವೂ ಬಿಲ್ಲುಗಳ ಟಂಕಾರವೂ ಈ ಶಬ್ದದ ಜೊತೆಗೆ ಸೇರಿದವು. ಚತುರಂಗಸೇನೆಯವರೂ ತಮತಮಗೆ ಉಚಿತವಾದ ಆಯುಧಗಳನ್ನು ಧರಿಸಿ ಭೀಮವೇಷದಿಂದ ಇಕ್ಕಡೆಗಳಲ್ಲಿಯೂ ಸೇರಿದರು. ನೂರಾರು ಪ್ರಾಸಗಳು, ಸಾವಿರಾರು ತೋಮರಗಳು, ಲಕ್ಷಗಟ್ಟಲೆ ಶಸ್ತ್ರಗಳು, ಕತ್ತಿ, ಗದೆ, ಶಕ್ತಿ, ಪರಶು, ಪಾಶ, ಅಂಕುಶ, ಶೂಲ, ಕುಂತ, ಮುದ್ಗರ, ಪಟ್ಟಿಶ, ಮುಸಲ, ಭಿಂಡಿವಾಲ- ಮುಂತಾದ ಆಯುಧವಿಶೇಷಗಳೂ ಆ ರಣರಂಗದಲ್ಲಿ ವಿರಾಜಿಸುತ್ತಿದ್ದವು. ಆಗ ಅಸುರಪತಿಯಾದ ಬಲಿಯು ಸಂಕಲ್ಪಮಾಡಿದೆಡೆಗೆ ಕ್ಷಣಮಾತ್ರದಲ್ಲಿ ಹೋಗುವ ವೈಹಾಯಸವೆಂಬ ಯಾನವನ್ನು ಏರಿದನು ; ಛತ್ರಧ್ವಜಾಲಂಕಾರಗಳಿಂದ ಕೂಡಿದ ಆ ರಥವನ್ನು ನಮುಚಿ, ಶಂಬರ, ಬಾಣ, ವಿಪ್ರಚಿತ್ತಿ, ಅಯೋಮುಖ, ದ್ವಿಮೂರ್ಧ, ಕಾಲನಾಭ, ಪ್ರಹೇತಿ, ಹೇತಿ, ಇಲ್ವಲ, ಶಕುನಿ, ಭೂತಸಂತಾಪ, ವಜ್ರದಂಷ್ಟ್ರ, ವಿರೋಚನ, ಹಯಗ್ರೀವ, ಶಂಕುಶಿರಸ್ಸು, ಕಪಿಲ, ಮೇಘ, ದುಂದುಭಿ, ತಾರಕ, ಚಕ್ರದೃಕ್, ಶುಂಭ, ನಿಶುಂಭ, ಜಂಬ, ಉಲ್ಕಲ, ಅರಿಷ್ಟ, ಅರಿಷ್ಟನೇಮಿ,

ಮಯ- ಮುಂತಾದ ಅನೇಕ ದೈತೇಯರು ಸುತ್ತುವರಿದಿದ್ದರು. ಇವರೆಲ್ಲರಿಗೂ ಅಮೃತಪಾನವು ನಮಗೆ ಲಭಿಸಲಿಲ್ಲವಲ್ಲ, ನಮಗೆ ಕ್ಲೇಶವೊಂದೇ ಫಲವಾಯಿತಲ್ಲ, ನಮಗಿಂತ ಹೀನವೀರ್ಯರಾದ ದೇವತೆಗಳಿಗೆ ನಮ್ಮ ಶ್ರಮದ ಫಲವೆಲ್ಲ ದಕ್ಕಿಹೋಯಿತಲ್ಲ !- ಎಂಬ ವ್ಯಥೆಯು ಸಮವಾಗಿತ್ತು. ಎಷ್ಟೋ ಸಲ ದೇವತೆಗಳನ್ನು ರಣಮುಖದಲ್ಲಿ ಸೋಲಿಸಿದ್ದ ಈ ಅಸುರವೀರರು ಶಂಖಧ್ಮಾನವನ್ನು ಮಾಡುತ್ತಲೂ ಸಿಂಹನಾದವನ್ನು ಮಾಡುತ್ತಲೂ ಕೇಳಿದವರ ಎದೆಯಲ್ಲಿ ನಡುಕವನ್ನು ಹುಟ್ಟಿಸುವಂತೆ ಆಟೋಪದಿಂದ ರಣಾಗ್ರದಲ್ಲಿ ಕಾಣಿಸಿಕೊಂಡರು. ಇವರ ಮತ್ತವಿಲಾಸವನ್ನು ಕಂಡು ಕುಪಿತನಾದ ಇಂದ್ರನು ತನ್ನ ವಾಹನವಾದ ಐರಾವತವನ್ನು ಕೂಡಲೇ ಏರಿದನು. ಅವನ ಸುತ್ತಲೂ ಅಗ್ನಿ, ವಾಯು, ಕುಬೇರ- ಮುಂತಾದ ಲೋಕಪಾಲರು ತಮ್ಮತಮ್ಮ ವಾಹನಗಳನ್ನು ಏರಿ ಉಚಿತವಾದ ಆಯುಧಗಳನ್ನು ಹಿಡಿದು ಸಿದ್ಧರಾದರು.

ಆಗ ಅವರು ಒಬ್ಬರನ್ನೊಬ್ಬರು ಸಮೀಪಿಸಿ ಮರ್ಮಘಾತುಕವಾದ ಅಸ್ತ್ರಗಳನ್ನು ಬಿಡುತ್ತಲೂ ಒಬ್ಬರನ್ನೊಬ್ಬರು ಯುದ್ಧಕ್ಕೆ ಕೂಗಿ ಕರೆಯುತ್ತಲೂ ಒಬ್ಬರ ಮೇಲೆ ಒಬ್ಬರು ಹಾಯ್ದು ದ್ವಂದ್ವಯುದ್ಧದಲ್ಲಿ ತೊಡಗುತ್ತಲೂ ವಿಚಿತ್ರತರವಾದ ಯುದ್ಧವನ್ನು ಪ್ರಾರಂಭಿಸಿದರು. ಬಲಿಯು ಇಂದ್ರನೊಡನೆ ಯುದ್ಧಮಾಡುತ್ತಿರಲು , ತಾರಕನೊಡನೆ ಗುಹನು ಹೋರಾಡುತ್ತಿದ್ದನು. ವರುಣನು ಹೇತಿಯೊಡನೆಯೂ, ಮಿತ್ರನು ಪ್ರಹೇತಿಯೊಡನೆಯೂ, ಯಮನು ಕಾಲನಾಭನೊಡನೆಯೂ, ವಿಶ್ವಕರ್ಮನು ಮಯನೊಡನೆಯೂ, ಯುದ್ಧಮಾಡುತ್ತಿದ್ದರು. ಮತ್ತೊಂದು ಕಡೆಯಲ್ಲಿ ಶಂಬರ-ತ್ವಷ್ಟೃ, ಸವಿತೃ-ವಿರೋಚನ, ಅಪರಾಜಿತ-ನಮುಚಿ, ಅಶ್ವಿನೀಕುಮಾರರು- ವೃಷಪರ್ವ, ರಾಹು-ಚಂದ್ರ- ಹೀಗೆ ಜೋಡಿಜೋಡಿಯಾಗಿ ಹೊಡೆದಾಡುತ್ತಿದ್ದರು. ಹೀಗೆಯೇ ಉಳಿದವರೂ ತಮತಮಗೆ ತಕ್ಕ ಪ್ರತಿವೀರರೊಡನೆ ಯುದ್ಧಮಾಡುತ್ತಿದ್ದರು. ಆಗ ತೀಕ್ಷ್ಣವಾದ ಬಾಣಗಳಿಂದಲೂ ಕತ್ತಿಗಳಿಂದಲೂ ಭುಶುಂಡಿಗಳಿಂದಲೂ ಚಕ್ರಗಳಿಂದಲೂ ಗದೆಗಳಿಂದಲೂ ಪಟ್ಟಿಶಗಳಿಂದಲೂ ಶಕ್ತಿಗಳಿಂದಲೂ ಉಲ್ಮುಖಗಳಿಂದಲೂ ಪ್ರಾಸಗಳಿಂದಲೂ ಪರಶ್ವಥಗಳಿಂದಲೂ ನಿಸ್ತ್ರಿಂಶಗಳಿಂದಲೂ ಭಲ್ಲೆಗಳಿಂದಲೂ ಪರಿಘಗಳಿಂದಲೂ ಮುದ್ಗರಗಳಿಂದಲೂ ಭಿಂಡಿವಾಲಗಳಿಂದಲೂ ಒಬ್ಬರನ್ನೊಬ್ಬರು, ಆವೇಶವು ಬಂದವರಂತೆ ಹೊಡೆಯುತ್ತಿರಲು ಯುದ್ಧ

ಮಾಡುವವರು ಯಾರು, ಯಾವ ಆಯುಧವು ಯಾರದು, ಯಾವ ಆಯುಧವು ಎಲ್ಲಿಂದ ಹೊರಟು ಎಲ್ಲಿಗೆ ಹೋಗಿ ಎಲ್ಲಿ ಬರುತ್ತಿದೆ - ಎಂಬುದೇ ಗೊತ್ತಾಗುವಂತಿರಲಿಲ್ಲ. ಒಂದೊಂದು ವೇಳೆ ಆ ರಣ ಭೂಮಿಯು ರಥವಾಗಲಿ, ಆನೆಗಳಾಗಲಿ, ಮಾವುತರಾಗಲಿ, ಕುದುರೆಗಳಾಗಲಿ, ರಾವುತರಾಗಲಿ, ಪದಾತಿಗಳಾಗಲಿ ಅವರ ಕೈಯಲ್ಲಿರುವ ಆಯುಧಗಳಾಗಲಿ ಕಾಣದಂತೆಯೂ ಆಕಾಶ, ಭೂಮಿ, ದಿಕ್ಕುಗಳು ಮುಂತಾದ ಭೇದಗಳಾಗಲಿ ಗೊತ್ತಾಗದಂತೆಯೂ ಶಸ್ತ್ರಗಳೂ ಅಸ್ತ್ರಗಳೂ ದಶದಿಕ್ಕುಗಳೂ ಮುಚ್ಚಿಕೊಂಡು ಭೂಲೋಕದಲ್ಲಿ ಮಳೆಗಾಲದಲ್ಲಿ ಮೋಡಗಳು ಆವರಿಸಿರುವ ಅಮಾವಾಸ್ಯೆಯ ಮಧ್ಯರಾತ್ರಿಯನ್ನು ನೆನಹುಗೊಡುತ್ತಿತ್ತು. ಮತ್ತೊಂದು ವೇಳೆ ಝಳಿಪಿಸಿದ ಕತ್ತಿಯ ಅಲಗುಗಳ ಹೊಳಪೂ, ಕೆಂಡವನ್ನುಗುಳುವ ವೀರಾಗ್ರಣಿಗಳ ಕಣ್ಣಬೆಳಕೂ, ರಥ, ಆನೆ, ಕುದುರೆ- ಮುಂತಾದವುಗಳಿಗೆ ಮಾಡಿರುವ ಅಲಂಕಾರಗಳ ಬೆಳಕೂ, ಸೇರಿ ಶರತ್ಕಾಲದ ಜ್ಯೋತಿರ್ಮಂಡಲವನ್ನು ಸ್ಮರಣೆಗೆ ತರುತ್ತಿತ್ತು. ಒಂದು ವೇಳೆ ರಣಭೂಮಿಯೆಲ್ಲ ರಾಟೆಯ ಮೇಲೆ ತಿರುಗುವ ಪ್ರತಿಮೆಗಳ ಹಾಗೆ ಕಾಣುವ ವೀರರಿಂದ ತುಂಬಿರುತ್ತಿತ್ತು. ಇನ್ನೊಂದು ವೇಳೆ ಅವರು ಓಡಾಡುವ ವೇಗವು ತೀರ ಬಲವಾಗಲು ಆ ವೇಗದ ಪರಿಮಾಣವನ್ನು ಕಂಡುಹಿಡಿಯಲಾರದಂಥ ನಿರ್ಬಲವಾದ ಕಣ್ಣುಗಳಿಗೆ ಅದು ನಿಜವಾಗಿ ನಡೆಯುವ ಯುದ್ಧವಲ್ಲವೆಂತಲೂ ಯಾವನೋ ಕುಶಲಹಸ್ತನಾದ ಚಿತ್ರ ಗಾರನು ಬರೆದು ಬಣ್ಣವಿಟ್ಟ ರಣಭೂಮಿಯೆಂತಲೂ ಭಾಸವಾಗುತ್ತಲಿತ್ತು!

ಹೀಗೆ ಯುದ್ಧವು ಘೋರವಾಗಿ ಬಹುಕಾಲ ನಡೆಯಲು, ಆನೆಗಳೂ ಕುದುರೆಗಳೂ ರಥಗಳೂ ಪದಾತಿಗಳೂ ಚದರಿ ಒಂದರಲ್ಲಿ ಒಂದು ಸೇರಿ ವ್ಯವಸ್ಥೆ ತಪ್ಪಿತು. ಒಬ್ಬರ ಮೇಲೊಬ್ಬರು ಎಸೆದ ಆಯುಧಗಳಿಂದ ಎಲ್ಲರೂ ಘಾಯಪಡುವದಕ್ಕೆ ಆರಂಭಿಸಿದರು. ಒಂದು ಕಡೆ ಆನೆಗಳು ಸೊಂಡಿಲುಗಳನ್ನು ಕಳೆದುಕೊಂಡು ಅಥವಾ ದಂತಗಳು ಭಗ್ನವಾಗಿ ಘೀಳಿಡುತ್ತಾ ಹಿಂತಿರುಗಿ ಓಡಲಾರದೆ ಕಡಿದ ತೋಳುಗಳುಳ್ಳ ಮಾವುತರ ಸಮೇತ ಸಿಡಿಲ ಹೊಡೆತಕ್ಕೆ ಕಳಚಿಕೊಳ್ಳುವ ಪರ್ವತಶಿಖರಗಳಂತೆ ಉರುಳುತ್ತಿದ್ದವು. ಮತ್ತೊಂದು ಕಡೆ ಕುದುರೆಗಳು ಪಕ್ಕದಲ್ಲಿಯೂ ಎದೆಯಲ್ಲಿಯೂ ನೆಟ್ಟ ಬಾಣಗಳ ಬಾಧೆಯನ್ನು ತಡೆಯಲಾರದೆ ತಮ್ಮನ್ನು ಹಿಡಿದ ಲಗಾಮುಗಳ ಬಿಗಿಯೂ ಕಡಿಮೆಯಾದ್ದರಿಂದ ತಲೆಯೇ

ಬಿದ್ದುಹೋದರೂ, ಹಾಗೆಯೇ ಸವಾರಿಮಾಡುವಂತೆ ಕಾಣುತ್ತಾ ಕುಳಿತಿದ್ದ ಮುಂಡಗಳನ್ನು ಸಿಕ್ಕಕಡೆಗೆ ಎಳೆದುಕೊಂಡು ಹೋಗಿ ದಿಕ್ಕುಕಾಣದೆ ಅಲ್ಲಲ್ಲಿ ಮಲಗುತ್ತಿದ್ದವು. ರಥಗಳ ಧ್ವಜಗಳೂ ಅಲಂಕಾರಗಳೂ ಸಡಿಲವಾಗಲು, ಸಾರಥಿಯು ಹೋಗಿದ್ದರೂ ಧೈರ್ಯದಿಂದ ಮುಂದಕ್ಕೆ ನುಗ್ಗಿಸುವ ವೀರರಥಿಕರ ಚೋದನೆಯಿಂದ ಕುದುರೆಗಳು ಸ್ವಲ್ಪ ಹೋಗುವಷ್ಟರಲ್ಲಿ ಬಾಣಗಳ ಸುರಿಮಳೆಗೆ ದಿಕ್ಕುತೋಚದೆ ಕಾಲುಮುರಿದುಕೊಂಡು ಬೀಳುತ್ತಿರಲು, ಕುಂಟಾದ ರಥಗಳ ಭಾಗಗಳೊಂದು ಕಡೆ, ರಥಿಕರೊಂದು ಕಡೆ, ರಥಕ್ಕೆ ಕಟ್ಟಿದ ಕುದುರೆಗಳೊಂದು ಕಡೆ - ಹೀಗೆ ಮೂರು ಮೂರು ಕಡೆ ಬೀಳುತ್ತಿದ್ದವು. ಪದಾತಿಗಳಂತೂ ಯುದ್ಧದಲ್ಲಿ ಎಷ್ಟು ಜನ ಮಡಿದರೋ ಲೆಕ್ಕವೇ ಇಲ್ಲ. ಅವರು ತಮ್ಮ ಕಾಲತುಳಿತದಿಂದ ಎದ್ದ ಧೂಳು ಎಲ್ಲೆಲ್ಲಿಯೂ ವ್ಯಾಪಿಸಿಕೊಳ್ಳಲು ಕಣ್ಣುಕಾಣದೆ ಒಬ್ಬರನ್ನೊಬ್ಬರು ಕಂಡಕಡೆಯಲ್ಲಿ ಹೊಡೆಯುತ್ತಾ ಇದ್ದರು. ಕುಡುಗೋಲಿನಿಂದ ಕೊಚ್ಚಿದ ಹಲಸಿನಕಾಯಿಯ ಹಾಗೆ ತುಂಡುತುಂಡಾದ ಅವರ ಭುಜಗಳೂ, ತೊಡೆಗಳೂ, ತಲೆಗಳೂ ಇನ್ನೂ ಉಳಿದ ಭಾಗಗಳೂ ರಣರಂಗದಲ್ಲೆಲ್ಲ ಹರಡಿರುತ್ತಿದ್ದವು. ತಲೆಗಳನ್ನು ಕಳೆದುಕೊಂಡ ಅಟ್ಟೆಗಳು ಎದ್ದು ಕುಣಿಯುವದಕ್ಕಾರಂಭಿಸಿದವು.

ಆಗ ಬಲಿಯು ಪ್ರಚಂಡಕೋಪದಿಂದ ಮಹೇಂದ್ರನನ್ನು ಹತ್ತು ಬಾಣಗಳಿಂದಲೂ ಐರಾವತವನ್ನು ಮೂರು ಬಾಣಗಳಿಂದಲೂ ಹೊಡೆಯಲು ಒಂದೊಂದು ಬಾಣಕ್ಕೆ ಪ್ರತಿಯಾಗಿ ಒಂದೊಂದು ಬಾಣವನ್ನು ಇಂದ್ರನು ಬಿಟ್ಟು ಅವುಗಳನ್ನು ದಾರಿಯಲ್ಲೇ ಕತ್ತರಿಸಿಬಿಟ್ಟನು. ಇಷ್ಟರಲ್ಲಿಯೇ ಬಲಿಯು ಒಂದು ಶಕ್ತಿಯನ್ನು ತೆಗೆದುಕೊಂಡನು. ಅದನ್ನು ಉಪಯೋಸುವುದರೊಳಗಾಗಿ ಇಂದ್ರನು ಬಹುವೇಗವಾದ ಅಸ್ತ್ರವಿಶೇಷ ದಿಂದ ಅದನ್ನು ಕಡಿದುಬಿಟ್ಟನು. ಇದರಂತೆಯೇ ಶೂಲ, ಪ್ರಾಸ, ತೋಮರ-ಮುಂತಾದ ಬೇರೆಬೇರೆಯ ಆಯುಧಗಳನ್ನು ಆ ಅಸುರಶ್ರೇಷ್ಠನು ಕೈಗೆ ತೆಗೆದುಕೊಳ್ಳುವಷ್ಟರಲ್ಲಿ ದೇವೇಂದ್ರನು ಅವನ್ನು ತುಂಡುಮಾಡಿ ಬಿಡುತ್ತಿದ್ದನು. ಇದನ್ನು ಕಂಡು ಆ ಅಸುರಾಗ್ರಣಿಯು ಒಂದು ಮಾಯೆಯನ್ನು ಸೃಷ್ಟಿಮಾಡಿದನು. ಒಂದಾನೊಂದು ಮಹಾಪರ್ವತವು ಸುರಸೈನ್ಯದ ಮೇಲೆ ಬೀಳುವದಕ್ಕೆ ಬಂದಿತು. ಅದರಿಂದ ಮರಗಳು

ದಾವಾಗ್ನಿಯಿಂದ ಸುಟ್ಟು ಜ್ವಲಿಸುತ್ತಾ ಬೀಳುತ್ತಿದ್ದವು ; ಹಾವುಗಳೂ, ಚೇಳುಗಳೂ ಕೆಳಗೆ ಪದಾತಿಗಳ ಮೇಲೆ ಬೀಳಹತ್ತಿದವು ; ಸಿಂಹಗಳೂ ಹುಲಿಗಳೂ ಕಾಡುಹಂದಿಗಳೂ ದೊಡ್ಡದೊಡ್ಡ ಆನೆಗಳನ್ನು ಅಪ್ಪಳಿಸುತ್ತಾ ಅವುಗಳ ಮೇಲೆ ಬೀಳಲಾರಂಭಿಸಿದವು. ಹೊಡಿ, ಕಡಿ, ಬಡಿ - ಎಂದು ಬರಿಯ ಮೈಯಲ್ಲಿ ಭೀಕರಾಕಾರರಾದ ರಕ್ಕಸರು ನೂರಾರು ಜನ ಶೂಲ ಹಸ್ತರಾಗಿ ಕಾಣಿಸಿಕೊಂಡರು. ಆಮೇಲೆ ಕರ್ಣಕಠೋರವಾಗಿ ಗರ್ಜಿಸುತ್ತಾ ದೊಡ್ಡದೊಡ್ಡ ಮೋಡಗಳು ಕಾಣಿಸಿಕೊಂಡು ಕೆಂಡದ ಮಳೆಯನ್ನು ಕರೆಯಲಾರಂಭಿಸಿದವು ; ಬಿದ್ದ ಕೆಂಡಗಳನ್ನು ಬಿರುಗಾಳಿಯು ಬೀಸಿ ಚೆನ್ನಾಗಿ ಪ್ರಜ್ವಲಿಸುವಂತೆ ಮಾಡಿತು ; ಆಮೇಲೆ ಪ್ರಳಯಕಾಲದ ಮಹಾಗ್ನಿಯಂತೆ ದೇವತೆಗಳ ಸೈನ್ಯವನ್ನೆಲ್ಲ ಒಂದು ಮಾಯಾವಹ್ನಿಯು ಆವರಿಸಿಕೊಂಡಿತು ; ಇನ್ನು ಸ್ವಲ್ಪ ಹೊತ್ತಿನಲ್ಲಿ ಅವರನ್ನೆಲ್ಲ ಕೊಚ್ಚಿಕೊಂಡು ಹೋಗುವಂತೆ ಆನೆಗಳ ಗಾತ್ರದ ಅಲೆಗಳಿಂದ ಕೂಡಿದ ಸಮುದ್ರವೊಂದು ಕಾಣಿಸಿಕೊಂಡಿತು. ಹೀಗೆ ಒಂದರ ಹಿಂದೊಂದು ಮಹಾಮಾಯೆಯನ್ನು ಅಸುರರು ಪ್ರಯೋಗಿಸುತ್ತಿರಲು ಅವುಗಳಿಗೆ ಪ್ರತಿಕ್ರಿಯೆಯೇನೆಂಬುದನ್ನರಿಯದೆ ಕೊನೆಗೆ ದೇವೇಂದ್ರನೇ ಮುಂತಾದವರೆಲ್ಲ ತಮಗೆ ಮುಖ್ಯವಾಗಿ ಶ್ರೀಹರಿಯೇ ಗತಿಯೆಂದು ಆತನನ್ನು ಧ್ಯಾನಿಸುವುದಕ್ಕಾರಂಭಿಸಿದರು.

ಕೂಡಲೆ ವಿಶ್ವಭಾವನನಾದ ಆ ಭಗವಂತನು ಗರುಡನ ಹೆಗಲಿನ ಮೇಲೆ ಕುಳಿತುಕೊಂಡು ಪೀತಾಂಬರದಿಂದಲೂ ಕೌಸ್ತುಭಕಿರೀಟಕುಂಡಲಗಳಿಂದಲೂ ಶೋಭಿಸುತ್ತ ಅಷ್ಟಾಯುಧಗಳನ್ನು ಹಿಡಿದುಕೊಂಡು ರಣಭೂಮಿಯಲ್ಲಿ ಅವರೆಲ್ಲರಿಗೂ ದರ್ಶನವಿತ್ತನು. ಎಚ್ಚರವಾದ ಮಾತ್ರಕ್ಕೆ ಸ್ವಪ್ನವು ತನ್ನ ಸರ್ವಸ್ವರೂಪವನ್ನೂ ಅಡಗಿಸಿಕೊಳ್ಳುವಂತೆ ಆತನ ಪ್ರವೇಶ ಮಾತ್ರದಿಂದ ಆ ಅಸುರರ ಮಾಯೆಗಳೆಲ್ಲ ಉಪಶಾಂತವಾದವು. ಆ ವಿಷ್ಣುವಿನ ಮೇಲೆ ಕಾಲನೇಮಿ ಎಂಬ ಅಸುರನು ಒಂದು ಶೂಲವನ್ನು ಎಸೆಯಲು ಭಗವಂತನು ಅದನ್ನು ಗರುಡನ ತಲೆಯ ಮೇಲೆ ಬೀಳುವದರೊಳಗೆ ಲೀಲೆಯಿಂದ ಹಿಡಿದುಕೊಂಡು ಆ ದೈತ್ಯನನ್ನೂ ಅವನ ಸಾರಥಿಯನ್ನೂ ಕೊಂದು ಮುಂದೆ ಬೀಳುತ್ತಿದ್ದ ಮಾಲಿ, ಸುಮಾಲಿ, ಅತಿಬಲ- ಎಂಬ ಆಸುರರನ್ನು ಕತ್ತರಿಸಿ, ಎದುರಿಗೆ ಬಿದ್ದ ಮಾಲ್ಯವಂತನ ಶಿರಸ್ಸನ್ನು ತುಂಡಿಸುವನಾದನು.

ಆಮೇಲೆ ದೇವತೆಗಳು ಪರಮಪುರುಷನಾದ ಮಹಾವಿಷ್ಣುವಿನಿಂದ ಅನುಗ್ರಹಿಸಲ್ಪಟ್ಟವರಾಗಿ ಚೇತರಿಸಿಕೊಂಡು ತಮ್ಮನ್ನು ಈ ಮೊದಲು ಯಾರು ಯಾರು ನೋಯಿಸಿದ್ದರೋ ಅವರವರನ್ನು ಆಯುಧಗಳಿಂದ ಹೊಡೆಯ ಲಾರಂಭಿಸಿದರು. ದೇವೇಂದ್ರನು ಬಲಿಯನ್ನು ಕುರಿತು ''ಎಲೈ ಮಾಯಾವಿಯೆ, ರಣರಂಗವೆಂಬುದೇನು ನರ್ತನಶಾಲೆಯೆ ? ಮಾಯೆಯಿಂದ ತೆರೆಯನ್ನು ಹಾಕಿಕೊಂಡು ಏತಕ್ಕೆ ಮರೆಯಾಗುತ್ತೀಯೆ ? ಎಲೈ ಮಂದಾತ್ಮನೆ, ನೀನೂ ನಿನ್ನ ಜ್ಞಾತಿಗಳೂ ನನ್ನ ವಜ್ರಾಯುಧಕ್ಕೆ ಇಂದು ತುತ್ತಾಗುವಿರಿ, ಇನ್ನು ಮೇಲೆ ನಮ್ಮ ಲೋಕದಲ್ಲಿ ಮಾಯಾವಿಗಳೇ ಕಾಲಿಡದಂತಾಗಲಿ ! '' ಎಂದು ಗರ್ಜಿಸುತ್ತಾ ವಜ್ರಾಯುಧವನ್ನು ಆ ಅಸುರನ ಮೇಲೆ ಬಿಟ್ಟನು. ಪ್ರಜೆಗಳೆಲ್ಲರೂ ಹಾ ಹಾ ! ಎಂದು ಕೂಗುತ್ತಿದ್ದರು. ಬಲಿಯು ಮಾತ್ರ ''ಎಲೈ ಇಂದ್ರನೆ, ಯುದ್ಧದಲ್ಲಿ ಜಯಾಪಜಯಗಳು ಸ್ವಾಭಾವಿಕವಾಗಿ ಕಾಲಾನುಸಾರವಾಗಿ ಆಗಿಯೇ ಆಗುವವು. ಆದ್ದರಿಂದ ನಿನ್ನ ಮಾತುಗಳನ್ನೇನೂ ನಾನು ಲೆಕ್ಕಿಸುವಂತಿಲ್ಲ'' ಎಂದು ಹೇಳುತ್ತಿರುವಷ್ಟರಲ್ಲಿಯೇ ಆ ಶತಪರ್ವತಗಳಿಂದ ಕೂಡಿದ ವಜ್ರಾಯುಧವು ಬೀಳಲು ಯಾನಸಹಿತವಾಗಿ ಧೊಪ್ಪೆಂದು ಕೆಳಗೆ ಬಿದ್ದನು. ಇದನ್ನು ಕಂಡು ಜಂಭನೆಂಬ ಬಲಿಯ ಸ್ನೇಹಿತನು ಮಹಾಕೋಪದಿಂದ ಇಂದ್ರನ ಆನೆಯನ್ನು ಗದೆಯಿಂದ ಹೊಡೆದು ಮುಗ್ಗರಿಸುವಂತೆ ಮಾಡಿದನು. ಇಷ್ಟರಲ್ಲಿ ಮಾತಲಿಯು ರಥವನ್ನು ಸಿದ್ಧಮಾಡಲು ಅವನನ್ನೇ ಶೂಲದಿಂದ ಜಂಭನು ಹೊಡೆದನು. ಈ ನೋವನ್ನು ಮಾತಲಿಯು ಹೇಗೋ ಸಹಿಸಿಕೊಂಡನು. ಇಷ್ಟರಲ್ಲಿ ಇಂದ್ರನ ವಜ್ರಾಯುಧದಿಂದ ಜಂಭನ ಶಿರಸ್ಸು ಕಡಿದುಬಿತ್ತು. ಅವನ ಸಹಾಯಕ್ಕಾಗಿ ಬಂದ ಬಲ, ಪಾಕ - ಮುಂತಾದ ಅಸುರರೆಲ್ಲರೂ ಅದೇ ವಜ್ರಾಯುಧಕ್ಕೆ ತುತ್ತಾದರು.

ಹೀಗೆ ಎಲ್ಲೆಲ್ಲಿಯೂ ದೇವತೆಗಳಿಗೆ ಜಯವಾಗುತ್ತಿರಲು ಇಂದ್ರನ ಮೇಲೆ ಪುಷ್ಪವೃಷ್ಟಿಯಾಯಿತು. ಮುನಿಗಳೆಲ್ಲ ಆತನನ್ನು ಹೊಗಳಲಾರಂಭಿಸಿದರು ; ವಿಶ್ವಾವಸುಪರಾವಸುಗಳು ಗಾನಮಾಡಿದರು, ದೇವದುಂದುಭಿಗಳು ಬಾರಿಸಲ್ಪಟ್ಟವು. ಈ ಸಮಯದಲ್ಲಿ ವಾಯು, ಅಗ್ನಿ, ವರುಣ - ಮುಂತಾದವರೂ ತಮ್ಮತಮ್ಮ ಸಾಹಸವನ್ನು ತೋರಿಸುತ್ತಾ ಅಸುರರನ್ನು ನುಗ್ಗುನುಚ್ಚುಮಾಡುತ್ತಿರುವಲ್ಲಿ , ಕರುಣಾಮಯರಾದ ನಾರದರು ''ಎಲೈ ದೇವತೆಗಳಿರಾ, ನಿಷ್ಕಾರಣವಾಗಿ ಕೊಲೆಗೆ ಹೋಗಬೇಡಿರಿ ; ಆಗ ನಿಮ್ಮ

ದೇವತ್ವವೇ ಹೋಗಿಬಿಡುವದು. ಶ್ರೀಮನ್ನಾರಾಯಣನ ಅನುಗ್ರಹವನ್ನು ಪಡೆದವರಾದ್ದರಿಂದ ನಿಮಗೆಲ್ಲ ಅಮೃತಪ್ರಾಪ್ತಿಯಾಯಿತು. ಮತ್ತೇಕೆ ಯುದ್ಧಮಾಡುವಿರಿ ? ಎಲೈ ಅಸುರರೇ, ಆದದ್ದು ಆಗಿಹೋಯಿತು. ಈ ಸಮಯದಲ್ಲಿ ನಿಮಗೆ ಪರಾಜಯವಾಗಿರುವುದರಿಂದ ಯುದ್ಧವನ್ನು ಇಷ್ಟಕ್ಕೇ ನಿಲ್ಲಿಸುವದು ಯುಕ್ತವು. ನಿಮ್ಮ ರಾಜನು ಬಹಳ ಸಂಕಟದಲ್ಲಿರುತ್ತಾನೆ. ನಿಮ್ಮಲ್ಲಿ ಎಷ್ಟೋ ಜನರು ಮಡಿದಿರುತ್ತಾರೆ. ದೇವತೆಗಳು ಅಮೃತಪ್ರಾಪ್ತಿಯಿಂದ ಬಲಿಷ್ಠರಾಗಿರುತ್ತಾರೆ. ಈಗ ಮಹಾಯುದ್ಧದಿಂದ ಪ್ರಯೋಜನವೇನು ?'' ಎಂದು ಉಭಯಪಕ್ಷದವರನ್ನೂ ಸಮಾಧಾನಗೊಳಿಸಿದರು.

ಉಭಯಪಕ್ಷದವರಿಗೂ ಯುದ್ಧವನ್ನು ನಿಲ್ಲಿಸುವದೇ ಯುಕ್ತವೆಂದು ತೋರಿಬಂದಿತು. ದೇವತೆಗಳು ತಮ್ಮ ಜಯವನ್ನು ಅನುಚರರಿಂದ ಗಾನ ಮಾಡಿಸಿಕೊಳ್ಳುತ್ತಾ ಸ್ವರ್ಗಕ್ಕೆ ಹೋದರು. ಅಸುರರೂ ಆ ದೇವರ್ಷಿಯ ಮಾತನ್ನೇ ಗೌರವಿಸಿ ತಮ್ಮ ರಾಜನನ್ನೂ ಯುದ್ಧದಲ್ಲಿ ಗಾಯಪಟ್ಟವರನ್ನೂ ರುಂಡುಮುಂಡಗಳು ಸರಿಯಾಗಿಯೇ ಇದ್ದು ಮರಣಹೊಂದಿದ್ದವರನ್ನೂ ಅಸ್ತಗಿರಿಗೆ ಒಯ್ಯುವರಾದರು. ಅಲ್ಲಿ ಶುಕ್ರಾಚಾರ್ಯರೇ ಗಾಯಪಟ್ಟವರಿಗೆ ವಿಶ್ರಾಂತಿಯನ್ನು ಕೊಡುವ ಔಷಧಪ್ರಯೋಗವನ್ನು ಮಾಡಿದರು ; ಅವಯವಗಳು ಪೂರ್ಣವಾಗಿದ್ದು ಸತ್ತಿದ್ದ ಅಸುರರನ್ನೂ ಸಂಜೀವಿನೀ ಮಂತ್ರದಿಂದ ಮತ್ತೆ ಬದುಕಿಸಿದರು. ಆಗ ಬಲಿರಾಜನೂ ಶುಕ್ರಾಚಾರ್ಯರ ಸ್ಪರ್ಶಮಾತ್ರದಿಂದ ಚೇತರಿಸಿಕೊಂಡು ತನ್ನ ಪರಾಜಯಕ್ಕೋಸ್ಕರ ಖೇದಗೊಳ್ಳದೆ ಇರುತ್ತಿದ್ದನು.

---

## ಹನ್ನೊಂದನೆಯ ತರಂಗ

(ಉಪಸಂಹಾರ)

ಸರ್ವಾಂತರ್ಯಾಮಿಯೂ ಸಕಲಜಗನ್ನಿಯಾಮಕನೂ ಆದ ಶ್ರೀಮನ್ನಾರಾಯಣನ ದಯೆಯಿಂದ ಈ ಆಖ್ಯಾನವು ಸಂಪೂರ್ಣವಾಯಿತು. ಈ ಕಥೆಯಲ್ಲಿ ತಿಳಿಯಬೇಕಾದ ನೀತಿಗಳನ್ನು ಅಲ್ಲಲ್ಲಿಯೇ ಕಾಣಿಸಿರುತ್ತದೆಯಾಗಿ ಅವುಗಳನ್ನು ಕುರಿತು ಮತ್ತೇನೂ ಹೇಳಬೇಕಾದದ್ದಿರುವದಿಲ್ಲ. ಇಂಥ ಆಖ್ಯಾನಗಳ ಉದ್ದೇಶವನು ಏನು ? ಪುರಾಣವು ಮುಖ್ಯವಾಗಿ ಏನನ್ನು ಹೇಳಬೇಕೆಂದು ಹೊರಟಿರುವದು ? - ಎಂಬುದನ್ನು

ತಿಳಿಯುವದು ಈ ಆಖ್ಯಾನದ ಸ್ವಾರಸ್ಯವನ್ನು ಗ್ರಹರಿಸಬೇಕೆಂಬವರಿಗೆ ಅತ್ಯವಶ್ಯವಾಗಿರುವದು. ಈ ವಿಷಯದಲ್ಲಿ ಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಅಪ್ಪಣೆಕೊಡಿಸಿರುವ ಅಮೃತತುಲ್ಯವಾದ ವಾಕ್ಯಗಳು ಚಿರಸ್ಮರಣೀಯವಾಗಿರುತ್ತವೆ. ''ಎಲೈ ರಾಜನೆ; ಪೃಥು, ಪುರೂರವ, ಗಾಧಿ, ನಹುಷ, ಭರತ, ಅರ್ಜುನ, ಮಾಂಧಾತ, ಸಗರ, ರಾಮ, ಖಟ್ವಾಂಗ, ಧುಂಧುಘ್ನ, ರಘು, ತೃಣಬಿಂದು, ಯಯಾತಿ, ಶರ್ಯಾತಿ, ಶಂತನು, ಗಯ, ಭಗೀರಥ, ಕುವಲಯಾಶ್ವ, ಕಕುತ್ಸ್ಥ, ನೈಷಧ, ನೃಗ, ಹಿರಣ್ಯಕಶಿಪು, ವೃತ್ರ, ಲೋಕವನ್ನೆಲ್ಲ ಗೋಳಾಡಿಸಿದ ರಾವಣ, ನಮುಚಿ, ಶಂಬರ, ಭೌಮ, ಹಿರಣ್ಯಾಕ್ಷ, ತಾರಕ - ಇವರೇ ಅಲ್ಲದೆ ಇನ್ನೂ ಎಷ್ಟೋ ಜನ ರಾಜರ ಮತ್ತು ದೈತ್ಯರ ಕಥೆಯನ್ನು ನಿನಗೆ ವಿಸ್ತಾರವಾಗಿ ಹೇಳಿರುತ್ತೇನಷ್ಟೆ.

**ಕಥಾ ಇಮಾಸ್ತೇ ಕಥಿತಾ ಮಹೀಯಸಾಂ ವಿತಾಯ ಲೋಕೇಷು ಯಶಃ ಪರೇಯುಷಾಮ್ । ವಿಜ್ಞಾನವೈರಾಗ್ಯವಿವಕ್ಷಯಾ ವಿಭೋ ವಚೋ ವಿಭೂತೀರ್ನ ತು ಪಾರಮಾರ್ಥ್ಯಮ್ ॥**

ಈ ಜನರೆಲ್ಲರೂ ಸರ್ವಜ್ಞರು, ಎಲ್ಲರೂ ಶೂರರು ; ಎಲ್ಲರೂ ಎಲ್ಲರನ್ನೂ ಜಯಿಸಿ ತಾವು ಅಜೇಯರೆನಿಸಿಕೊಂಡಿದ್ದವರು. ಹೀಗಿದ್ದರೂ ಇಂಥವರು ಕೂಡ 'ಅಹಂ ಮಮ' - ನಾನು, ನನ್ನದು ಎಂಬ ಅಭಿಮಾನವನ್ನು ಮಾಡಿ ಕೊನೆಗೆ ಕಾಲಧರ್ಮವನ್ನು ಹೊಂದಿದರು. ಈಗ ಕಥಾವಶೇಷರಾಗಿರುತ್ತಾರೆ. ಲೋಕದಲ್ಲೆಲ್ಲ ತಮ್ಮ ಕೀರ್ತಿಯನ್ನು ವಿಸ್ತರಿಸಿ ಗತಿಸಿರುವ ಇಂಥ ಮಹಾತ್ಮರ ಚರಿತ್ರೆಯನ್ನು ನಿನಗೆ ಏತಕ್ಕೆ ಹೇಳಿದೆನೆಂದರೆ ವಿಜ್ಞಾನ, ವೈರಾಗ್ಯ - ಇವರಡೇ ಮುಖ್ಯವಾದವು ಎಂದು ತಿಳಿಸುವದಕ್ಕೆ. ಉಳಿದ ವಾಗ್ವಿಸ್ತರವನ್ನು ಪರಮಾರ್ಥವೆಂದೆಣಿಸಬೇಡ. ಇಲ್ಲಿ ಗ್ರಹಿಸ ಬೇಕಾದುದ್ದು ಏನೆನ್ನುವಿಯೋ ?

**ಯಸ್ತೂತ್ತಮಶ್ಲೋಕಗುಣಾನುವಾದಃ ಸಙ್ಗೀಯತೇಽಭೀಕ್ಷ್ಣ ಮಮಙ್ಗಲಘ್ನಃ । ತಮೇವ ನಿತ್ಯಂ ಶೃಣುಯಾದಭೀಕ್ಷ್ಣಂ ಕೃಷ್ಣೇಽಮಲಾಂ ಭಕ್ತಿಮಭೀಪ್ಸಮಾನಃ ॥**

ಪುಣ್ಯಕೀರ್ತಿಯಾದ ಪರಮಾತ್ಮನ ಗುಣಗಳನ್ನು ಅಲ್ಲಲ್ಲಿ ಅನುವಾದ ಮಾಡಿರುವದುಂಟಲ್ಲ, ಇದನ್ನೇ ಪ್ರತಿದಿನವೂ ಹೆಚ್ಚಾಗಿ ಕೇಳುತ್ತಿರಬೇಕು. ಇದರಿಂದ ಅಮಂಗಲಗಳೆಲ್ಲ ನಾಶವಾಗುವವು. ಆ ಪರಮಾತ್ಮನಲ್ಲಿ

ನಿರ್ಮಲವಾದ ಭಕ್ತಿಯು ತನಗೆ ಉಂಟಾಗಬೇಕೆಂದು ಬಯಸುವವನಿಗೆ ಈ ಶ್ರವಣವೇ ಸಾಧನವು.''

ಪುರಾಣದ ಉದ್ದೇಶವನ್ನು ತಿಳಿಯುವದಕ್ಕೆ ಈ ಕೆಳಗಿನ ಭಾಗವತದ ಉಪಸಂಹಾರಶ್ಲೋಕಗಳು ಉಪಯೋಗುವಾಗುವವು :

ಇದಂ ಭಗವತಾ ಪೂರ್ವಂ ಬ್ರಹ್ಮಣೇ ನಾಭಿಪಙ್ಕಜೇ । ಸ್ಥಿತಾಯ ಭವಭೀತಾಯ ಕಾರುಣ್ಯಾತ್ಸಂಪ್ರಕಾಶಿತಮ್ ॥ ಆದಿಮಧ್ಯಾವಸಾನೇಷು ವೈರಾಗ್ಯಾಖ್ಯಾನಸಂಯುತಮ್ । ಹರಿಲೀಲಾಕಥಾವ್ರಾತಾಮೃತಾನನ್ದಿತ ಸತ್ಸುರಮ್ ॥ ಸರ್ವವೇದಾನ್ತಸಾರಂ ಯದ್ಬ್ರಹ್ಮಾತ್ಮೈಕತ್ವ ಲಕ್ಷಣಮ್ । ವಸ್ತ್ವದ್ವಿತೀಯಂ ತನ್ನಿಷ್ಠಂ ಕೈವಲ್ಯೈಕಪ್ರಯೋಜನಮ್ ॥

ದ್ವಾದಶಸ್ಕಂಧದ ಹದಿಮೂರನೆಯ ಅಧ್ಯಾಯದಲ್ಲಿ ಈ ಶ್ಲೋಕಗಳಿರುವವು. ಇವುಗಳ ತಾತ್ಪರ್ಯವೇನೆಂದರೆ - ''ಈ ಪುರಾಣವನ್ನು ಸಾಕ್ಷಾನ್ನಾರಾಯಣನೇ ತನ್ನ ನಾಭಿಕಮಲದಲ್ಲಿದ್ದ ಬ್ರಹ್ಮನಿಗಾಗಿ, ಸಂಸಾರಭೀತಿಯನ್ನು ಹೋಗಲಾಡಿಸುವದಕ್ಕೆಂದು ಕರುಣೆಯಿಂದ ಹೇಳಿದನು. ಇದರಲ್ಲಿ ಮೊದಲು, ನಡುವೆ, ಕೊನೆ- ಎಲ್ಲೆಲ್ಲಿಯೂ ವೈರಾಗ್ಯವನ್ನು ತಿಳಿಸುವ ಕಥೆಗಳಿವೆ. ಇದು ಹರಿಲೀಲೆಗಳ ಕಥೆಯೆಂಬ ಅಮೃತದಿಂದ ಸಾಧುಗಳೆಂಬ ದೇವತೆಗಳಿಗೆ ಆನಂದವನ್ನು ಕೊಡುತ್ತದೆ. ವೇದಾಂತದಲ್ಲೆಲ್ಲ ಸಾರವಾದ ಬ್ರಹ್ಮಾತ್ಮೈಕತ್ವವೆಂಬ ಅದ್ವಿತೀಯವಸ್ತುವನ್ನು ತಿಳಿಸುತ್ತದೆ. ಕೈವಲ್ಯವೇ ಇದಕ್ಕೆ ಮುಖ್ಯ ಪ್ರಯೋಜನವು.''

ಮೇಲೆ ಹೇಳಿದ್ದು ಸುಮ್ಮನೆ ಹೊಗಳಿಕೊಂಡದ್ದೆಂದು ಯಾರೂ ತಿಳಿಯಬಾರದು. ಈ ಸ್ತುತಿಯು ಎಷ್ಟರಮಟ್ಟಿಗೆ ನಿಜವೆಂಬುದನ್ನು ತಿಳಿಸುವದಕ್ಕಾಗಿ ಇವುಗಳಲ್ಲಿ ಒಂದೊಂದು ವಿಷಯವನ್ನೂ ಕುರಿತು ಪ್ರಕೃತದ ಆಖ್ಯಾನವಾದ ಸಮುದ್ರಮಥನಕ್ಕೆ ಸಂಬಂಧಿಸಿ ಈಗ ತೋರಿಸುವೆನು. ಇದರಂತೆಯೇ ಪುರಾಣಗಳಲ್ಲಿರುವ ಮಿಕ್ಕ ಉಪಾಖ್ಯಾನಗಳಿಗೂ ಹೊಂದಿಸಿ ತಿಳಿದುಕೊಳ್ಳಬಹುದಾಗಿರುತ್ತದೆ.

ವೈರಾಗ್ಯವನ್ನು ಎಲ್ಲೆಲ್ಲಿಯೂ ಪುರಾಣವು ಬೋಧಿಸುತ್ತದೆ ಎಂಬುದು ಮೊದಲನೆಯ ಫಲಸ್ತುತಿಯಷ್ಟೆ. ಈ ಆಖ್ಯಾನದಲ್ಲಿ ಇಂದ್ರನಿಗೆ ಅಭಿಮಾನ ಬಂದಕೂಡಲೆ ಸಕಲೈಶ್ವರ್ಯವೂ ನಾಶವಾಯಿತೆಂದೂ ಅಸುರರು ಎಷ್ಟು ಬಲಿಷ್ಠರಾದರೂ ಅವರಿಗೆ ಸ್ತ್ರೀಸಂಗದಿಂದ ತೊಂದರೆಯಾಯಿತೆಂದೂ ಹೊನ್ನು

ಹೆಣ್ಣುಮಣ್ಣುಗಳ ಅಭಿಮಾನವನ್ನು ಬಿಡುವದಕ್ಕೆ ಅನುಕೂಲಿಸುವಂತೆ ಸ್ಪಷ್ಟವಾದ ಬೋಧನೆಗಳು ಬಂದಿರುತ್ತವೆ. ಹೀಗೆಯೇ ಈ ಕಥೆಯಲ್ಲಿ ಪರಮಾತ್ಮನ ಲೀಲೆಗಳು ಮೊದಲಿನಿಂದ ಕೊನೆಯವರೆಗೂ ಅಲ್ಲಲ್ಲಿ ತೋರುತ್ತಲೇ ಇರುವವು. ಮಂದರಪರ್ವತವು ಸಮುದ್ರದ ಮೇಲೆ ನಿಂತದ್ದು, ವಿಷದ ಉತ್ಪತ್ತಿ ಮತ್ತು ಅದರ ಬಾಧೆಯ ಪರಿಹಾರ, ಮೋಹಿನಿಯ ಪ್ರಾದುರ್ಭಾವ - ಇವು ಮುಖ್ಯವಾದ ಉದಾಹರಣೆಗಳು. ಇಂಥ ಪರಮಾತ್ಮನ ಲೀಲೆಗಳನ್ನು ಶ್ರವಣಮಾಡುವದರಿಂದ ದೇವತೆಗಳಿಗೆ ಅಮೃತಪ್ರಾಪ್ತಿಯಿಂದ ಆದ ಸುಖಕ್ಕಿಂತಲೂ ಹೆಚ್ಚಿನ ಸುಖವು ಭಕ್ತನಾದವನಿಗೆ ದೊರೆಯುವದು.

ಇನ್ನು ವೇದಾಂತದ ಸಾರವಾದ ಬ್ರಹ್ಮಾತ್ಮೈಕತ್ವವೆಂಬುದೂ ಇಲ್ಲಿ ರೂಪಕವಾಗಿ ವರ್ಣಿಸಲ್ಪಟ್ಟಿರುವದು. ಇದು ಬಹುಗಹನವಾದ ವಿಚಾರವಾದ್ದರಿಂದಲೂ ಅಧಿಕಾರಿಗಳಿಗೆ ಮಾತ್ರ ತಿಳಿಯತಕ್ಕದ್ದಾದ್ದರಿಂದಲೂ ಇಲ್ಲಿ ಸೂಚಿತವಾಗಿರುವ ತತ್ತ್ವಾರ್ಥವನ್ನು ಬಹುಸಂಕ್ಷೇಪವಾಗಿ ತಿಳಿಸುವೆನು. ''ಪರಮಾತ್ಮನು ಪರಮಾರ್ಥಸತ್ಯನು, ಪರಮಾತ್ಮನಿಗೆ ಹೋಲಿಸಿದರೆ ಮಿಕ್ಕ ಯಾವ ವಸ್ತುವೂ ಸತ್ಯವೆನಿಸಲಾರದು. ಇಂಥ ಪರಮ್ಮಾತನೇ ನಮ್ಮೆಲ್ಲರ ನಿಜವಾದ ಆತ್ಮನು'' ಎಂಬುದೇ ವೇದಾಂತದ ಮುಖ್ಯಸಾರವು. ನಮಗೆಲ್ಲ ಒಂದೊಂದು ಶರೀರವಿರುವದೆಂದೂ ಆಯಾ ಶರೀರಕ್ಕೆ ಒಂದೊಂದು ಆತ್ಮವು ಬೇರೆಯಿರುವದೆಂದೂ ನಾವು ಭಾವಿಸಿರುವೆವಷ್ಟೆ ; ಈ ಭಾವನೆಯಿಂದ ನಮಗೆ ನಮ್ಮದೆಂಬ ಶರೀರದಲ್ಲಿ ಉತ್ಕಟವಾದ ಅಭಿಮಾನವುಂಟಾಗಿರುವದು. ಇದೇ ಅಹಂಕಾರವು. ಈ ಅಹಂಕಾರದಿಂದ ನನ್ನದು ಎಂಬ ಬುದ್ಧಿಯು ಉಂಟಾಗಿರುವದು. ನಾನು ಎಂಬುದು ಶರೀರದ ದೃಷ್ಟಿಯಿಂದ ಉಂಟಾದದ್ದಾದ್ದರಿಂದ ಆ ಶರೀರಕ್ಕೆ ಸಂಬಂಧಪಟ್ಟ ಹೆಂಡಿರುಮಕ್ಕಳು, ಮನೆಮಠ, ಹೊಲಗದ್ದೆ, ಹಣಕಾಸು - ಮುಂತಾದವುಗಳಲ್ಲಿ ನನ್ನದು ಎಂಬ ಬುದ್ಧಿಯು ದೃಢವಾಗಿಬಿಟ್ಟಿದೆ. ಇದೇ ಮಮಕಾರವೆನಿಸುವದು. ಅಹಂಕಾರ, ಮಮಕಾರ - ಇವೆರಡೇ ಲೋಕದಲ್ಲಿ ಆಗುವ ನಮ್ಮ ಎಲ್ಲಾ ಸುಖದುಃಖಗಳಿಗೂ ಕಾರಣವು. ಇದರಿಂದಲೇ ಜೀವರು ಹುಟ್ಟುತ್ತಲೂ ಸಾಯುತ್ತಲೂ ನಾನಾವಿಧವಾದ ಕ್ಲೇಶವನ್ನು ಅನುಭವಿಸುತ್ತಿರುವರು. ಆದರೆ ''ಅತ್ಯುನ್ನತಿಃ ಪತನಹೇತುಃ'' ಎಂಬಂತೆ ಈ ಅಭಿಮಾನಗಳು ಮಿತಿಮೀರಿ ನಾವು ಪಾಪಕ್ಕೆಳಸಿದರೆ ಅಂಥ ಕಾಲದಲ್ಲಿ ದೂರ್ವಾಸರ ಶಾಪದಿಂದ

ಸಂಕಟಪಟ್ಟ ಇಂದ್ರನ ಹಾಗೆ ನಾವೂ ಪಾಪದ ಫಲವನ್ನು ಬಲುವಾಗಿ ಅನುಭವಿಸುವೆವು. ಆಮೇಲೆ ಸಂಸಾರದ ಸಂಕಟಕ್ಕೆ ಬೇಸತ್ತು ಪುಣ್ಯ ವಾಸನೆಯಿಂದ ಬ್ರಹ್ಮನನ್ನು ಮೊರೆಹೊಕ್ಕ ಇಂದ್ರನಂತೆ, ಶುದ್ಧಿಗೊಂಡ ಸಾತ್ತ್ವಿಕಬುದ್ಧಿಯನ್ನು ಅನುಸರಿಸುವೆವು ; ಪರಮಭಕ್ತಿಯಿಂದ ವಿಷ್ಣುವನ್ನು ಮೊರೆಹೊಕ್ಕ ದೇವತೆಗಳಂತೆ ಈಶ್ವರನನ್ನು ಶರಣು ಹೊಗುವೆವು. ಆಮೇಲೆ ಆಕಾಶವಾಣಿಯಿಂದ ಎಚ್ಚತ್ತ ಇಂದ್ರಾದಿಗಳಂತೆ ನಾವೂ ಸದ್ಗುರುವಿನ ಶುಭವಾಣಿಯನ್ನು ಕೇಳಿ ಅದನ್ನು ಮನಸ್ಸಿನಲ್ಲಿಯೇ ಕಡೆದುನೋಡುವೆವು. ಈಶ್ವರನ ದಯೆಯಿಂದ ಅಸುರರೂ ದೇವತೆಗಳ ಕಾರ್ಯಕ್ಕೆ ನೆರವಾದ ಹಾಗೆ ನಮಗೂ ಮನಸ್ಸಿನ ದುಷ್ಟವೃತ್ತಿಗಳೆಲ್ಲ ವಶವಾಗಿ ಬಗೆಬಗೆಯ ಶುಭಸಂಕಲ್ಪಗಳಿಂದಾದ ಸಿದ್ಧಿಗಳು ತಲೆದೋರುವವು. ಕಲ್ಪವೃಕ್ಷ , ಕಾಮಧೇನು - ಮುಂತಾದ ಉತ್ತಮವಸ್ತುಗಳು ಉತ್ಪನ್ನವಾದರೂ ಮುಖ್ಯಫಲವಾದ ಅಮೃತವು ಉತ್ಪತ್ತಿಯಾಗುವವರೆಗೂ ದೇವಾಸುರರು ಸಮುದ್ರವನ್ನು ಕಡೆದಂತೆ ಈ ಸಿದ್ಧಿಗಳಿಗೆ ಬಾಯಿನೀರು ಕರೆಯದೆ ವಿವೇಕವೆಂಬ ಕಡೆಗೋಲಿನಿಂದ ಗುರುವಾಕ್ಯವನ್ನು ಕಡೆಯುತ್ತಿದ್ದರೆ, ಕೊನೆಗೆ ಹಾಲಾಹಲವನ್ನು ನುಂಗಿದ ಶಿವನಂತೆ ನಮಗೆ ಬರುವ ಅಡ್ಡಿಗಳನ್ನೆಲ್ಲಾ ಆ ಪರಮೇಶ್ವರನು ತೊಲಗಿಸುವನು. ಪರಮಾತ್ಮನು ದೇವತೆಗಳಿಗೆ ಕೈಯಾರೆ ಅಮೃತವನ್ನು ಉಣಬಡಿಸಿದಂತೆಯೇ ''ಅಮೃತವಾದ'' ಎಂದರೆ ನಾಶವಿಲ್ಲದ ಮೋಕ್ಷಸುಖವನ್ನು ತಾನೇ ನೀಡುವನು. ಆ ಕಾಲಕ್ಕೆ ಪರಮಾತ್ಮನು ಎಲ್ಲಾ ಶರೀರಗಳಿಗೂ ಆತ್ಮನೆಂದೂ ನಮ್ಮಲ್ಲಿಯೇ ಅಡಗಿದ್ದ ಆತನನ್ನು ಕಾಣದೆ ಸುಮ್ಮಸುಮ್ಮನೆ ಬಳಲಿದೆವೆಂದೂ - ಅಮೃತವನ್ನು ನೋಡಿದ ಮಾತ್ರದಿಂದ ತೃಪ್ತಿಪಡುವ ದೇವತೆಗಳಂತೆ ನಾವು ಎಂದೆಂದಿಗೂ ತೃಪ್ತರಾಗಿಬಿಡುವೆವು. ಅಂದಿನಿಂದ ಈ ಸಂಸಾರದ ಯಾವ ಭಯವೂ ನಮ್ಮನ್ನು ಪೀಡಿಸುವದಿಲ್ಲ. ಇಂಥ ನಿತ್ಯ ಸುಖವನ್ನು ಈ ಗ್ರಂಥವನ್ನು ಓದಿ ದೃಢವ್ರತರಾಗಿ ಯತ್ನಿಸುವ ವಾಚಕರಿಗೆಲ್ಲ ಆ ಪರಮಾತ್ಮನು ಅನುಗ್ರಹಿಸಲಿ !